ಜನಮಿತ್ರ
ಜನಮನದ ಕೈಗನ್ನಡಿ

16 ಡಿಸೆಂಬರ್ ಶುಕ್ರವಾರ 2022

# ಹೊಸ ತಂತ್ರಜ್ಞಾನದಿಂದ ಮಾನವನಿಗೆ ಸಹಾಯ




ಚಿಕ್ಕಮಗಳೂರು: ಕೃತಕ ಬುದ್ಧಿ ಮತ್ತೆ ಹಾಗೂ ಯಂತ್ರ ಕಲಿಕೆಯ ಹೊಸ ತಂತ್ರಜ್ಞಾನವನ್ನು ಮನುಷ್ಯನಿಗೆ ಸಹಾಯಕರಾಗಿ ಉಪಯೋಗಿಸಿಕೊಂಡಲ್ಲಿ ನಾಲ್ಕು ಮಂದಿಯ ಅನುಭವದ ಕೆಲಸವನ್ನು ಯಂತ್ರದ ಮೂಲಕ ಪಡೆಯಲು ಸಹಾಯವಾಗಲಿದೆ ಎಂದು ವಿದ್ಯಾಕೋಶ ಎಜುಕೇಷನ್ ಟೆಕ್ನಾಲಜಿ ಕಂಪನಿಯ ಸ್ಥಾಪಕ ಡಾ.ಅಶೋಕ್‌ರಾವ್ ಹೇಳಿದರು.

ನಗರದ ಆದಿಚುಂಚನಗಿರಿ ಕಾಲೇಜು ಆಶ್ರಯದಲ್ಲಿ ಕೃತಕಜ್ಞಾನ ಮತ್ತು ಗಣಿತ ಶಾಸ್ತ್ರ ಪ್ರತಿಷ್ಠಾನ ಹಾಗೂ ಕೃತಕ ಬುದ್ಧಿ ಮತ್ತೆ ಮತ್ತು ಯಂತ್ರ ಕಲಿಕೆಯ ಕುರಿತ ಕಾರ್ಯಕ್ರಮವನ್ನು ಕಾಲೇಜಿನ ಪಾಲಿಟೆಕ್ನಿಕ್ ಸಭಾಂಗಣದಲ್ಲಿ ಗುರುವಾರ ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ವಿವಿಧ ಸಂಸ್ಥೆಗಳಲ್ಲಿ ಅನುಭವ ಹೊಂದಿ ಕಾರ್ಯನಿರ್ವಹಿಸುವವರ ಸಂಖ್ಯೆ ಕ್ಷಿಣಿಸುತ್ತಿರುವ ಹಿನ್ನೆಲೆಯಲ್ಲಿ ಮುಂದಿನ ಕಾಲಘಟ್ಟಕ್ಕೆ ಯಂತ್ರಗಳಿಗೆ ಸಂಪೂರ್ಣ ಮಾಹಿತಿ ಕೊಡುವ ಮೂಲಕ ಸಹಾಯಕರಾಗಿ ಕಾರ್ಯನಿರ್ವಹಿಸಿಕೊಳ್ಳಬಹುದು ಎಂದರು.

»03

Scanned with Oken Scanner

ಪಿತಾಮಹ

16 ಶುಕ್ರವಾರ, ಡಿಸೆಂಬರ್–2022
16 Friday, December - 2022

# ಮುಂದಿನ ಹೊಸತಂತ್ರಜ್ಞಾನದಿಂದ ಮನುಷ್ಯನಿಗೆ ಸಹಾಯ : ಡಾ॥ ಅಶೋಕ್




ಪಿತಾಮಹ ಸುದ್ದಿ.

ಚಿಕ್ಕಮಗಳೂರು. ಕೃತಕ ಬುದ್ದಿ ಮತ್ತೆ ಹಾಗೂ ಯಂತ್ರ ಕಲಿಕೆಯ ಹೊಸತಂತ್ರಜ್ಞಾನ ವನ್ನು ಮನುಷ್ಯನಿಗೆ ಸಹಾಯಕರಾಗಿ ಉಪಯೋಗಿಸಿಕೊಂಡಲ್ಲಿ ನಾಲ್ಕು ಮಂದಿಯ ಅನುಭವದ ಕೆಲಸವನ್ನು ಯಂತ್ರದ ಮೂಲಕ ಪಡೆಯಲು ಸಹಾಯವಾಗಲಿದೆ ಎಂದು ವಿದ್ಯಾಕೋಶ ಎಜುಕೇಷನ್ ಟೆಕ್ನಾಲಜಿ ಕಂಪನಿಯ ಸ್ಥಾಪಕ ಡಾ.ಅಶೋಕ್ ರಾವ್ ಹೇಳಿದರು.

ನಗರದ ಶ್ರೀ ಆದಿಚುಂಚನಗಿರಿ ಕಾಲೇಜು ಸಂಯುಕ್ತಾಶ್ರಯದಲ್ಲಿ ಕೃತಕ ಜ್ಞಾನ ಮತ್ತು ಬುದ್ದಿ ಮತ್ತೆ ಮತ್ತು ಯಂತ್ರ ಕಲಿಕೆಯ ಕುರಿತ ಕಾರ್ಯಕ್ರಮವನ್ನು ಕಾಲೇಜಿನ ಪಾಲಿಟೆಕ್ನಿಕ್ ಸಭಾಂಗಣದಲ್ಲಿ ಗುರುವಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಪ್ರಸ್ತುತ ದಿನಗಳಲ್ಲಿ ವಿವಿಧ ಸಂಸ್ಥೆಗಳಲ್ಲಿ ಅನುಭವ ಹೊಂದಿ ಕಾರ್ಯನಿರ್ವಹಿಸುವವರ ಸಂಖ್ಯೆ ಕ್ಷೀಣಿಸುತ್ತಿರುವ ಹಿನ್ನಲೆಯಲ್ಲಿ ಮುಂದಿನ ಕಾಲಘಟ್ಟಕ್ಕೆ ಯಂತ್ರಗಳಿಗೆ ಸಂಪೂರ್ಣ ಮಾಹಿತಿಗಳನ್ನು ಕೊಡುವ ಮುಖಾಂತರ ಸಹಾಯಕರಾಗಿ ಕಾರ್ಯನಿರ್ವಹಿಸಿಕೊಳ್ಳಬಹುದು ಎಂದು [illegible]

ಹಾಗೂ ಮಾಹಿತಿಗಳು ಲಭಿಸುವುದು ಕಷ್ಟಸಾಧ್ಯವಾಗಿರುವ ಹಿನ್ನೆಲೆಯಲ್ಲಿ ಈ ಕಲಿಕೆಯನ್ನು ಎಲ್ಲೆಡೆ ಬೆಳೆಸಲು ಆಯಾ ಕಾಲೇಜುಗಳು ತಯಾರಿಗಳು ನಡೆಸುತ್ತಿವೆ. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕಾಳಜಿ ವಹಿಸಿ ಸೂಕ್ಷ್ಮತೆ ಹಾಗೂ ಶ್ರದ್ಧೆಯಿಂದ ಅಭ್ಯಾಸಿಸಿದ್ದಲ್ಲಿ ಮಾತ್ರ ಮುಂದೆ ಉನ್ನತಮಟ್ಟದ ಉದ್ಯೋಗವು ಲಭಿಸಲಿದೆ ಎಂದರು.

ಎಐಟಿ ಕಾಲೇಜು ಪ್ರಾಂಶುಪಾಲ ಡಾ॥ ಸಿ.ಟಿ.ಜಯದೇವ ಮಾತನಾಡಿ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರವನ್ನು ಗಮನದಲ್ಲಿಟ್ಟುಕೊಂಡು ಎಐಟಿ ಕಾಲೇಜಿನಲ್ಲಿ ಕಳೆದ ವರ್ಷದಿಂದ ಕೃತಕ ಬುದ್ದಿ ಮತ್ತೆ ಹಾಗೂ ಯಂತ್ರ ಕಲಿಕೆಯ ತರಬೇತಿಯನ್ನು ಪ್ರಾರಂಭಿಸಲಾಗಿದ್ದು ವಿದ್ಯಾರ್ಥಿಗಳು ಈ ಕಲಿಕೆಯಲ್ಲಿ ಹೆಚ್ಚು ಜ್ಞಾನವನ್ನು ಪಡೆದುಕೊಳ್ಳುವ ಅವಶ್ಯವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಐಎಂಎಲ್‌ನ ವಿಭಾಗದ ಮುಖ್ಯಸ್ಥೆ ಡಾ. ಎಂ.ಆರ್.ಸುನೀತಾ, ಸಹಾಯಕ ಪ್ರಾಧ್ಯಾಪಕ ವಿವೇಕಾನಂದ, ಡಾ.ಶ್ರೀಕಾಂತ್ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

Scanned with Oken Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
ಮಂಗಳವಾರ 13 ಡಿಸೆಂಬರ್ 2022
13 DECEMBER 2022



### ಹಿರೇಮಗಳೂರು ಕಣ್ಣನ್ ಸಲಹೆ | ಎಐಟಿ ಹಳೇ ವಿದ್ಯಾರ್ಥಿಗಳ ಸಮಾವೇಶದ ಉದ್ಘಾಟನೆ

# ಎಲ್ಲಿಯೇ ಇದ್ದರೂ ಮಾತೃಭಾಷೆ ಮರೆಯಬಾರದು

**ಚಿಕ್ಕಮಗಳೂರು:** ಜೀವನದಲ್ಲಿ ಸಿಗುವ ಸಂತೋಷ, ಸಂಭ್ರಮ, ಹಾಸ್ಯವನ್ನು ಹಣ ಕೊಟ್ಟು ಕೊಳ್ಳಬೇಕಿಲ್ಲ. ಅನುಭವಿಸಿಯೇ ತೀರಬೇಕು. ಅದುವೇ ಜೀವನ. ಇಲ್ಲವಾದರೆ ಬದುಕು ನಶ್ವರ ಎಂದು ಕನ್ನಡ ಪೂಜಾರಿ ಹಿರೇಮಗಳೂರು ಕಣ್ಣನ್ ಹೇಳಿದರು.

ನಗರದ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಭಾನುವಾರ ಹಳೆಯ ವಿದ್ಯಾರ್ಥಿಗಳ ಸಮಾವೇಶ ಉದ್ಘಾಟಿಸಿ ಮಾತನಾಡಿ, ಸಂಸಾರದಲ್ಲಿ ಸಂಸ್ಕಾರವಿರಬೇಕು ಮತ್ತು ಏನೇ ತಪ್ಪುಗಳು ನಡೆದರೂ ನಾಲಗೆಯಲ್ಲಿರಬೇಕು ಹೊರತು ಮಿದುಳಲ್ಲಿ ಇರಬಾರದು. ಮನಸ್ಸನ್ನು ಉದ್ಯಾನದಂತೆ ಮಾಡಿಕೊಳ್ಳಬೇಕು. ಸಂತೋಷವಾಗಿ ನಗುನಗುತಾ ಜೀವನ ಸಾಗಿಸಬೇಕು ಎಂದರು.

ಎಲ್ಲೇ ಇದ್ದರೂ ಸಹ ಮಾತೃಭಾಷೆಯನ್ನು ಮರೆಯಬಾರದು. ಹಸನ್ಮುಖಿ, ಸದಾ ಸುಖಿಯಾಗಿ



ವಿಜಯವಾಣಿ ಚಿತ್ರ

ಚಿಕ್ಕಮಗಳೂರಿನ ಎಐಟಿಯಲ್ಲಿ ಹಳೆಯ ವಿದ್ಯಾರ್ಥಿಗಳ ಸಮಾವೇಶವನ್ನು ಕನ್ನಡ ಪೂಜಾರಿ ಹಿರೇಮಗಳೂರು ಕಣ್ಣನ್ ಉದ್ಘಾಟಿಸಿದರು. ಡಾ. ಸಿ.ಕೆ.ಸುಬ್ಬರಾಯ, ಡಾ. ಸಿ.ಟಿ.ಜಯದೇವ, ಡಾ. ಜಿ.ಎಂ. ಸತ್ಯನಾರಾಯಣ, ಕೆ.ಎಂ.ಕವಿತಾ ಇತರರಿದ್ದರು.

ತಮಗೆ ಶಿಕ್ಷಣವನ್ನು ದಯಪಾಲಿಸಿದ ಶಿಕ್ಷಕರು, ಪ್ರಾಚಾರ್ಯರು ಮತ್ತು ಈ ಸುಂದರ ಪರಿಸರವನ್ನು ಮರೆಯದೆ ...

ಎಐಟಿಯ ಹಳೆಯ ವಿದ್ಯಾರ್ಥಿನಿ ನಾಗಶ್ರೀ ತ್ಯಾಗರಾಜ್ ಅವರೊಂದಿಗೆ ಮುದ್ದುರಾಮನ ...

ಪ್ರಸ್ತುತ ಸಂಸಾರದಲ್ಲಿನ ಸ್ವಾರಸ್ಯಕರ ಅಂಶಗಳನ್ನು ವಿಶ್ಲೇಷಿಸಿ ಮನರಂಜಿಸಿದರು.

ಪ್ರಾಚಾರ್ಯ ಡಾ. ಸಿ.ಟಿ.ಜಯದೇವ ಮಾತನಾಡಿ, ಹಿರಿಯ ವಿದ್ಯಾರ್ಥಿಗಳು ನಮ್ಮ ಸಂಸ್ಥೆಯ ಆಸ್ತಿ ಇದ್ದಂತೆ. ನಮ್ಮಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಇಂದಿನ ಮತ್ತು ಮುಂಬರುವ ನೂತನ ತಂತ್ರಜ್ಞಾನದ ಸವಾಲುಗಳನ್ನು ಎದುರಿಸಲು ಮತ್ತು ನಿರ್ದಿಷ್ಟ ಪಥದಲ್ಲಿ ಮುನ್ನಡೆಯಲು ಹಿರಿಯರು ಮಾರ್ಗದರ್ಶನ ನೀಡಬೇಕು ಎಂದು ಹೇಳಿದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಸಚಿವ ಡಾ. ಸಿ.ಕೆ.ಸುಬ್ಬರಾಯ ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಜಿ.ಎಂ. ಸತ್ಯನಾರಾಯಣ, ಡಾ. ಧರ್ಮಾಧಿಕಾರಿ, ಪ್ರಾಧ್ಯಾಪಕಿ ಕೆ.ಎಂ.ಕವಿತಾ, ಎಂ.ಆರ್.ಸುನೀತಾ, ವಿದ್ಯಾರ್ಥಿಗಳಾದ ರವೀಂದ್ರ,

Scanned with Oken Scanner

**ಕನ್ನಡಪ್ರಭ**

ಮಂಗಳವಾರ 13.12.2022

# ಹಾಸ್ಯ ಹಣಕ್ಕೆ ಕೊಳ್ಳಬೇಕಿಲ್ಲ, ಅನುಭವಿಸಬೇಕು

## ಎಐಟಿ ಕಾಲೇಜಿನಲ್ಲಿ ಹಳೆ ವಿದ್ಯಾರ್ಥಿಗಳ ಸಮಾವೇಶದಲ್ಲಿ 'ಕನ್ನಡ ಪೂಜಾರಿ' ಹಿರೇಮಗಳೂರು ಕಣ್ಣನ್ ಅಭಿಮತ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಜೀವನದಲ್ಲಿ ಸಿಗುವ ಸಂತೋಷ, ಸಂಭ್ರಮ, ಹಾಸ್ಯವನ್ನು ಹಣ ಕೊಟ್ಟು ಕೊಳ್ಳಬೇಕಿಲ್ಲ, ಅನುಭವಿಸಿಯೇ ತೀರಬೇಕು. ಅದುವೇ ಜೀವನ, ಇಲ್ಲವಾದರೆ ಬದುಕು ನಶ್ವರ ಎಂದು ಖ್ಯಾತ ವಾಗ್ಮಿ, 'ಕನ್ನಡ ಪೂಜಾರಿ' ಹಿರೇಮಗಳೂರು ಕಣ್ಣನ್ ಹೇಳಿದರು.

ನಗರದ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಹಳೆಯ ವಿದ್ಯಾರ್ಥಿಗಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಸಾರದಲ್ಲಿ ಸಂಸ್ಕಾರ ಇರಬೇಕು ಮತ್ತು ಏನೇ ತಪ್ಪುಗಳು ನಡೆದರೂ ನಾಲಿಗೆಯಲ್ಲಿರಬೇಕು ಹೊರತು, ಮೆದುಳಲ್ಲಿ ಇರಬಾರದು. ಮನಸ್ಸನ್ನು ಉದ್ಯಾನವನದಂತೆ ಮಾಡಿಕೊಳ್ಳಬೇಕು. ಸಂತೋಷವಾಗಿ ನಗುನಗುತ್ತಾ ಜೀವನ ಸಾಗಿಸಬೇಕು ಎಂದರು.

ಈ ಸಮಾವೇಶಕ್ಕಾಗಿ ವಿದೇಶದಿಂದ ಸ್ವದೇಶಕ್ಕೆ ಆಗಮಿಸಿದ ತಮಗೆ ಅಭಿನಂದನೆಗಳು. ಎಲ್ಲಾದರು ಇದ್ದರೂ ಸಹಾ ಮಾತೃಭಾಷೆಯನ್ನು ಮರೆಯಬಾರದು. ಹಸನ್ಮುಖಿಯಾಗಿ ಸದಾ ಸುಖಿಯಾಗಿ ತಮಗೆ ಶಿಕ್ಷಣವನ್ನು ದಯಪಾಲಿಸಿದ ಶಿಕ್ಷಕರು, ಪ್ರಾಂಶುಪಾಲರು ಮತ್ತು ಈ ಸುಂದರ ಪರಿಸರವನ್ನು ಮರೆಯದೆ ಸುಖವಾಗಿರಿ ಎಂದು ಹಾರೈಸಿದರು.



ಚಿಕ್ಕಮಗಳೂರಿನ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಹಳೆಯ ವಿದ್ಯಾರ್ಥಿಗಳ ಸಮಾವೇಶವನ್ನು ಹಿರೇಮಗಳೂರು ಕಣ್ಣನ್ ಉದ್ಘಾಟಿಸಿದರು. ಡಾ. ಸಿ.ಕೆ. ಸುಬ್ರಾಯ, ಡಾ. ಸಿ.ಟಿ. ಜಯದೇವ್ ಇದ್ದಾರೆ.

ಎಐಟಿಯ ಹಳೆಯ ವಿದ್ಯಾರ್ಥಿನಿ ಚಿಕ್ಕಮಗಳೂರಿನ ಪ್ರಖ್ಯಾತ ಸಾಹಿತಿ ನಾಗಶ್ರೀ ತ್ಯಾಗರಾಜ್ ಅವರ ಜೊತೆಗೂಡಿ ಮುದ್ದುರಾಮನ ಪದಗಳಿಂದ ವ್ಯಾಖ್ಯಾನವನ್ನು ನಡೆಸಿ ಜುಗಲ್ಬಂದಿಸಹಿತ ಪ್ರಸ್ತುತ ಸಂಸಾರದಲ್ಲಿನ ಸ್ವಾರಸ್ಯಕರ ಅಂಶಗಳನ್ನು ವಿಶ್ಲೇಷಿಸಿ ಸಭಿಕರ ಮನರಂಜಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಸಿ.ಟಿ.ಜಯದೇವ್ ಮಾತನಾಡಿ, ಹಳೆಯ ವಿದ್ಯಾರ್ಥಿಗಳು ನಮ್ಮ ಸಂಸ್ಥೆಯ ಆಸ್ತಿ ಇದ್ದ ಹಾಗೆ. ತಾವುಗಳು ನಮ್ಮಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಇಂದಿನ ಮತ್ತು ಮುಂದಿನ ನೂತನ ತಂತ್ರಜ್ಞಾನದ ಸವಾಲುಗಳನ್ನು ಮತ್ತು ಹೊಸ ಹೊಸ ಆವಿಷ್ಕಾರಗಳನ್ನು ಎದುರಿಸಲು ಮತ್ತು ನಿರ್ದಿಷ್ಟವಾದ ಪಥದಲ್ಲಿ ಮುನ್ನಡೆಯಲು [illegible] ಮತ್ತು ಮಾರ್ಗದರ್ಶನ ನೀಡಬೇಕು ಎಂದು ಕರೆ ನೀಡಿದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಸಚಿವ ಡಾ. ಸಿ.ಕೆ. ಸುಬ್ಬರಾಯ ಮಾತನಾಡಿ, 25 ವರ್ಷಗಳ ಹಿಂದೆ ಇಲ್ಲಿ ಪದವಿ ಪಡೆದ ಪ್ರತಿಭಾವಂತ ಎಂಜಿನಿಯರಿಂಗ್ ವಿದ್ಯಾರ್ಥಿಗಳು ದೇಶ-ವಿದೇಶಗಳಲ್ಲಿ ಮತ್ತು [illegible] ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯಾರ್ಥಿಗಳಿಂದ ನಾವುಗಳು ಕಲಿಯುವುದು ಸಾಕಷ್ಟಿದೆ. [illegible] ಸಾಧನೆಯ ಪರಿವರ್ತನೆಗಳು [illegible]

[illegible]

ಜನಮಿತ್ರ
ಜನಮನದ ಕೈಗನ್ನಡಿ

13 ಡಿಸೆಂಬರ್ ಮಂಗಳವಾರ 2022

# ಸಂಸಾರದಲ್ಲಿ ಸಂಸ್ಕಾರವಿರಬೇಕು: ಕಣ್ಣನ್

## ಕಾಲೇಜು ದಿನಗಳನ್ನು ಮೆಲುಕು ಹಾಕಿದ ಹಿರಿಯ ವಿದ್ಯಾರ್ಥಿಗಳು



**ಚಿಕ್ಕಮಗಳೂರು:** ಸಂಸಾರದಲ್ಲಿ ಸಂಸ್ಕಾರವಿರಬೇಕು. ಏನೇ ತಪ್ಪುಗಳು ನಡೆದರೂ ನಾಲಿಗೆಯಲ್ಲಿರಬೇಕೆ ಹೊರತು ಮೆದುಳಿನಲ್ಲಿ ಇರಬಾರದು ಎಂದು ಕನ್ನಡಪೂಜಾರಿ ಹಿರೇಮಗಳೂರು ಕಣ್ಣನ್ ತಿಳಿಸಿದರು.

ನಗರದ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಹಳೆಯ ವಿದ್ಯಾರ್ಥಿಗಳ ಸಮಾವೇಶ ಉದ್ಘಾಟಿಸಿ ಮಾತನಾಡಿ, ಜೀವನದಲ್ಲಿ ಸಿಗುವ ಸಂತೋಷ, ಸಂಭ್ರಮ, ಹಾಸ್ಯವನ್ನು ಹಣ ಕೊಟ್ಟು ಕೊಳ್ಳಬೇಕಿಲ್ಲ ಅನುಭವಿಸಿಯೇ ತೀರಬೇಕು. ಅದುವೇ ಜೀವನ ಇಲ್ಲವಾದರೆ ಬದುಕು ನಶ್ವರವೆಂದರು.

ಮನಸ್ಸನ್ನು ಉದ್ಯಾನವನದಂತೆ ಮಾಡಿಕೊಳ್ಳಬೇಕು. ಸಂತೋಷವಾಗಿ ನಗುನಗುತ್ತಾ ಜೀವನ ಸಾಗಿಸಬೇಕು. ಎಲ್ಲಾದರು ಇದ್ದರೂ ಸಹಾ ಮಾತೃ ಭಾಷೆಯನ್ನು ಮರೆಯಬಾರದು. ಹಸನ್ಮುಖಿಯಾಗಿ ಸದಾ ಸುಖಿಯಾಗಿ ತಮಗೆ ಶಿಕ್ಷಣವನ್ನು ದಯಪಾಲಿಸಿದ ಶಿಕ್ಷಕರು, ಪ್ರಾಂಶುಪಾಲರು ಮತ್ತು ಈ ಸುಂದರ ಪರಿಸರವನ್ನು ಮರೆಯದಿರುವಂತೆ ಸಲಹೆ ನೀಡಿದರು.

ಅಧ್ಯಕ್ಷತೆವಹಿಸಿ ಮಾತನಾಡಿದ ಆದಿಚುಂಚನಗಿರಿ ತಾಂತ್ರಿಕ ಮಹಾ ವಿದ್ಯಾಲಯದ ಪ್ರಿನ್ಸಿಪಾಲ್ ಡಾ. ಸಿ.ಟಿ.ಜಯದೇವ, ಹಿರಿಯ ವಿದ್ಯಾರ್ಥಿಗಳು ನಮ್ಮ ಸಂಸ್ಥೆಯ ಆಸ್ತಿ ಇದ್ದಂತೆ, ತಾವುಗಳು ನಮ್ಮಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಇಂದಿನ ಮತ್ತು ಮುಂಬರುವ ನೂತನ ತಂತ್ರಜ್ಞಾನದ ಸವಾಲುಗಳನ್ನು ಮತ್ತು ಹೊಸ ಹೊಸ ಆವಿಷ್ಕಾರಗಳನ್ನು ಎದುರಿಸಲು ಮತ್ತು ನಿರ್ದಿಷ್ಟವಾದ ಪಥದಲ್ಲಿ ಮುನ್ನಡೆಯಲು ಉತ್ತೇಜನ ಮತ್ತು ಮಾರ್ಗದರ್ಶನ ನೀಡಬೇಕೆಂದರು.

ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದ ನಿರ್ದೇಶಕರು ಮತ್ತು ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಸಚಿವ ಡಾ.ಸಿ.ಕೆ. ಸುಬ್ಬರಾಯ ಮಾತನಾಡಿ, 25 ವರ್ಷದ ಹಿಂದೆ ಇಲ್ಲಿ ಪದವಿ ಪಡೆದ ಪ್ರತಿಭಾವಂತ ಇಂಜಿನಿಯರಿಂಗ್ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಮತ್ತು ಇತರೆ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯಾರ್ಥಿಗಳಿಂದ ನಾವುಗಳು ಕಲಿಯುವುದು ಸಾಕಷ್ಟಿದೆ ಎಂದು ನುಡಿದರು.

ಬದುಕಿನಲ್ಲಿ ಸಾಧನೆಯ ಪರಿವರ್ತನೆ ಬೇಕು, ಒಳ್ಳೆಯ ಮನಸು ಮತ್ತು ಮುಖ್ಯವಾಗಿ ವಿಶಾಲ ಹೃದಯವಂತಿಕೆ ಇರಬೇಕು. ದೇಶವನ್ನು ಕಟ್ಟುವ ಮತ್ತು ಯಶಸ್ವಿಯಾಗಿಸಾಗುವ ಸಾಧನೆಗಳಾಗಬೇಕು ಎಂದು ತಿಳಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
ಸೋಮವಾರ 12 ಡಿಸೆಂಬರ್ 2022
12 DECEMBER 2022

# ಮಕ್ಕಳಿಗೆ ವಿದ್ಯೆ, ಸಂಸ್ಕಾರ ಕಲಿಸಿ

ಚಿಕ್ಕಮಗಳೂರು: ವಿನಯ, ವಿವೇಕ ಹಾಗೂ ವಿಧೇಯತೆ ಎಂಬ ಮೂರು ವಿಶೇಷ ಗುಣಗಳನ್ನು ಶಿಕ್ಷಕರು, ವಿದ್ಯಾರ್ಥಿಗಳು ಬದುಕಿನಲ್ಲಿ ಅಳವಡಿಸಿಕೊಂಡರೆ ಮಾತ್ರ ಉನ್ನತ ಸಾಧನೆ ಮಾಡಲು ಸಾಧ್ಯ ಎಂದು ಡಿಡಿಪಿಯು ಪುಟ್ಟನಾಯ್ಕ ಹೇಳಿದರು.

ನಗರದ ಹೌಸಿಂಗ್ ಬೋರ್ಡ್ ಬಿಜಿಎಸ್ ಕ್ಯಾಂಪಸ್‌ನ ಶ್ರೀ ಮಂಜುನಾಥೇಶ್ವರ ಆದಿಚುಂಚನಗಿರಿ ಪ್ರೌಢಶಾಲೆಯಲ್ಲಿ ಶನಿವಾರ ಚುಂಚೋತ್ಸವ-2022ರ ಪ್ರತಿಭಾ ಪುರಸ್ಕಾರ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸ್ವಾಮಿ ವಿವೇಕಾನಂದ, ಸರ್ ಎಂ.ವಿಶ್ವೇಶ್ವರಯ್ಯ, ಮಹಾತ್ಮ ಗಾಂಧಿ ಮುಂತಾದ ಸಾಧಕರು ಮೇಲಿನ ಗುಣಗಳನ್ನು ಅಳವಡಿಸಿಕೊಂಡು ಜನಮನ್ನಣೆ ಪಡೆದಿದ್ದಾರೆ. ಇಂದಿನ ಯುವ ಪೀಳಿಗೆಯು ಅಂಥವರ ಸಾಲಿಗೆ ಸೇರ್ಪಡೆಯಾಗಲು ಪ್ರಯತ್ನಿಸಬೇಕು. ಮಕ್ಕಳು ಮೊದಲು ಸಂಸ್ಕಾರ ಪಡೆದುಕೊಳ್ಳುವುದೇ ಪಾಲಕರಿಂದ. ಬಾಲ್ಯದಿಂದಲೇ ಮಕ್ಕಳಿಗೆ ಸಾಧಕರ ಜೀವನ ಚರಿತ್ರೆಯನ್ನು ತಿಳಿಸಬೇಕು ಎಂದರು.

ಬಿಇಒ ಎಸ್.ಆರ್.ಮಂಜುನಾಥ್ ಮಾತನಾಡಿ, ಶಿಕ್ಷಣ ಪಡೆಯುವ ಜತೆಗೆ ಕ್ರೀಡಾಸಕ್ತಿ ಬೆಳೆಸಿಕೊಂಡಲ್ಲಿ ಆರೋಗ್ಯವಾಗಿ ಬೆಳೆಯಲು ಸಾಧ್ಯ. ಮಕ್ಕಳು ಕ್ರಿಯಾಶೀಲರಾಗಿ ಕ್ರೀಡೆಯಲ್ಲಿ ಪಾಲ್ಗೊಂಡು ಪ್ರಶಸ್ತಿ ಗಳಿಸಿರುವುದು ಸಂತಸದ ವಿಷಯ ಎಂದು ಹೇಳಿದರು.

ಪ್ರಾಚಾರ್ಯ ಜೆ.ಜಿ.ಸುರೇಂದ್ರ ಮಾತನಾಡಿ, ಕ್ರೀಡೆಯಲ್ಲಿ ಸೋಲು-ಗೆಲುವು ಸಾಮಾನ್ಯ. ಹಾಗಾಗಿ ವಿದ್ಯಾರ್ಥಿಗಳ ಭಾಗವಹಿಸುವಿಕೆ ಮಾತ್ರ ಮುಖ್ಯ. ಗೆಲುವು ಕಂಡೊಡನೆ ಬೀಗಬಾರದು. ಸೋಲಾದವರು ಎಂದಿಗೂ ಪ್ರಯತ್ನ ಕೈಬಿಡಬಾರದು ಎಂದರು.

ಹೆಚ್ಚು ಅಂಕಗಳಿದವರಿಗೆ ಪ್ರತಿಭಾ ಪುರಸ್ಕಾರ, ಕ್ರೀಡಾ ಸಾಧಕರಿಗೆ ಬಹುಮಾನ ವಿತರಿಸಲಾಯಿತು. ನಗರಸಭಾ ಸದಸ್ಯೆ ಕವಿತಾ ಶೇಖರ್, ಎಐಟಿ ಪ್ರಾಚಾರ್ಯ ಡಾ. ಸಿ.ಟಿ.ಜಯದೇವ್, ಪ್ರಾಚಾರ್ಯರ ಸಂಘದ ಅಧ್ಯಕ್ಷ ಇಂದ್ರೇಶ್, ಮುಖ್ಯ ಶಿಕ್ಷಕ ಜಿ.ಆರ್. ಚಂದ್ರಶೇಖರ್, ಶಿವಾನಿ, ಪ್ರಭಾಮಣಿ ಇದ್ದರು.




ವಿಜಯವಾಣಿ ಚಿತ್ರ

ಚುಂಚೋತ್ಸವ-2022ರ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಡಿಡಿಪಿಯು ಪುಟ್ಟನಾಯ್ಕ ಉದ್ಘಾಟಿಸಿದರು. ಮಂಜುನಾಥ್, ಜೆ.ಜಿ.ಸುರೇಂದ್ರ, ಕವಿತಾ ಶೇಖರ್, ಡಾ. ಸಿ.ಟಿ.ಜಯದೇವ್ ಇದ್ದರು.

Scanned with Oken Scanner

ವಿಜಯ ಕರ್ನಾಟಕ
ಮಂಗಳವಾರ,13 ಡಿಸೆಂಬರ್ 2022

# ಶಿಕ್ಷಣದಲ್ಲಿ ಜಾತಿ, ಧರ್ಮದ ಭೇದವಿಲ್ಲ




ಚಿಕ್ಕಮಗಳೂರಿನ ಬಿಜಿಎಸ್ ಕ್ಯಾಂಪಸ್‌ನಲ್ಲಿ ಏರ್ಪಡಿಸಿದ್ದ ಚುಂಚೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಭಾವಚಿತ್ರಕ್ಕೆ ಶ್ರೀ ಗುಣನಾಥ ಸ್ವಾಮೀಜಿ ಪುಷ್ಪಾರ್ಚನೆ ಮಾಡಿದರು.

**ವಿಕ ಸುದ್ದಿಲೋಕ** ಚಿಕ್ಕಮಗಳೂರು

ಯಾವುದೇ ಜಾತಿ, ಧರ್ಮ ಹಾಗೂ ಮೇಲು-ಕೀಳು ಎಂಬ ಭೇದಭಾವ ತೋರದೆ ಎಲ್ಲರನ್ನು ಒಂದೇ ಭಾವನೆಯಿಂದ ಕಾಣುವುದು ಶಾಲೆಗಳ ವಿಶೇಷತೆ ಎಂದು ಆದಿಚುಂಚನಗಿರಿ ಶೃಂಗೇರಿ ಶಾಖಾ ಮಠದ ಶ್ರೀ ಗುಣನಾಥ ಸ್ವಾಮೀಜಿ ಹೇಳಿದರು.

ನಗರದ ಬಿಜಿಎಸ್ ಕ್ಯಾಂಪಸ್‌ನಲ್ಲಿ ಶ್ರೀ ಮಂಜುನಾಥೇಶ್ವರ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಶಾಲಾ ಕಾಲೇಜುಗಳ ಸಾಂಸ್ಕೃತಿಕ ವೈಭವ ಚುಂಚೋತ್ಸವ ಹಾಗೂ ಹಿರಿಯ ವಿದ್ಯಾರ್ಥಿಗಳ ಸಂಘ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಬಿಜಿಎಸ್ ಶಾಲೆ ಗ್ರಾಮೀಣ ಪ್ರದೇಶದ ಮಕ್ಕಳನ್ನು ಗುರುತಿಸಿ ನೈತಿಕ ಹಾಗೂ ಮೌಲ್ಯಧಾರಿತ ಶಿಕ್ಷಣವನ್ನು ನೀಡುವುದರ ಜತೆಗೆ ಪ್ರತಿಭೆಯನ್ನು ಅನಾವರಣಕ್ಕೆ ಚುಂಚೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ ಎಂದರು.

ಬಿಜಿಎಸ್ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಜೆ.ಜಿ.ಸುರೇಂದ್ರ ಮಾತನಾಡಿ, ಕಳೆದ ವರ್ಷ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸ್ವಾಮೀಜಿ ನೇತೃತ್ವದಲ್ಲಿ ಗೌರವಿಸುತ್ತಿರುವುದು ಸಂತಸ ತಂದಿದೆ ಎಂದರು.


ವಿದ್ಯಾರ್ಥಿಗಳಿಂದ ಯಕ್ಷಗಾನ, ಭರತನಾಟ್ಯ, ಕುಚುಪುಡಿ ನೃತ್ಯ ಹಾಗೂ ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಅವರ ಗೀತೆಗಳಿಗೆ ನೃತ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಆದಿಚುಂಚನಗಿರಿ ಪ್ರೌಢಶಾಲೆ ಮುಖ್ಯಶಿಕ್ಷಕ ಜಿ. ಆರ್.ಚಂದ್ರಶೇಖರ್, ಶಿಕ್ಷಕರು, ಪೋಷಕರು, ಹಳೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Scanned with Oken Scanner

13 ಮಂಗಳವಾರ, ಡಿಸೆಂಬರ್ 2022

# ಶಿಕ್ಷಣದಲ್ಲಿ ಜಾತಿ, ಧರ್ಮದ ಬೇಧವಿಲ್ಲ : ಗುಣನಾಥ ಶ್ರೀ



ಪಿತಾಮಹ ಸುದ್ದಿ.

ಚಿಕ್ಕಮಗಳೂರು. ಮಕ್ಕಳ ನೈತಿಕ ಶಿಕ್ಷಣದಲ್ಲಿಯಾವುದೇಜಾತಿ,ಧರ್ಮಹಾಗೂ ಮೇಲು-ಕೀಳು ಎಂಬ ಭೇಧಬಾವವಿಲ್ಲದೇ ಎಲ್ಲರನ್ನು ಒಂದೇ ಭಾವನೆಯಿಂದ ಕಾಣುವುದೇ ಶಾಲೆಗಳ ಲ್ಲಿರುವ ವಿಶೇಷತೆ ಎಂದು ಶ್ರೀ ಆದಿಚುಂಚನಗಿರಿ ಶೃಂಗೇರಿ ಶಾಖಾ ಮಠದ ಶ್ರೀ ಗುಣನಾಥ ಸ್ವಾಮೀಜಿ ಹೇಳಿದರು.

ನಗರದ ಹೌಸಿಂಗ್ ಬೋರ್ಡ್ ಬಿಜಿಎಸ್ ಕ್ಯಾಂಪಸ್‌ನಲ್ಲಿ ಶ್ರೀ ಮಂಜುನಾಥೇಶ್ವರ ಪ್ರೌಢಶಾಲೆಯ ಚುಂಚೋತ್ಸವ-2022ರ ಶಾಲಾ ಕಾಲೇಜುಗಳ ಸಾಂಸ್ಕೃತಿಕ ವೈಭವ ಹಾಗೂ ಹಿರಿಯ ವಿದ್ಯಾರ್ಥಿ ಸಂಘದ ಉದ್ಘಾಟನೆಯನ್ನು ಶನಿವಾರ ಸಂಜೆ ನೆರವೇರಿಸಿ ಅವರು ಆರ್ಶೀವಚನ ನೀಡುತ್ತಿದ್ದರು.


ಬಿಜಿಎಸ್ ಶಾಲೆಯು ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳನ್ನು ಗುರುತಿಸಿ ನೈತಿಕ ಹಾಗೂ ಮೌಲ್ಯಧಾರಿತ ಶಿಕ್ಷಣವನ್ನು ನೀಡುವುದರೊಂದಿಗೆ ಮಕ್ಕಳಲ್ಲಿರುವ ವ್ಯಾಸಂಗದ ಪ್ರತಿಭೆಯನ್ನು ಹೊರ ಹೊಮ್ಮಿಸುವ ಮೂಲಕ ಅಧಿಕ ಅಂಕಗಳನ್ನು ಗಳಿಸಲು ಶ್ರಮವಹಿಸಿ ಮುಂದಿನ ಜೀವನಕ್ಕೆ ದಾರಿ ಮಾಡಿಕೊಡುವ ಕಾಯಕದಲ್ಲಿ ತೊಡಗಿದೆ ಎಂದು ತಿಳಿಸಿದರು.

ಕೊರೊನಾದಿಂದಾಗಿ ಕಳೆದ ಎರಡು ವರ್ಷಗಳ ಹಿಂದೆ ವಿದ್ಯಾರ್ಥಿಗಳಿಗೆ ಶಾಲೆ, ಪಾಠ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಲಾಗಿತ್ತು. ತದ ನಂತರ ಸೋಂಕು ಕಡಿಮೆಯಾದ ಹಿನ್ನೆಲೆಯಲ್ಲಿ ಬಿಜಿಎಸ್ ಶಾಲೆಯ ಮಕ್ಕಳಿಗೆ ವಿದ್ಯಾಭ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಕ್ರೀಡಾಸಕ್ತಿಯ ಕಾರ್ಯ ಚಟುವಟಿಕೆಯನ್ನು ಮರುಸೃಷ್ಟಿಸುವ ಮೂಲಕ ಅನುಕೂಲ ಕಲ್ಪಿಸಲಾಗಿದೆ ಎಂದರು. ಇದೇ ವೇಳೆ ಶಾಲಾ ಮಕ್ಕಳಿಂದ ಯಕ್ಷಗಾನ, ಭರತನಾಟ್ಯ, ಕುಚುಪುಡಿ, ಡ್ಯಾನ್ಸ್ ಹಾಗೂ ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಅವರ ಗೀತೆಗಳಿಗೆ ನೃತ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಈ ಸಂದರ್ಭದಲ್ಲಿ ಶ್ರೀ ಆದಿಚುಂಚನಗಿರಿ ಪ್ರೌಢಶಾಲೆ ಜಿ.ಆರ್.ಚಂದ್ರಶೇಖರ್, ಶಾಲಾ ಶಿಕ್ಷಕರು, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಹಾಗೂ ಪೋಷಕರು, ಶಾಲೆಯ ಹಳೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಿದ್ಯಾರ್ಥಿ ಶುಭ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಶಿಕ್ಷಕಿ ಪಲ್ಲವಿ ನಿರೂಪಿಸಿ, ವಂದಿಸಿದರು.

Scanned with Oken Scanner

# ಶಿಕ್ಷಣದಲ್ಲಿ ಜಾತಿ-ಧರ್ಮದ ಬೇಧವಿಲ್ಲ: ಸ್ವಾಮೀಜಿ



**ಚಿಕ್ಕಮಗಳೂರು:** ಮಕ್ಕಳ ನೈತಿಕ ಶಿಕ್ಷಣದಲ್ಲಿ ಯಾವುದೇ ಜಾತಿ, ಧರ್ಮ ಹಾಗೂ ಮೇಲು-ಕೀಳು ಎಂಬ ಬೇಧಭಾವವಿಲ್ಲದೇ ಎಲ್ಲರನ್ನು ಒಂದೇ ಭಾವನೆಯಿಂದ ಕಾಣುವುದೇ ಶಾಲೆಗಳಲ್ಲಿರುವ ವಿಶೇಷತೆ ಎಂದು ಶ್ರೀ ಆದಿಚುಂಚನಗಿರಿ ಶೃಂಗೇರಿ ಶಾಖಾ ಮಠದ ಶ್ರೀ ಗುಣನಾಥ ಸ್ವಾಮೀಜಿ ತಿಳಿಸಿದರು.

ನಗರದ ಹೌಸಿಂಗ್ ಬೋರ್ಡ್ ಬಿಜಿಎಸ್ ಕ್ಯಾಂಪಸ್‌ನಲ್ಲಿ ಶ್ರೀ ಮಂಜುನಾಥೇಶ್ವರ ಪ್ರೌಢಶಾಲೆಯ ಚುಂಚೋತ್ಸವ-2022ರ ಶಾಲಾ ಕಾಲೇಜುಗಳ ಸಾಂಸ್ಕೃತಿಕ ವೈಭವ ಹಾಗೂ ಹಿರಿಯ ವಿದ್ಯಾರ್ಥಿ ಸಂಘದ ಉದ್ಘಾಟನೆ ನೆರವೇರಿಸಿ ಆಶೀರ್ವಚನ ನೀಡಿದ ಅವರು, ಬಿಜಿಎಸ್ ಶಾಲೆಯು ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳನ್ನು ಗುರುತಿಸಿ ನೈತಿಕ ಹಾಗೂ ಮೌಲ್ಯಧಾರಿತ ಶಿಕ್ಷಣವನ್ನು ನೀಡುವುದರೊಂದಿಗೆ ಮಕ್ಕಳಲ್ಲಿರುವ ವ್ಯಾಸಂಗದ ಪ್ರತಿಭೆ ಹೊರ ಹೊಮ್ಮಿಸುವ ಮೂಲಕ ಅಧಿಕ ಅಂಕಗಳನ್ನು ಗಳಿಸಲು ಶ್ರಮವಹಿಸಿ ಮುಂದಿನ ಜೀವನಕ್ಕೆ ದಾರಿ ಮಾಡಿಕೊಡುವ ಕಾಯಕದಲ್ಲಿ ತೊಡಗಿದೆ ಎಂದು ತಿಳಿಸಿದರು.

ಕೊರೊನಾದಿಂದಾಗಿ ಕಳೆದ ಎರಡು ವರ್ಷಗಳ ಹಿಂದೆ ವಿದ್ಯಾರ್ಥಿಗಳಿಗೆ ಶಾಲೆ, ಪಾಠ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಲಾಗಿತ್ತು. ತದನಂತರ ಸೋಂಕು ಕಡಿಮೆಯಾದ ಹಿನ್ನೆಲೆಯಲ್ಲಿ ಬಿಜಿಎಸ್ ಶಾಲೆಯು ಮಕ್ಕಳಿಗೆ ವಿದ್ಯಾಭ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಕ್ರೀಡಾಸಕ್ತಿಯ ಕಾರ್ಯ ಚಟುವಟಿಕೆ ಮರುಸೃಷ್ಟಿಸುವ ಮೂಲಕ ಅನುಕೂಲ ಕಲ್ಪಿಸಲಾಗಿದೆ ಎಂದರು.

ಕೊರೊನಾ ಸಂದರ್ಭದಲ್ಲಿ ಕಂಡಂತಹ ದುರಂತಗಳು ಎಳೆತೀರದಾಗಿದ್ದರಿಂದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಗುರುಗಳು ಕೇವಲ ಶಿಕ್ಷಣವಿದ್ದರೆ ಸಾಲದು ಪ್ರಕೃತಿ ಮಾನವನಿಗೆ ಅವಶ್ಯವಿದೆ ಎಂಬುದನ್ನು ಮನಗಂಡು ಸುಮಾರು 5 ಕೋಟಿ ಸಸಿಗಳನ್ನು ನೆಡುವ ಕಾರ್ಯಕ್ರಮ ರೂಪಿಸಿದ್ದರು ಎಂದು ಹೇಳಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
ಶುಕ್ರವಾರ 2 ಡಿಸೆಂಬರ್ 2022
2 DECEMBER 2022


ಚಿಕ್ಕಮಗಳೂರು
ಲೋಕಲ್ ಎಕ್ಸ್‌ಪ್ರೆಸ್

ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ | ಪ್ರಥಮ ವರ್ಷದ ಬಿಇ ತರಗತಿ ಆರಂಭೋತ್ಸವ

# ವಿದ್ಯಾರ್ಥಿಗಳ ಪರಿಪೂರ್ಣ ಯಶಸ್ಸಿಗೆ ಆತ್ಮವಿಶ್ವಾಸ ಮುಖ್ಯ

■ ವಿಜಯವಾಣಿ ಸುದ್ದಿಜಾಲ ಚಿಕ್ಕಮಗಳೂರು

ವಿದ್ಯಾರ್ಥಿಗಳು ಪರಿಪೂರ್ಣ ಯಶಸ್ಸು ಕಾಣಲು ಆತ್ಮವಿಶ್ವಾಸ, ಶ್ರದ್ಧೆ, ಗುರುಗಳಲ್ಲಿ ವಿಶ್ವಾಸ, ಇಂದ್ರಿಯಗಳ ನಿಗ್ರಹ, ಸಮತಾಭಾವ ಮುಖ್ಯ ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪ್ರಥಮ ವರ್ಷದ ಬಿಇ ಕೋರ್ಸಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ತರಗತಿಗಳ ಆರಂಭೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕಣ್ಣು ನೋಡುವುದನ್ನು ನೋಡಬೇಕು. ಕಿವಿ ಕೇಳುವುದನ್ನು ಕೇಳಬೇಕು. ಆದರೆ ಮನಸ್ಸನ್ನು ಮಾತ್ರ ಕೇವಲ ಓದುವುದರ ಕಡೆ ಕೇಂದ್ರೀಕರಿಸುವ ಶಕ್ತಿ ಹೆಚ್ಚಿಸಿಕೊಳ್ಳಬೇಕು. ಕುವೆಂಪು ಹೇಳಿದಂತೆ ಎಷ್ಟು ದೇವರ ನಂಬಿದರೇನು, ಒಂದಿಷ್ಟು ನಂಬು ನಿನ್ನನು ನೀನು ಎಂಬಂತೆ ನಮ್ಮಲ್ಲಿ ನಮಗೆ ಆತ್ಮವಿಶ್ವಾಸವಿರಬೇಕು. ಭವಿಷ್ಯದ ಕಡೆ ಗಮನ ಕೊಡಬೇಕು. ಸಾಕಿ ಸಲಹಿದ ತಂದೆ-ತಾಯಿ ಋಣ ತೀರಿಸಬೇಕು. ಶ್ರದ್ಧೆ ಇಲ್ಲದೆ ಮನಸ್ಸನ್ನು ಎಲ್ಲೆಲ್ಲಿಯೋ ಹರಿಯಲು ಬಿಟ್ಟರೆ ಫಲ ಸಿಗುವುದಿಲ್ಲ ಎಂದರು.

ಜಿಪಂ ಸಿಇಒ ಜಿ.ಪ್ರಭು ಮಾತನಾಡಿ, ನಮ್ಮ ದೇಶಕ್ಕೆ ಯುವಶಕ್ತಿಯ ಅವಶ್ಯಕತೆ ತುಂಬ ಇದೆ. ದೇಶ ಯಶಸ್ವಿಯಾಗಿ ಮುನ್ನಡೆಯಲು ಯುವಕರಿಂದ ಮಾತ್ರ ಸಾಧ್ಯ. ಪ್ರತಿಯೊಬ್ಬರಿಗೂ ಒಂದೊಂದು ಕೌಶಲವಿರುತ್ತದೆ. ಅದನ್ನು ಸಾಧನೆಯ ಹಾದಿಯಲ್ಲಿ ಅಳವಡಿಸಿಕೊಳ್ಳಬೇಕು. ಓದು, ಕ್ರೀಡೆ, ಹವ್ಯಾಸ, ಪ್ರಪಂಚದ ಜ್ಞಾನ ನಿಮಗೆ ಬೇಕು. ನಮ್ಮ ವ್ಯಕ್ತಿತ್ವಕ್ಕೆ ಯಾವಾಗಲೂ ಮೊದಲು ಗೆಲುವು ಸಿಗುತ್ತದೆ. ನಂತರದ ಸ್ಥಾನ ಶ್ರಮಕ್ಕೆ. ಯಾರು ತಮ್ಮ ವ್ಯಕ್ತಿತ್ವ ಅಭಿವೃದ್ಧಿಗೆ ಆದ್ಯತೆ ಕೊಡುತ್ತಾರೋ ಅವರು ಸಾಧನೆಯಲ್ಲಿ ಹೆಸರುವಾಸಿಯಾಗುತ್ತಾರೆ ಎಂದು ಹೇಳಿದರು.

ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಸಿಇಒ ಡಾ. ಎನ್.ಎಸ್.ರಾಮೇಗೌಡ ಮಾತನಾಡಿ, ವಿದ್ಯಾರ್ಥಿಗಳಿಗೆ ನಮ್ಮಿಂದ ಶೈಕ್ಷಣಿಕ, ಆರ್ಥಿಕ ಸಹಕಾರ ಸದಾ ಸಿಗುತ್ತದೆ. ಹೊಸ ಯೋಜನೆಗಳ ತೆರೆದುಕೊಂಡು ವರ್ಷದಿಂದ ವರ್ಷಕ್ಕೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು. ಶೃಂಗೇರಿ ಶಾಖಾ ಮಠದ ಶ್ರೀ ಗುಣನಾಥ ಸ್ವಾಮೀಜಿ, ಶ್ರೀ ಸೋಮನಾಥ ಸ್ವಾಮೀಜಿ, ಬೆಂಗಳೂರು ಶ್ರೀ ಸೌಮ್ಯನಾಥ ಸ್ವಾಮೀಜಿ, ಪ್ರಾಚಾರ್ಯ ಡಾ. ಸಿ.ಟಿ.ಜಯದೇವ, ಆಡಳಿತ ಮಂಡಳಿ ಸದಸ್ಯ ಕೆ.ಮೋಹನ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಟಿ.ರಾಜಶೇಖರ್, ಡಾ. ಸುನೀತಾ, ಪಂಚಮಿ, ವಿವೇಕಾನಂದ ಇದ್ದರು.


ವಿಜಯವಾಣಿ

ಚಿಕ್ಕಮಗಳೂರು ಎಐಟಿಯಲ್ಲಿ ಆಯೋಜಿಸಿದ್ದ ಪ್ರಥಮ ವರ್ಷದ ಬಿಇ ತರಗತಿ ಆರಂಭೋತ್ಸವ ಸಮಾರಂಭವನ್ನು ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಶ್ರೀ ಗುಣನಾಥ ಸ್ವಾಮೀಜಿ, ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಸೌಮ್ಯನಾಥ ಸ್ವಾಮೀಜಿ, ಡಾ. ಎನ್.ಎಸ್. ರಾಮೇಗೌಡ, ಡಾ. ಸಿ.ಕೆ.ಸುಬ್ಬರಾಯ ಇತರರಿದ್ದರು.

[illegible]

[illegible]

| ಡಾ. ಸಿ.ಕೆ.ಸುಬ್ಬರಾಯ
[illegible]

Scanned with Oken Scanner

ನಮ್ಮಲ್ಲಿ ನಮಗೆ ಆತ್ಮವಿಶ್ವಾಸ ಇರಬೇಕು. ಭವಿಷ್ಯದ ಕಡೆ ಹೆಚ್ಚಿನ ಗಮನ ಕೊಡಬೇಕು. ಸಾಕಿ ಸಲುಹಿದ ತಂದೆ ತಾಯಿಯರ ಋಣ ತೀರಿಸಬೇಕು. ಶ್ರದ್ಧೆ ಇಲ್ಲದೇ ಮನಸ್ಸನ್ನು ಎಲ್ಲೆಲ್ಲಿಯೋ ಹರಿಯಲು ಬಿಟ್ಟರೆ ಫಲ ಸಿಗುವುದಿಲ್ಲ

• **ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ**

ಕನ್ನಡಪ್ರಭ
ಶುಕ್ರವಾರ 2.12.2022
ಶಿವಮೊಗ್ಗ

# ಯಶಸ್ಸಿಗೆ ಆತ್ಮವಿಶ್ವಾಸ ಮುಖ್ಯ: ಶ್ರೀಗಳು

## ಎಐಟಿ ಕಾಲೇಜಿನ ಪ್ರಥಮ ವರ್ಷದ ಬಿಇ ಕೋರ್ಸ್ ತರಗತಿ ಉದ್ಘಾಟಿಸಿದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ವಿದ್ಯಾರ್ಥಿಗಳು ಪರಿಪೂರ್ಣ ಯಶಸ್ಸು ಕಾಣಲು ಆತ್ಮವಿಶ್ವಾಸ, ಶ್ರದ್ಧೆ, ಇಂದ್ರಿಯಗಳ ನಿಗ್ರಹ, ಸಮತಾ ಭಾವಗಳು ಅತಿ ಮುಖ್ಯ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ನುಡಿದರು.

ನಗರದ ಎಐಟಿ ಕಾಲೇಜಿನ 2022 - 2023ನೇ ಸಾಲಿನ ಪ್ರಥಮ ವರ್ಷದ ಬಿಇ ಕೋರ್ಸ್ ತರಗತಿಗಳನ್ನು ಗುರುವಾರ ಉದ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡಿದರು. ನಮ್ಮಲ್ಲಿ ನಮಗೆ ಆತ್ಮವಿಶ್ವಾಸ ಇರಬೇಕು. ಭವಿಷ್ಯದ ಕಡೆ ಹೆಚ್ಚಿನ ಗಮನ ಕೊಡಬೇಕು. ಸಾಕಿ ಸಲುಹಿದ ತಂದೆ ತಾಯಿಯರ ಋಣ ತೀರಿಸಬೇಕು. ಶ್ರದ್ಧೆ ಇಲ್ಲದೇ ಮನಸ್ಸನ್ನು ಎಲ್ಲೆಲ್ಲಿಯೋ ಹರಿಯಲು ಬಿಟ್ಟರೆ ಫಲ ಸಿಗುವುದಿಲ್ಲ ಎಂದು ಹೇಳಿದರು.

ಮುಖ್ಯ ಅತಿಥಿ ಜಿಪಂ ಸಿಇಒ ಜಿ.ಪ್ರಭು ಮಾತನಾಡಿ, ದೇಶಕ್ಕೆ ಯುವಶಕ್ತಿಯ ಅವಶ್ಯಕತೆ ಹೆಚ್ಚಿದೆ. ಪ್ರತಿಯೊಬ್ಬರಿಗೂ ಒಂದೊಂದು ಕೌಶಲ್ಯವಿರುತ್ತದೆ. ಅದನ್ನು ಸಾಧನೆಯ ಹಾದಿಯಲ್ಲಿ ಅಳವಡಿಸಿಕೊಳ್ಳಬೇಕು. ಭವಿಷ್ಯದಲ್ಲಿ ಒಳ್ಳೆಯ ಗೌರವ, ಸ್ಥಾನಮಾನ ಸಿಗಲು ಎಂಜಿನಿಯರಿಂಗ್ ಎಂಬ




ಚಿಕ್ಕಮಗಳೂರಿನ ಎಐಟಿ ಕಾಲೇಜಿನ ಪ್ರಸಕ್ತ ಸಾಲಿನ ಪ್ರಥಮ ವರ್ಷದ ಬಿಇ ತರಗತಿಗಳನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ವಿದ್ಯಾರ್ಥಿ ಜೀವನ ಅದ್ಭುತ ಅವಕಾಶವೇ ಸರಿ. ಓದು, ಕ್ರೀಡೆ, ಹವ್ಯಾಸ, ಬಾಹ್ಯ ಪ್ರಪಂಚದ ಜ್ಞಾನದ ಜೊತೆ ನಾಲ್ಕು ವರ್ಷಗಳ ಸತತ ಪ್ರಯತ್ನ ಬೇಕು. ಒಳಗಿನ ಮತ್ತು ಹೊರಗಿನ ಪ್ರಪಂಚದ ಜ್ಞಾನ ನಮಗೆ ಬೇಕು. ನಮ್ಮ ವ್ಯಕ್ತಿತ್ವಕ್ಕೆ ಮೊದಲು ಗೆಲುವು ಸಿಗುತ್ತದೆ. ನಂತರದ ಸ್ಥಾನ ಶ್ರಮಕ್ಕೆ. ಯಾರು ವ್ಯಕ್ತಿತ್ವ ಅಭಿವೃದ್ಧಿಗೆ ಒತ್ತು ಕೊಡುತ್ತಾರೊ ಅವರು ಸಾಧನೆಯಲ್ಲಿ ಹೆಸರುವಾಸಿಯಾಗುತ್ತಾರೆ ಎಂದು ಅಭಿಪ್ರಾಯ ಪಟ್ಟರು.

ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಸಿಇಒ ಡಾ. ಎನ್.ಎಸ್. ರಾಮೇಗೌಡ ಮಾತನಾಡಿ, ಯಾವಾಗಲೂ ವಿಶ್ವದ ದೃಷ್ಟಿಯಲ್ಲಿ ಯೋಚಿಸಬೇಕು. ಸ್ಥಳೀಯ ಅನುಕೂಲಕ್ಕಾಗಿ ಅನುಷ್ಠಾನಗೊಳಿಸಬೇಕು. ಪಠ್ಯಕ್ರಮದ ಹೊರತಾಗಿ ಸಾಧನೆಗಳನ್ನು ಮಾಡಬೇಕು. ಈ ನಿಟ್ಟಿನಲ್ಲಿ ಯೋಚಿಸಿ ಯೋಜನೆ ನಿರೂಪಿಸುವವರು ಅತ್ಯವಶ್ಯಕವಾಗಿ ಬೇಕಾಗುತ್ತಾರೆ ಎಂದು ಹೇಳಿದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಸಚಿವ ಡಾ. ಸಿ.ಕೆ. ಸುಬ್ಬರಾಯ ಮಾತನಾಡಿ, ವಿದ್ಯಾರ್ಥಿಗಳು ಉತ್ತಮವಾಗಿ ಕಲಿತು ಹೆಮ್ಮರವಾಗಿ ಒಳ್ಳೆಯ ವಾತಾವರಣ ಸೃಷ್ಟಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಸಿ.ಟಿ. ಜಯದೇವ್ ಮಾತನಾಡಿ, ಪ್ರಸ್ತುತ ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನ ಅಗತ್ಯತೆಯಲ್ಲಿ ಒಂದಾಗಿದೆ. ಇದು ಡಿಜಿಟಲ್ ಕ್ಷೇತ್ರದ ಹೊಸ ಹೊಸ ಆವಿಷ್ಕಾರಗಳಿಗೆ ನಾಂದಿಯಾಗಿದೆ ಎಂದರು.

ವೇದಿಕೆಯಲ್ಲಿ ಆದಿಚುಂಚನಗಿರಿ ಶೃಂಗೇರಿ ಶಾಖಾ ಮಠದ ಶ್ರೀ ಗುಣನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಬೆಂಗಳೂರು ವಿಜಯನಗರ ಶಾಖೆಯ ಶ್ರೀ ಸೌಮ್ಯನಾಥ ಸ್ವಾಮೀಜಿ, ಆಡಳಿತ ಮಂಡಳಿ ಸದಸ್ಯ ಕೆ.ಮೋಹನ್ ಮತ್ತು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಟಿ.ರಾಜಶೇಖರ್ ಉಪಸ್ಥಿತರಿದ್ದರು.

Scanned with Oken Scanner

02 ಡಿಸೆಂಬರ್ ಶುಕ್ರವಾರ 2022

ಜನಮಿತ್ರ
ಜನಮನದ ಕೈಗನ್ನಡಿ

# ಮನವ ಹರಿಬಿಟ್ಟರೆ ಫಲ ಸಿಗದು

## ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿಕೆ

**ಚಿಕ್ಕಮಗಳೂರು:** ವಿದ್ಯಾರ್ಥಿಗಳು ಪರಿಪೂರ್ಣ ಪ್ರಮಾಣದ ಯಶಸ್ಸನ್ನು ಕಾಣಲು ಆತ್ಮವಿಶ್ವಾಸ, ಶ್ರದ್ಧೆ ಮುಖ್ಯವಾಗುತ್ತದೆ. ಮನಸ್ಸನ್ನು ಎಲ್ಲೆಲ್ಲಿಯೋ ಹರಿಬಿಟ್ಟರೆ ಫಲಸಿಗದು ಎಂದು ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯ ಕ್ಯಾಂಪಸ್‌ನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಈ ಸಾಲಿನ ಪ್ರಥಮ ವರ್ಷದ ಬಿ.ಇ. ಕೋರ್ಸಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ತರಗತಿಗಳ ಪ್ರವೇಶ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಯಶಸ್ಸಿಗೆ ಗುರುಗಳಲ್ಲಿ ವಿಶ್ವಾಸ, ಇಂದ್ರಿಯಗಳ ನಿಗ್ರಹ, ಸಮತಾಭಾವ ಅತಿ ಮುಖ್ಯ. ಬದುಕಿನಲ್ಲಿ ಕಷ್ಟಪಟ್ಟು ಓದುವುದಲ್ಲದೆ ಇಷ್ಟಪಟ್ಟು ಶ್ರಮವಹಿಸಿ ಆಸಕ್ತಿಯಿಂದ ವಿದ್ಯಾಭ್ಯಾಸ ನಡೆಸಬೇಕೆಂದು ತಿಳಿಸಿದರು.

ಕಣ್ಣು ನೋಡುವುದನ್ನು ನೋಡಬೇಕು, ಕಿವಿ ಕೇಳುವುದನ್ನು ಕೇಳಬೇಕು, ಆದರೆ ಮನಸ್ಸನ್ನು ಮಾತ್ರ ಕೇವಲ ಓದುವುದರ ಕಡೆ ಹೆಚ್ಚಿನ ಗಮನವನ್ನು ಕೊಟ್ಟು ಮಾನಸಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು.




ಪ್ರಥಮ ವರ್ಷದ ಬಿಇ ತರಗತಿ-ನೂತನ ಪ್ರಯೋಗಾಲಯ ಉದ್ಘಾಟನೆ

ಕುವೆಂಪುರವರು ಹೇಳಿದಂತೆ ಎಷ್ಟು ದೇವರ ನಂಬಿದರೇನು, ಒಂದಿಷ್ಟು ನಂಬು ನಿನ್ನನು ನೀನು ಎಂಬಂತೆ ನಮ್ಮಲ್ಲಿ ನಮಗೆ ಆತ್ಮವಿಶ್ವಾಸವಿರಬೇಕೆಂದು ನುಡಿದರು.

ಮುಂದಿನ ಭವಿಷ್ಯದ ಕಡೆ ಹೆಚ್ಚಿನ ಗಮನವನ್ನು ಕೊಡಬೇಕು. ಸುಮಾರು 20 ರಿಂದ 25 ವರ್ಷಗಳು ಸಾಕಿ ಸಲುಹಿದ ತಂದೆ ತಾಯಿಯರ ಋಣ ತೀರಿಸಬೇಕು. ಶ್ರದ್ಧೆ ಇಲ್ಲದೆ ಮನಸ್ಸನ್ನು ಎಲ್ಲೆಲ್ಲಿಯೋ ಹರಿಯಲು ಬಿಟ್ಟರೆ ಫಲ ಸಿಗುವುದಿಲ್ಲ ಎಂದು ಕಿವಿಮಾತು ಹೇಳಿದರು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಪ್ರಭು ಮಾತನಾಡಿ, ನಮ್ಮ ದೇಶಕ್ಕೆ ಯುವಶಕ್ತಿ ಅವಶ್ಯಕತೆ ತುಂಬಾ ಇದೆ. ದೇಶವು ಯಶಸ್ವಿಯಾಗಿ ಮುನ್ನಡೆಯಬೇಕಾದರೆ ಯುವಕರಿಂದ ಮಾತ್ರ ಸಾಧ್ಯ. ನಮ್ಮಲ್ಲಿರುವ ಪ್ರತಿಯೊಬ್ಬರಿಗೂ ಒಂದೊಂದು ಕೌಶಲ್ಯವಿರುತ್ತದೆ. ಈ ಕೌಶಲ್ಯವನ್ನು ಸಾಧನೆಯ ಹಾದಿ ಯಲ್ಲಿ ಹೆಚ್ಚಾಗಿ ಬೆಳೆಸಿ ಬೇಗನೆ ಅಳವಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ನಿಮಗೆ ಭವಿಷ್ಯದಲ್ಲಿ ಒಳ್ಳೆಯ ಗೌರವ, ಸ್ಥಾನಮಾನ ಸಿಗಲು ಇಂಜಿನಿಯರಿಂಗ್ ಎಂಬ ವಿದ್ಯಾರ್ಥಿ ಜೀವನ ಅದ್ಭುತ ಅವಕಾಶವೇ ಸರಿ. ನಿಮ್ಮಲ್ಲಿ ಓದು, ಕ್ರೀಡೆ, ಹವ್ಯಾಸ, ಬಾಹ್ಯ ಪ್ರಪಂಚದ ಜ್ಞಾನದ ಜೊತೆ ನಾಲ್ಕುವರ್ಷಗಳ ಸತತ ಪ್ರಯತ್ನಬೇಕು. ಒಳಗಿನ ಮತ್ತು ಹೊರಗಿನ ಪ್ರಪಂಚದ ಜ್ಞಾನ ನಮಗೆ ಬೇಕು. ನಮ್ಮ ವ್ಯಕ್ತಿತ್ವಕ್ಕೆ ಯಾವಾಗಲು ಮೊದಲು ಗೆಲುವು ಸಿಗುತ್ತದೆ ನಂತರದ ಸ್ಥಾನ ಕ್ರಮಕ್ಕೆ ಹೋಗಿಯೂ ಯಾರು ತಮ್ಮ ವ್ಯಕ್ತಿತ್ವ ಅಭಿವೃದ್ಧಿಗೆ ಒತ್ತು ಕೊಡುತ್ತಾರೋ ಅವರುಗಳು ಸಮಾಜದಲ್ಲಿ ಹೆಸರುವಾಸಿಯಾಗುತ್ತಾರೆಂದರು.

> ಮುಂದಿನ ಭವಿಷ್ಯದ ಕಡೆ ಹೆಚ್ಚಿನ ಗಮನವನ್ನು ಕೊಡಬೇಕು. ಸುಮಾರು 20 ರಿಂದ 25 ವರ್ಷಗಳು ಸಾಕಿ ಸಲುಹಿದ ತಂದೆ ತಾಯಿಯರ ಋಣ ತೀರಿಸಬೇಕು. ಶ್ರದ್ಧೆ ಇಲ್ಲದೆ ಮನಸ್ಸನ್ನು ಎಲ್ಲೆಲ್ಲಿಯೋ ಹರಿಯಲು ಬಿಟ್ಟರೆ ಫಲ ಸಿಗುವುದಿಲ್ಲ.
> -ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಮಹಾಸಂಸ್ಥಾನದ ಮಠ

ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಬಿ.ಜಿ ನಗರದ ಸಿಇಒ ಡಾ.ಎನ್.ಎಸ್. ರಾಮೇಗೌಡ ಮುಖ್ಯ ಅತಿಥಿಗಳಾಗಿ ಮಾತನಾಡಿ ನಮ್ಮ ಸಂಸ್ಥೆಯ ವಿದ್ಯಾರ್ಥಿಗಳಿಗೆ ನಮ್ಮ ಶೈಕ್ಷಣಿಕ, ಆಡಳಿತದಿಂದ ಉತ್ತಮ ಸಹಕಾರ ಸಿಗುತ್ತವೆ. ನಮ್ಮ ವಿದ್ಯಾರ್ಥಿಗಳಲ್ಲಿ ಹೊಸ ಯೋಚನೆಗಳಿದ್ದು, ಪ್ರತಿ ವರ್ಷದಲ್ಲೂ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಾಧಿಸಿ ಹೆಸರು ಪಡೆಯಬೇಕೆಂದು ತಿಳಿಸಿದರು. ಯಾವಾಗಲೂ ವಿಶ್ವದ ದೃಷ್ಟಿಯಲ್ಲಿ ಯೋಚಿಸಬೇಕು, ಸ್ಥಳೀಯ ಅನುಕೂಲಕ್ಕಾಗಿ ಅನುಷ್ಠಾನಗೊಳಿಸಬೇಕು. ಪಠ್ಯಕ್ರಮದ ಹೊರತಾಗಿ ಸಾಧನೆಗಳನ್ನು ಮಾಡಬೇಕು.

ಪಿತಾಮಹ

# ಸಾಕಿ ಸಲುಹಿದ ತಂದೆ ತಾಯಿಯ ಋಣ ತೀರಿಸಬೇಕು : ನಿರ್ಮಲಾನಂದನಾಥ ಸ್ವಾಮೀಜಿ




**ಪಿತಾಮಹ ಸುದ್ದಿ.**

**ಚಿಕ್ಕಮಗಳೂರು.** ವಿದ್ಯಾರ್ಥಿಗಳು ಪರಿಪೂರ್ಣ ಯಶಸ್ಸು ಕಾಣಲು ಆತ್ಮವಿಶ್ವಾಸ, ಶ್ರದ್ಧೆ, ಇಂದ್ರಿಯಗಳ ನಿಗ್ರಹ, ಸಮತಾ ಭಾವಗಳು ಅತೀ ಮುಖ್ಯ ಎಂದು ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಜಗದ್ಗುರು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಅವರು ಗುರುವಾರ ನಗರದ ಎಐಟಿ ಕಾಲೇಜಿನ 2022–23ನೇ ಸಾಲಿನ ಪ್ರಥಮ ವರ್ಷದ ಬಿ.ಇ. ಕೋರ್ಸ್ ತರಗತಿಗಳನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು.

ನಮ್ಮಲ್ಲಿ ನಮಗೆ ಆತ್ಮವಿಶ್ವಾಸವಿರಬೇಕು. ಭವಿಷ್ಯದ ಕಡೆ ಹೆಚ್ಚಿನ ಗಮನ ಕೊಡಬೇಕು. ಸಾಕಿ ಸಲುಹಿದ ತಂದೆ ತಾಯಿಯರ ಋಣ ತೀರಿಸಬೇಕು. ಶ್ರದ್ಧೆ ಇಲ್ಲದೆ ಮನಸ್ಸನ್ನು ಎಲ್ಲೆಲ್ಲಿಯೋ ಹರಿಯಲು ಬಿಟ್ಟರೆ ಫಲ ಸಿಗುವುದಿಲ್ಲ ಎಂದು ಕಿವಿಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿ.ಪಂ.ಸಿಇಓ ಜಿ. ಪ್ರಭು ಮಾತನಾಡಿ, ನಮ್ಮ ದೇಶಕ್ಕೆ ಯುವಶಕ್ತಿಯ ಅವಶ್ಯಕತೆ ತುಂಬಾ ಇದೆ. ಪ್ರತಿಯೊಬ್ಬರಿಗೂ ಒಂದೊಂದು ಕೌಶಲ್ಯವಿರುತ್ತದೆ. ಅದನ್ನು ಸಾಧನೆಯ ಹಾದಿಯಲ್ಲಿ ಹೆಚ್ಚಾಗಿ ಬೆಳೆಸಿ ಬೇಗನೆ ಅಳವಡಿಸಿಕೊಳ್ಳಬೇಕು ಎಂದರು.

ಭವಿಷ್ಯದಲ್ಲಿ ಒಳ್ಳೆಯ ಗೌರವ, ಸ್ಥಾನಮಾನ ಸಿಗಲು 3ನೇ ಪುಟಕ್ಕೆ

Scanned with Oken Scanner

02-12-2022 ಶುಕ್ರವಾರ

ಗಿರಿವಾಹಿನಿ


# ಆತ್ಮವಿಶ್ವಾಸ, ಶ್ರದ್ಧೆ,ಇಂದ್ರಿಯಗಳ ನಿಗ್ರಹದಿಂದ ಪರಿಪೂರ್ಣ ಯಶಸ್ಸು ಸಾಧ್ಯ

ಚಿಕ್ಕಮಗಳೂರು ವಿದ್ಯಾರ್ಥಿಗಳು ಪರಿಪೂರ್ಣ ಪ್ರಮಾಣದ ಯಶಸ್ಸನ್ನು ಕಾಣಲು ಆತ್ಮವಿಶ್ವಾಸ, ಶ್ರದ್ಧೆ, ಗುರುಗಳಲ್ಲಿ ವಿಶ್ವಾಸ, ಇಂದ್ರಿಯಗಳ ನಿಗ್ರಹ, ಸಮತಾಭಾವ ಇನ್ನಿತರೆಗಳು ಅತಿ ಮುಖ್ಯ ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಜಗದ್ಗುರುಗಳಾದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮೀಜಿ ಹೇಳಿದರು.

ಅವರು ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯ, ಚಿಕ್ಕಮಗಳೂರು ಇಲ್ಲಿ ುರುವಾರ ನಡೆದ 2022-23ನೇ ಸಾಲಿನ ್ರಥಮ ವರ್ಷದ ಬಿ.ಇ. ಕೋರ್ಸಿಗೆ ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ರಗತಿಗಳ ಉದ್ಘಾಟನಾ ಸಮಾರಂಭವನ್ನು ುದ್ಘಾಟಿಸಿ ಮಾತನಾಡಿದರು.

ಬದುಕಿನಲ್ಲಿ ಕಷ್ಟಪಟ್ಟು ಓದುವುದಲ್ಲದೆ ಷ್ಟಪಟ್ಟು ಶ್ರಮವಹಿಸಿ ಆಸಕ್ತಿಯಿಂದ ಎಲ್ಲಾ ಲಸಗಳನ್ನು ಮಾಡಿಕೊಂಡು ಮೇಲ್ಕಂಡ ್ಯಮಂತ್ರಗಳನ್ನು ಅಳವಡಿಸಿಕೊಂಡರೆ ಈ ಗತ್ತು ತಮಗೆ ನಮಿಸುತ್ತದೆ ಎಂದು ಹೇಳಿದ ವರು ಕಣ್ಣು ನೋಡುವುದನ್ನು ೋಡಬೇಕು, ಕಿವಿ ಕೇಳುವುದನ್ನು ಳಬೇಕು, ಆದರೆ ಮನಸ್ಸನ್ನು ಮಾತ್ರ ವಲ ಓದುವುದರ ಕಡೆ ಹೆಚ್ಚಿನ ಮನವನ್ನು ಕೊಟ್ಟು ಮಾನಸಿಕ ಶಕ್ತಿಯನ್ನು ಚ್ಚಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕುವೆಂಪುರವರು ಹೇಳಿದಂತೆ " ಎಷ್ಟು ವರ ನಂಬಿದರೇನು. ಒಂದಿಷು ನಂಬು




ನಿನ್ನನು ನೀನು" ಎಂಬಂತೆ ನಮ್ಮಲ್ಲಿ ನಮಗೆ ಆತ್ಮವಿಶ್ವಾಸವಿರಬೇಕು. ಮುಂದಿನ ಭವಿಷ್ಯದ ಕಡೆ ಹೆಚ್ಚಿನ ಗಮನವನ್ನು ಕೊಡಬೇಕು. ಸುಮಾರು 20 ರಿಂದ 25 ವರ್ಷಗಳ ಕಾಲ ಸಾಕಿ ಸಲುಹಿದ ತಂದೆ ತಾಯಿಯರ ಋಣ ತೀರಿಸಬೇಕು. ಶ್ರದ್ಧೆ ಇಲ್ಲದೆ ಮನಸ್ಸನ್ನು ಎಲ್ಲೆಲ್ಲಿಯೋ ಹರಿಯಲು ಬಿಟ್ಟರೆ ಫಲ ಸಿಗುವುದಿಲ್ಲ ಎಂದು ಕಿವಿಮಾತು ಹೇಳಿದರು.

ಜಿಲ್ಲಾಪಂಚಾಯತಿ, ಸಿಇಓ ಆದ ಜಿ. ಪ್ರಭುರವರು ಮಾತನಾಡಿ " ನಮ್ಮ ದೇಶಕ್ಕೆ ಯುವಶಕ್ತಿಯ ಅವಶ್ಯಕತೆ ತುಂಬಾ ಇದೆ. ದೇಶವು ಯಶಸ್ವಿಯಾಗಿ ಮುನ್ನಡೆಯ ಬೇಕಾದರೆ ಯುವಕರಿಂದ ಮಾತ್ರ ಸಾಧ್ಯ.

ನಮ್ಮಲ್ಲಿರುವ ಪ್ರತಿಯೊಬ್ಬರಿಗೂ ಒಂದೊಂದು ಕೌಶಲ್ಯವಿರುತ್ತದೆ. ಈ ಕೌಶಲ್ಯವನ್ನು ಸಾಧನೆಯ ಹಾದಿಯಲ್ಲಿ ಹೆಚ್ಚಾಗಿ ಬೆಳೆಸಿ ಬೇಗನೆ ಅಳವಡಿಸಿಕೊಳ್ಳಬೇಕು. ನಿಮಗೆ ಭವಿಷ್ಯದಲ್ಲಿ ಒಳ್ಳೆಯ ಗೌರವ, ಸ್ಥಾನಮಾನ ಸಿಗಲು ಇಂಜಿನಿಯರಿಂಗ್ ಎಂಬ ವಿದ್ಯಾರ್ಥಿ ಜೀವನ ಅದ್ಭುತ ಅವಕಾಶವೇ ಸರಿ.

ನಿಮ್ಮಲ್ಲಿ ಓದು, ಕ್ರೀಡೆ, ಹವ್ಯಾಸ, ಬಾಹ್ಯ ಪ್ರಪಂಚದ ಜ್ಞಾನದ ಜೊತೆ ನಾಲ್ಕುವರ್ಷಗಳ ಸತತ ಪ್ರಯತ್ನ ಬೇಕು. ಒಳಗಿನ ಮತ್ತು ಹೊರಗಿನ ಪ್ರಪಂಚದ ಜ್ಞಾನ ನಮಗೆ ಬೇಕು. ನಮ್ಮ ವ್ಯಕ್ತಿತ್ವಕ್ಕೆ ಯಾವಾಗಲು ಮೊದಲು ಗೆಲುವು ಸಿಗುತ್ತದೆ ನಂತರದ ಸ್ಥಾನ ಶ್ರಮಕ್ಕೆ. ಹೀಗೆಯೇ ಯಾರು ತಮ್ಮ ವ್ಯಕ್ತಿತ್ವ ಅಭಿವೃದ್ಧಿಗೆ ಒತ್ತನ್ನು ಕೊಡುತ್ತಾರೊ ಅವರುಗಳು ಸಾಧನೆಯಲ್ಲಿ ಹೆಸರುವಾಸಿಯಾಗುತ್ತಾರೆ ಎಂದು ಹೇಳಿದರು.

ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಬಿ.ಜಿ ನಗರದ ಸಿಇಒ ಆದ ಡಾ. ಎನ್. ಎಸ್ ರಾಮೇಗೌಡ ಮಾತನಾಡಿ ನಿಮಗೆ ನಮ್ಮಿಂದ ಶೈಕ್ಷಣಿಕ, ಆರ್ಥಿಕ ಮತ್ತು ವಿದ್ಯಾರ್ಥಿ ಸಹಕಾರಗಳು ಸದಾ ಸಿಗುತ್ತವೆ. ನಮ್ಮ ವಿದ್ಯಾರ್ಥಿಗಳಲ್ಲಿ ಹೊಸ ಯೋಚನೆಗಳಿದ್ದು, ಪ್ರತಿ ವರ್ಷದಲ್ಲೂ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಾಧಿಸಿ ಹೆಸರು ಪಡೆಯಬೇಕು. ಯಾವಾಗಲೂ ವಿಶ್ವದ ದೃಷ್ಟಿಯಲ್ಲಿ ಯೋಚಿಸಬೇಕು. ಸ್ಥಳೀಯ ಅನುಕೂಲಕ್ಕಾಗಿ ಅನುಷ್ಠಾನಗೊಳಿಸಬೇಕು. ಪಠ್ಯಕ್ರಮದ ಹೊರತಾಗಿ ಸಾಧನೆಗಳನ್ನು ಮಾಡಬೇಕು. ಈ ನಿಟ್ಟಿನಲ್ಲಿ ಯೋಚಿಸಿ ಯೋಜನೆ ನಿರೂಪಿಸುವವರು ಪ್ರಸ್ತುತ ಪರಿಸ್ಥಿತಿಯಲ್ಲಿ ಅತ್ಯವಶ್ಯಕವಾಗಿ ಬೇಕಾಗುತ್ತಾರೆ ಎಂದು ಹೇಳಿದರು.

ಎಐಟಿ ನಿರ್ದೇಶಕರು ಮತ್ತು ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಸಿ.ಕೆ. ಸುಬ್ಬರಾಯರವರು ಮಾತನಾಡಿ ಭೈರವೈಕ್ಯ ಪೂಜ್ಯ ಡಾ॥ಬಾಲಗಂಗಾಧರನಾಥ ಸ್ವಾಮೀಜಿಯವರ ದೂರದೃಷ್ಟಿಯ ಫಲವಾಗಿ ಸ್ಥಾಪಿತವಾದ ಈ ಕಾಲೇಜಿನ ವಿದ್ಯಾರ್ಥಿಗಳನ್ನು ನಾವುಗಳು ಅತ್ಯುನ್ನತ ಹುದ್ದೆಯಲ್ಲಿ ನೋಡುತ್ತಿದ್ದೇವೆ. ನಮ್ಮ ಸಂಸ್ಥೆಯ ವಿಶೇಷಗುಣವೆಂದರೆ ಎಲ್ಲರೂ ಜವಾಬ್ದಾರಿಯಿಂದ ಕೆಲಸ ಮಾಡುತ್ತಾರೆ.

ವಿದ್ಯಾರ್ಥಿಗಳಾದ ನೀವುಗಳು

Scanned with Oken Scanner

ಪ್ರಜಾವಾಣಿ ಶುಕ್ರವಾರ • ಡಿಸೆಂಬರ್ 2, 2022

## ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯ (ಎಐಟಿ): ನಿರ್ಮಲಾನಂದನಾಥ ಸ್ವಾಮೀಜಿ

# ‘ಗುರಿ ಸಾಧನೆಗೆ ಆತ್ಮವಿಶ್ವಾಸ ಸಾಧನ’

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಉನ್ನತ ಆಲೋಚನೆ ಬೆಳೆಸಿಕೊಳ್ಳಿ
- ಕೀಳರಿಮೆ ತೊರೆಯಲು ಕರೆ

ಚಿಕ್ಕಮಗಳೂರು: ಆತ್ಮವಿಶ್ವಾಸ ಬೆಳೆಸಿಕೊಂಡು ಶಿಸ್ತಿನಿಂದ ಸಮಚಿತ್ತರಾಗಿ ಅಧ್ಯಯನದಲ್ಲಿ ತೊಡಗಿಕೊಂಡರೆ ಗುರಿ ಸಾಧಿಸಬಹುದು ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದ (ಎಐಟಿ) ಅಂಪಿಥಿಯೇಟರ್‌ನಲ್ಲಿ ಗುರುವಾರ ಏರ್ಪಡಿಸಿದ್ದ ಎಂಜಿನಿಯರಿಂಗ್ ಪ್ರಥಮ ವರ್ಷದ ವಿದ್ಯಾರ್ಥಿಗಳ ಪರಿಚಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೀಳರಿಮೆ ತೊರೆಯಬೇಕು. ಉನ್ನತ ಆಲೋಚನೆಗಳನ್ನು ಬೆಳೆಸಿಕೊಳ್ಳಬೇಕು. ಬದುಕಿನಲ್ಲಿ ಓದಿನ ಜತೆಗೆ ನಿರ್ದಿಷ್ಟ ಗುರಿ ಇಟ್ಟುಕೊಳ್ಳಬೇಕು. ಛಲ, ಪರಿಶ್ರಮದಿಂದ ಗುರಿ ಸಾಧಿಸಬೇಕು. ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು

ಶಿಸ್ತು, ಭಕ್ತಿ, ಮಿತ ಆಹಾರ ಪದ್ಧತಿ ರೂಢಿಸಿಕೊಳ್ಳಬೇಕು. ಮನಸ್ಸನ್ನು ಸ್ಥಿಮಿತವಾಗಿಟ್ಟುಕೊಳ್ಳಬೇಕು. ಭವಿಷ್ಯಕ್ಕೆ ಸಂಚಕಾರ ತರುವ ಘಟನೆಗಳಿಗೆ ಕಿವಿಗೊಡಬಾರದು. ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಕುಟುಂಬಕ್ಕೆ, ನಾಡಿಗೆ ಗೌರವ ತರುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಸಿಇಒ ಡಾ.ಎನ್.ಎಸ್.ರಾಮೇಗೌಡ ಮಾತನಾಡಿ,ವಿದ್ಯಾರ್ಥಿಗಳು ಹೊಸ ಆಲೋಚನೆ ಮೂಲಕ ಸಾಧನೆ ಮೆರೆದು ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಆದಿಚುಂಚನಗಿರಿ ವಿಶ್ವ ವಿದ್ಯಾಲಯದ ಕುಲಸಚಿವ ಡಾ.ಸಿ. ಕೆ.ಸುಬ್ಬರಾಯ ಮಾತನಾಡಿ, ಸಕಾರಾತ್ಮಕ ಚಿಂತನೆಗಳೊಂದಿಗೆ ಶೈಕ್ಷಣಿಕ ಏಳಿಗೆ ಸಾಧಿಸುವಂತೆ ತಿಳಿಸಿದರು.

ಪ್ರಾಂಶುಪಾಲ ಡಾ.ಸಿ.ಟಿ. ಜಯದೇವ, ಆಡಳಿತ ಮಂಡಳಿ ಸದಸ್ಯ ಕೆ.ಮೋಹನ್, ಜಿಲ್ಲಾ ಒಕ್ಕಲಿಗ ಸಂಘದ ಅಧ್ಯಕ್ಷ ಟಿ. ರಾಜಶೇಖರ್ ಇದ್ದರು.




ಕಾರ್ಯಕ್ರಮವನ್ನು ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಗುಣನಾಥ ಸ್ವಾಮೀಜಿ, ಸೋಮನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಡಾ.ಸಿ.ಕೆ.ಸುಬ್ಬರಾಯ, ಕೆ.ಮೋಹನ್, ಜಿ.ಪಂ. ಸಿಇಒ ಜಿ.ಪ್ರಭು, ಟಿ. ರಾಜಶೇಖರ್ ಇದ್ದರು.

## ‘ದೇಶದ ಪ್ರಗತಿಗೆ ಕೊಡುಗೆ ನೀಡಿ’

ಯುವಜನರು ಕೌಶಲ ಮತ್ತು ಜ್ಞಾನ ಸದ್ಬಳಕೆ ಮಾಡಿಕೊಳ್ಳಬೇಕು. ದೇಶದ ಪ್ರಗತಿಗೆ ಕೊಡುಗೆ ನೀಡಬೇಕು ಎಂದು ಜಿಲ್ಲಾಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಜಿ.ಪ್ರಭುಹೇಳಿದರು. ವಿದ್ಯಾರ್ಥಿಗಳು ಪಠ್ಯದ ಜತೆಗೆ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ ಮೊದಲಾದ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಬೇಕು. ಬಾಹ್ಯಜ್ಞಾನದ ಮೂಲಕ ವ್ಯಕ್ತಿತ್ವ ವೃದ್ಧಿಸಿಕೊಳ್ಳಬೇಕು. ಕೈಗಾರೀಕರಣ. ಸೇವಾವಲಯದಲ್ಲಿ ಕೌಶಲಕ್ಕೆ ಹೆಚ್ಚು ಪ್ರಾಶಸ್ತ್ಯ ಇದೆ. ಇದು ತಾಂತ್ರಿಕ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

Scanned with Oken Scanner

ವಿಜಯ ಕರ್ನಾಟಕ VK

ಶುಕ್ರವಾರ, 2 ಡಿಸೆಂಬರ್ 2022

# ಆತ್ಮವಿಶ್ವಾಸ, ಶ್ರದ್ಧೆಯಿಂದ ಯಶಸ್ಸು




ಚಿಕ್ಕಮಗಳೂರಿನ ಎಐಟಿ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಶ್ರೀ ಗುಣನಾಥ ಸ್ವಾಮೀಜಿ, ಶ್ರೀಸೋಮನಾಥ ಸ್ವಾಮೀಜಿ ಇದ್ದರು.

**ವಿಕ ಸುದ್ದಿಲೋಕ** ಚಿಕ್ಕಮಗಳೂರು

ಆತ್ಮವಿಶ್ವಾಸ, ಶ್ರದ್ಧೆ, ಗುರುಗಳಲ್ಲಿ ವಿಶ್ವಾಸ, ಇಂದ್ರಿಯಗಳ ನಿಗ್ರಹ, ಸಮತಾಭಾವದಂತಹ ಸಕಾರಾತ್ಮಕ ಅಂಶಗಳನ್ನು ಅಳವಡಿಸಿಕೊಂಡರೆ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ಇಲ್ಲಿನ ಆದಿಚುಂಚನಗಿರಿ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಗುರುವಾರ ಏರ್ಪಡಿಸಿದ್ದ ಪ್ರಥಮ ವರ್ಷದ ಬಿಇ ತರಗತಿ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವಹಿಸಿ ಮಾತನಾಡಿದರು.

**ಡಾ.ನಿರ್ಮಲಾನಂದ ನಾಥ ಸ್ವಾಮೀಜಿ ಆಶೀರ್ವಚನ**

ಸಕರಾತ್ಮಕ ಅಂಶಗಳನ್ನು ಅಳವಡಿಸಿಕೊಂಡು ಕಷ್ಟಪಟ್ಟು ಓದಿದರೆ, ಇಷ್ಟಪಟ್ಟು ಕೆಲಸ ಮಾಡಿದರೆ ಈ ಜಗತ್ತು ತಮಗೆ ನಮಿಸುತ್ತದೆ ಎಂದರು.

ಕುವೆಂಪು ಹೇಳಿದಂತೆ 'ಎಷ್ಟು ದೇವರ ನಂಬಿದರೇನು, ಒಂದಿಷ್ಟು ನಂಬು ನಿನ್ನನು ನೀನು' ಎಂಬಂತೆ ನಮ್ಮಲ್ಲಿ ನಮಗೆ ಆತ್ಮವಿಶ್ವಾಸವಿರಬೇಕು. ಮುಂದಿನ ಭವಿಷ್ಯದ ಕಡೆ ಹೆಚ್ಚಿನ ಗಮನ ಕೊಡಬೇಕು. ಶ್ರದ್ಧೆ ಇಲ್ಲದೆ ಮನಸ್ಸನ್ನು

ಎಂದು ಎಚ್ಚರಿಸಿದರು.


ಜಿಪಂ ಸಿಇಒ ಜಿ. ಪ್ರಭು ಮಾತನಾಡಿ ದೇಶಕ್ಕೆ ಯುವಶಕ್ತಿಯ ಅವಶ್ಯಕತೆ ತುಂಬಾ ಇದೆ. ದೇಶವು ಯಶಸ್ವಿಯಾಗಿ ಮುನ್ನಡೆಯುವುದು ಯುವಕರಿಂದ ಮಾತ್ರ ಸಾಧ್ಯ. ಪ್ರತಿಯೊಬ್ಬರೂ ತಮ್ಮಲ್ಲಿನ ಕೌಶಲವನ್ನು ಸಾಧನೆಯ ಹಾದಿಯಲ್ಲಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಡಾ.ಎನ್. ಎಸ್.ರಾಮೇಗೌಡ, ಎಐಟಿ ನಿರ್ದೇಶಕ ಡಾ.ಸಿ.ಕೆ. ಸುಬ್ಬರಾಯ, ಪ್ರಾಂಶುಪಾಲ ಡಾ.ಸಿ.ಟಿ. ಜಯದೇವ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನಡಾ.ನಿರ್ಮಲಾನಂದನಾಥ ಸ್ವಾಮೀಜಿ ವಿದ್ಯುನ್ಮಾನ ವಿಭಾಗದ ನೂತನ ಲ್ಯಾಬೊರೇಟರಿ ಉದ್ಘಾಟಿಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಶೃಂಗೇರಿ ಶಾಖಾ ಮಠದ ಶ್ರೀಗುಣನಾಥ ಸ್ವಾಮೀಜಿ, ಮೈಸೂರು ಶ್ರೀ ಸೋಮನಾಥ ಸ್ವಾಮೀಜಿ, ವಿಜಯನಗರ ಬೆಂಗಳೂರು ಶಾಖೆಯ ಶ್ರೀಸೌಮ್ಯನಾಥ ಸ್ವಾಮೀಜಿ, ಆಡಳಿತ ಮಂಡಳಿ ಸದಸ್ಯರಾದ ಕೆ.ಮೋಹನ್, ಜಿಲ್ಲಾ ಒಕ್ಕಲಿಗ ಸಂಘದ ಅಧ್ಯಕ್ಷ ಟಿ.ರಾಜಶೇಖರ್ ಇತರರಿದ್ದರು.

Scanned with Oken Scanner

# ಎಐಟಿಯಲ್ಲಿ ಎನ್‌ಡಿಎಲ್‌ಐ ಕ್ಲಬ್ ಉದ್ಘಾಟನೆ



ಪಿತಾಮಹ ಸುದ್ದಿ.

ಚಿಕ್ಕಮಗಳೂರು. ರಾಷ್ಟ್ರೀಯ ಡಿಜಿಟಲ್ ಲೈಬ್ರೇರಿ ಆಫ್ ಇನ್‌ಡಿಯಾ ಇದರ ಬಗ್ಗೆ ಅರಿವು ಮತ್ತು ಎನ್‌ಡಿಎಲ್‌ಐ ಕ್ಲಬ್ ಉದ್ಘಾಟನ ಕಾರ್ಯಕ್ರಮವನ್ನು ಅದಿಚುಂಚನಗಿರಿ ತಾಂತ್ರೀಕ ಮಾಹಾವಿದ್ಯಾಲಯದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕೇಂದ್ರ ಮತ್ತು ಕಂಪ್ಯೂಟರ್ ವಿಜ್ಞಾನ ವಿಭಾಗದ ವತಿಯಿಂದ ಕಾರ್ಯಕ್ರಮ ನಡೆಸಲಾಯಿತು. ಎನ್‌ಡಿಎಲ್‌ಐ ಕ್ಲಬ್ ಉದ್ಘಾಟಿಸಿದ ಪ್ರಾಂಶುಪಾಲರಾದ ಡಾ.ಸಿ.ಟಿ.ಜಯದೇವಮಾತನಾಡಿವಿದ್ಯಾರ್ಥಿಗಳು ಈ ವರ್ಚವಲ್ ರೆಪಾಜಿಟರಿಯು ಕೇಂದ್ರದ ಶಿಕ್ಷಣ ಮಂತ್ರಾಲಯದ ಸಹಾಕಾರದಿಂದ ರಾಷ್ಟ್ರೀಯ ಮಿಷನ್‌ನ ಮಾಹಿತಿ ತಂತ್ರಜ್ಞಾನವು ಅಬಿವೃದ್ಧಿ ಪಡಿಸಿ ಐಐಟಿ ಕರಾಘಪುರ ನಡೆಸಿಕೊಂಡು ಹೊಗುತ್ತಿದ್ದು ಇದರಿಂದ ತಾವುಗಳು ಕಾಲೇಜಿನಲ್ಲಿ ಆಗಲಿ ಅಥವಾ ಮನೆಯಲ್ಲಿ ಸುಲಭವಾಗಿ ನೋಡಬಹುದು ಮತ್ತು ಓದಬಹುದು ಇಲ್ಲವೇ ಪ್ರಿಂಟ್ ತೆಗೆದುಕೊಳ್ಳಬಹುದು ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ನರೇಂದ್ರ ಪೈ ಮಾತನಾಡಿ ವಿದ್ಯಾಥಿಗಳು ಇಂತಹ ಕಾರ್ಯಕ್ರಮಗಳು ಶಿಕ್ಷಣ ಸಂಸ್ಥೆಗಳಲ್ಲಿ ಮಾತ್ರ ದೊರೆಯುತ್ತವೆ ಓದಿ ಜ್ಞಾನವನ್ನು ವೃದ್ಧಿಸಿಕೊಳ್ಳಿ ಎಂದರು.

ಆವುಟ್ರಿಚ್ ಮೆಂಟರ್ ಐಐಟಿ ಕಾರಾಗಪುರ್‌ನ ಪ್ರೋಜೆಕ್ಟ್ ಮ್ಯಾನೇಜರ್ ದುಬೆಂದು ಚಕ್ರಭಾರತೀ ರವರು ಇದರ ಮಾಹಿತಿ ಮತ್ತು ಉಪಯೋಗಗಳ ಬಗ್ಗೆ ತಿಳಿಸಿಕೊಟ್ಟರು.

ಕಾರ್ಯಕ್ರಮದ ಸಂಯೋಜಕ ಡಾ.ಹೆಚ್.ಇ.ಪ್ರಸನ್ನ ಕುಮಾರ ಗ್ರಂಥಾಲಯದ ಮುಖ್ಯಸ್ಥರುಕಾರ್ಯಕ್ರಮವನ್ನುನಡೆಸಿಕೊಟ್ಟರು. ಡಾ.ಪುಷ್ಪರವಿಶಂಕರ್,ಮುಖ್ಯಸ್ಥರುಕಂಪ್ಯೂಟರ್ ವಿಜ್ಞಾನ ವಿಭಾಗ,ಡಾ.ದೇವಾನಂದ ಐಕ್ಯೂಎಸ್‌ಸಿ ಸಂಚಾಲಕರು, ಶ್ರೀ. ಸಾಗರ ರಿಜಿಸ್ಟಾರ್ ಶ್ರೀ. ಅನ್ಸರ್ ಪಾಷಾ ಎಕ್ಸಿಗ್ಯೂಟಿವ್ ಮೆಂಬರ್ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Scanned with Oken Scanner

ಪ್ರಜಾವಾಣಿ
ಶನಿವಾರ • ನವೆಂಬರ್ 5, 2022

### ಪಿಂಚಣಿ ಯೋಜನೆಯ ಲಾಭ ಪಡೆಯಲು ಅವಕಾಶ

# 2014ರ ಇಪಿಎಸ್ ಯೋಜನೆ ಎತ್ತಿಹಿಡಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಉದ್ಯೋಗಿಗಳ ಪಿಂಚಣಿ (ತಿದ್ದುಪಡಿ)- 2014ರ ಯೋಜನೆಯ (ಇಪಿಎಸ್) ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಎತ್ತಿಹಿಡಿದಿದೆ. ಜತೆಗೆ ಇದರಲ್ಲಿದ್ದ ಕೆಲವು ನಿಬಂಧನೆಗಳನ್ನು ಕೈಬಿಟ್ಟು, ಉದ್ಯೋಗಿಗಳಿಗೆ ಯೋಜನೆಯ ಲಾಭ ಪಡೆಯಲು ಅವಕಾಶ ಕಲ್ಪಿಸಿದೆ.



ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್, ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಸುಧಾಂಶು ಧುಲಿಯಾ ಅವರ ನೇತೃತ್ವದ ಪೀಠವು, 2014ರ ಆಗಸ್ಟ್ 22ರಂದು ಹೊರಡಿಸಿರುವ ಇಪಿಎಸ್ ತಿದ್ದುಪಡಿ ಯೋಜನೆಯ ನಿಬಂಧನೆಗಳ ಅಧಿಸೂಚನೆಯ ಕಾನೂನುಬದ್ಧತೆಯನ್ನು ಮಾನ್ಯ ಮಾಡಿದೆ. ಇದರಿಂದ ಉದ್ಯೋಗದಾತರು ಮತ್ತು ಉದ್ಯೋಗಿಗಳು ಪಿಂಚಣಿ ನಿಧಿಗೆ ಮಿತಿಯಿಲ್ಲದೇ ವಂತಿಗೆ ನೀಡುವ ಅವಕಾಶ ಲಭಿಸಿದೆ.

ಆರ್.ಸಿ. ಗುಪ್ತ ವಿರುದ್ಧದ ಪ್ರಾದೇಶಿಕ ಪಿಂಚಣಿ ನಿಧಿ ಆಯುಕ್ತರ ಪ್ರಕರಣ ಸಂಬಂಧ 2016ರಲ್ಲಿ ನೀಡಿರುವ ತೀರ್ಪನ್ನು ಪೀಠ ಎತ್ತಿಹಿಡಿದಿದೆ. ಈ ತೀರ್ಪಿನ ಪ್ರಕಾರ ಯೋಜನೆಯ ಆಯ್ಕೆಯ ಲಾಭ ಪಡೆಯಲು ಯಾವುದೇ ಕೊನೆಯ ದಿನಾಂಕವಿಲ್ಲ ಎಂದು ಸ್ಪಷ್ಟಪಡಿಸಿದೆ. ಈವರೆಗೆ ಈ ಪಿಂಚಣಿ ಯೋಜನೆ ಆಯ್ದುಕೊಳ್ಳದ ಉದ್ಯೋಗಿಗಳು ಈ ಯೋಜನೆಗೆ ಸೇರಲು ಅವಕಾಶ ಕಲ್ಪಿಸಿದೆ. ಕೊನೆ ದಿನಾಂಕದೊಳಗೆ ಯೋಜನೆಗೆ ಸೇರಲು ಸಾಧ್ಯವಾಗದ ಅರ್ಹ ಉದ್ಯೋಗಿಗಳಿಗೆ ಈ ವಿಷಯದ ಬಗ್ಗೆ ಸ್ಪಷ್ಟತೆಯ ಕೊರತೆ ಇರುವುದರಿಂದ ಹೆಚ್ಚುವರಿ ನಾಲ್ಕು ತಿಂಗಳ ಕಾಲಾವಕಾಶ ನೀಡಬೇಕು ಎಂದೂ ಪೀಠ ಹೇಳಿದೆ.

2014ರ ಸೆಪ್ಟೆಂಬರ್ 1ರ ತಿದ್ದುಪಡಿಗೂ ಮುನ್ನ ನಿವೃತ್ತಿ ಹೊಂದಿದ ಉದ್ಯೋಗಿಗಳು, ತಿದ್ದುಪಡಿಯಾದ ಇಪಿಎಸ್ ಯೋಜನೆಯ ಪ್ಯಾರಾ 11(3)ರ ಅಡಿ ಯೋಜನೆಯ ಆಯ್ಕೆ ಬಳಸಿಕೊಳ್ಳಲು ಅರ್ಹರಾಗಿರುವುದಿಲ್ಲ ಎಂದು ಹೇಳಿದೆ. ಮುಖ್ಯವಾಗಿ, ತಿದ್ದುಪಡಿಯಾದ ಯೋಜನೆಯನ್ನು ಎತ್ತಿಹಿಡಿಯುವಲ್ಲಿ ನ್ಯಾಯಾಲಯವು ನೈಜ ಸಂಬಳದ ಬದಲಿಗೆ ಪಿಂಚಣಿ ಲೆಕ್ಕಾಚಾರಕ್ಕಾಗಿ ₹ 15,000 ಮಿತಿಯನ್ನು ಮಾನ್ಯ ಮಾಡಿದೆ.

4B ಪುಟ ನೋಡಿ

# 2014ರ ಇಪಿಎಸ್ ಯೋಜನೆ ಎತ್ತಿಹಿಡಿದ ಸುಪ್ರೀಂ ಕೋರ್ಟ್

ಒಂದನೇ ಪುಟದಿಂದ...

ಗರಿಷ್ಠ ಸಂಬಳ ಮಿತಿ ₹15 ಸಾವಿರ ಮೀರಿದರೆ ಶೇ 1.16ರಷ್ಟು ಕೊಡುಗೆ ನೀಡಬೇಕೆಂಬ ಷರತ್ತನ್ನು ಅಮಾನ್ಯಗೊಳಿಸಿದೆ.

ಮಿತಿ ದಾಟಿದ ಗರಿಷ್ಠ ಸಂಬಳದ ಮೇಲೆ ಹೆಚ್ಚುವರಿ ಕೊಡುಗೆ ನೀಡಬೇಕೆಂಬ ಷರತ್ತನ್ನು 'ಅಲ್ಟ್ರಾ ವೈರಸ್' ಎಂದು ವ್ಯಾಖ್ಯಾನಿಸಿ, ರದ್ದುಪಡಿಸಿದ ಪೀಠವು, ಪಿಂಚಣಿ ನಿಧಿ ಹೊಂದಿಸಲು ಸಂಬಂಧಿಸಿದವರಿಗೆ ತೀರ್ಪಿನ ಈ ಭಾಗವನ್ನು ಆರು ತಿಂಗಳ ಅವಧಿಗೆ ಅಮಾನತಿನಲ್ಲಿರಿಸಲಾಗುವುದು ಎಂದು ಹೇಳಿದೆ.

ತಿದ್ದುಪಡಿ ಇಪಿಎಸ್ ಯೋಜನೆಯನ್ನು ರದ್ದುಪಡಿಸಿ ಕೇರಳ, ರಾಜಸ್ಥಾನ ಮತ್ತು ದೆಹಲಿಯ ಹೈಕೋರ್ಟ್ ತೀರ್ಪು ನೀಡಿದ್ದವು. ಇದನ್ನು ಪ್ರಶ್ನಿಸಿ ಉದ್ಯೋಗಿಗಳ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಮತ್ತು ಕೇಂದ್ರ ಸರ್ಕಾರ ವಿಶೇಷ ಮೇಲ್ಮನವಿ ಅರ್ಜಿಯನ್ನು (ಎಸ್‌ಎಲ್‌ಪಿ) ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದವು.

Scanned with Oken Scanner

ಚಿಕ್ಕಮಗಳೂರು

2 ಶನಿವಾರ • ಅಕ್ಟೋಬರ್ 29, 2022

ಪ್ರಜಾವಾಣಿ


ಸಂಕ್ಷಿಪ್ತ ಸುದ್ದಿ

## 4ರಂದು ಕಾರ್ಯಾಗಾರ

ಚಿಕ್ಕಮಗಳೂರು: ಮಹಾತ್ಮಗಾಂಧಿ ರಾಷ್ಟ್ರೀಯ ಪರಿಷತ್ತು ಗ್ರಾಮೀಣ ಶಿಕ್ಷಣ, ಉನ್ನತ ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಗರದ ಆದಿಚುಂಚನಗಿರಿ ತಾಂತ್ರಿಕ ವಿದ್ಯಾಲಯದಲ್ಲಿ ನ.4 ರಂದು 'ಸಾಮಾಜಿಕ ಉದ್ಯಮ ಶೀಲತೆ, ಸಮರ್ಥನೀಯತೆ, ಹಾಗೂ ಗ್ರಾಮೀಣ ನಿಶ್ಚಿತಾರ್ಥ ವಿಷಯದ ಕುರಿತು ಕಾರ್ಯಾಗಾರ ಏರ್ಪಡಿಸಲಾಗಿದೆ. ಕಾರ್ಯಾಗಾರದಲ್ಲಿ ಉನ್ನತ ಶಿಕ್ಷಣ ಸಂಸ್ಥೆಯ ಪ್ರತಿನಿಧಿಗಳು ಭಾಗವಹಿಸುವರು ಎಂದು ಕಾಲೇಜು ಪ್ರಾಂಶುಪಾಲ ಸಿ.ಟಿ. ಜಯದೇವ ತಿಳಿಸಿದ್ದಾರೆ.

Scanned with Oken Scanner

# ಭಾವಪೂರ್ಣ ಶ್ರದ್ಧಾಂಜಲಿ



## ಗುಡ್ಡದೂರು ಜಿ.ಇ.ತಿಪ್ಪಯ್ಯ

**ಕಾಫಿ ಬೆಳೆಗಾರರು**

ಹೆಸರಾಂತ ಕಾಫಿ ಬೆಳೆಗಾರರು, ದಾನಿಗಳು, ಸಮಾಜ ಸೇವಕರು, ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಸದ್ಭಕ್ತರು ಹಾಗೂ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದ ಆಡಳಿತ ಮಂಡಳಿ ಸದಸ್ಯರು ಆದ ಶ್ರೀಯುತ ಜಿ.ಇ.ತಿಪ್ಪಯ್ಯನವರು ದಿನಾಂಕ: 16-10-2022 ರಂದು ನಿಧನರಾಗಿದ್ದು ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ,

**ಆಡಳಿತ ಮಂಡಳಿ, ನಿರ್ದೇಶಕರು, ಪ್ರಾಂಶುಪಾಲರು, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು**
**ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯ, ಚಿಕ್ಕಮಗಳೂರು.**

28 ಅಕ್ಟೋಬರ್ ಶುಕ್ರವಾರ 2022

ಜನಮಿತ್ರ
ಜನಮನದ ಕೈಗನ್ನಡಿ

# ನಾಳೆಯಿಂದ ಕಾಡುವ ಗೀತೆ ಗಾಯನ

**ಚಿಕ್ಕಮಗಳೂರು:** ಪೂರ್ವಿ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಯುರೇಕಾ ಅಕಾಡೆಮಿ ಹಾಗೂ ಮಲೆನಾಡು ವಿದ್ಯಾಸಂಸ್ಥೆಯ ಸಹಯೋಗದಲ್ಲಿ ಅ.29 ಮತ್ತು 30 ರಂದು ಗಾಯಕರ ನೆಚ್ಚಿನ ಹಾಗೂ ಚಿಕ್ಕಮಗಳೂರಿನ ಕಲಾ ರಸಿಕರ ನೆಚ್ಚಿನ ಗೀತೆಗಳ ಕಾಡುವ ಗೀತೆಗಳು ಕಾರ್ಯಕ್ರಮವನ್ನು ಎಂ.ಇ.ಎಸ್. ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಪಲ್ಲವಿ ಸಿ.ಟಿ.ರವಿ ಕಾರ್ಯಕ್ರಮ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಯುರೇಕಾಅಕಾಡೆಮಿಯ ಸ್ಥಾಪಕ ದೀಪಕ್‌ದೊಡ್ಡಯ್ಯ ವಹಿಸಲಿದ್ದಾರೆ. ಸುಗಮ ಸಂಗೀತಗಂಗಾದ ಅಧ್ಯಕ್ಷ ಡಾ.ಜೆ.ಪಿ.ಕೃಷ್ಣೇಗೌಡ ಹಾಗೂ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ - ಡಾ.ಸಿ.ಕೆ.ಸುಬ್ಬರಾಯ ಸಮಾರೋಪ ನುಡಿಗಳನ್ನಾಡಲಿದ್ದಾರೆ. ಐ.ಡಿ.ಎಸ್.ಜಿ.ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ಹೆಚ್.ಎಂ.ಮಹೇಶ್ ಮುಖ್ಯಅತಿಥಿಯಾಗಿ ಪಾಲ್ಗೊಳ್ಳುವರು.

»03

Scanned with Oken Scanner


# ಮರೆಯಲಾಗದ ಮಹನೀಯರ ನೆನಪಿನಲ್ಲಿ...

- ಪ್ರಶಾಂತ್ ಹೊಳೆಹೊನ್ನೂರು

ತನ್ನ ಜೀವನವನ್ನು ಸಾಮಾಜಿಕ ಅಭಿವೃದ್ಧಿಗಾಗಿ ತೊಡಗಿಸಿಕೊಳ್ಳಬಲ್ಲ ಒಬ್ಬ ವ್ಯಕ್ತಿ ಒಂದು ಸಮಾಜದ ಶಕ್ತಿಯಾಗಿ ಬಿಂಬಿತನಾಗಬಲ್ಲ ಹಾಗೂ ಸರ್ವರಿಂದಲೂ ಸದಾ ಕಾಲ ಸ್ಮರಣೆಯಲ್ಲಿದ್ದು, ಆದರಣೀಯ ಮತ್ತು ಪೂಜಿತನಾಗಬಲ್ಲ. ಇಂತಹ ಸಾಕಷ್ಟು ಉದಾಹರಣೆಗಳನ್ನು ನಾವು ಕೇಳಿದ್ದೇವೆ ಮತ್ತು ನೋಡಿದ್ದೇವೆ. ಶಿಕ್ಷಣ ತಜ್ಞರು ಮತ್ತು ವಾಗ್ಮಿಗಳೂ ಆಗಿರುವ ಡಾ. ಗುರುರಾಜ ಕರ್ಜಗಿ ಅವರು ತಮ್ಮ ಒಂದು ಉಪನ್ಯಾಸದಲ್ಲಿ ಒಂದು ತರಗತಿ ಕೋಣೆಯಲ್ಲಿನ ಒಂದು ಸಂಗತಿಯನ್ನು ಹೀಗೆ ಹೇಳುತ್ತಾರೆ.

ಒಂದು ದಿನ ತರಗತಿಯಲ್ಲಿ ಶಿಕ್ಷಕರು ತನ್ನ ವಿದ್ಯಾರ್ಥಿಗಳಿಗೆ ಒಂದು ಪ್ರಶ್ನೆಯನ್ನು ಕೇಳುತ್ತಾರೆ. ನಿಮ್ಮ ಅಜ್ಜನ ಹೆಸರು ಎಷ್ಟು ಜನಕ್ಕೆ ತಿಳಿದಿದೆ ಕೈ ಎತ್ತಿ ಎನ್ನುತ್ತಾರೆ. ಎಲ್ಲ ವಿದ್ಯಾರ್ಥಿಗಳೂ ಕೈ ಎತ್ತುತ್ತಾರೆ. ಶಿಕ್ಷಕರು ಎರಡನೇ ಪ್ರಶ್ನೆಗೆ ಮುಂದುವರೆಯುತ್ತ, ನಿಮ್ಮ ಅಜ್ಜನ ತಂದೆಯ ಹೆಸರು ಎಷ್ಟು ಜನಕ್ಕೆ ತಿಳಿದಿದೆ ಕೈ ಎತ್ತಿ ಎನ್ನುತ್ತಾರೆ. ತರಗತಿಯಲ್ಲಿದ್ದ ವಿದ್ಯಾರ್ಥಿಗಳ ಪೈಕಿ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳು ಮಾತ್ರ ಕೈ ಎತ್ತುತ್ತಾರೆ. ಶಿಕ್ಷಕರ ಮುಂದಿನ ಪ್ರಶ್ನೆ: ನಿಮ್ಮ ಅಜ್ಜನ ತಂದೆಯ ತಂದೆ ಹೆಸರು ಎಷ್ಟು ಜನಕ್ಕೆ ತಿಳಿದಿದೆ ಕೈ ಎತ್ತಿ ಎನ್ನುತ್ತಾರೆ. ತರಗತಿಯಲ್ಲಿದ್ದ ವಿದ್ಯಾರ್ಥಿಗಳು ಪರಸ್ಪರ ಒಬ್ಬರ ಮುಖ ಒಬ್ಬರು ನೋಡಿಕೊಳ್ಳುತ್ತಾ ಕುಳಿತಿದ್ದರೇ ಹೊರತು ಯಾರೂ ಕೂಡ ಕೈ ಎತ್ತುವ ಧೈರ್ಯ ಮಾಡಲಿಲ್ಲ. ಏಕೆಂದರೆ ಯಾರಿಗೂ ಹೆಸರುಗಳು ತಿಳಿದಿರಲಿಲ್ಲ !

ವಿದ್ಯಾರ್ಥಿಗಳು ನಿರುತ್ತರರಾದುದನ್ನು ಗಮನಿಸಿದ ಶಿಕ್ಷಕರು ಮುಂದಿನ ಪ್ರಶ್ನೆ ಕೇಳಿದರು. ಡಾ. ಬಿ.ಆರ್. ಅಂಬೇಡ್ಕರ್, ಬಸವೇಶ್ವರರು, ಗೌತಮ ಬುದ್ಧ, ಮಹಾತ್ಮ ಗಾಂಧಿ, ಸ್ವಾಮಿ ವಿವೇಕಾನಂದರ ಹೆಸರನ್ನು ಹೇಳುತ್ತಾ, ಇವರು ಎಷ್ಟು ಜನಕ್ಕೆ ತಿಳಿದಿದೆ.. ಎನ್ನುತ್ತಿದ್ದಂತೆಯೇ ತರಗತಿಯಲ್ಲಿನ ಎಲ್ಲಾ ವಿದ್ಯಾರ್ಥಿಗಳೂ ಕೈ ಎತ್ತಿ ತನಗೆ ಗೊತ್ತು ಎನ್ನುತ್ತಾರೆ. ಶಿಕ್ಷಕರು ಮರು ಪ್ರಶ್ನೆ ಹಾಕಿ, ಈಗ ನಾನು ಹೇಳಿದ ಯಾರೂ ಕೂಡ ನಿಮ್ಮ ಸಂಬಂಧಿಕರು ಅಲ್ಲದಿದ್ದರೂ ಅವರೆಲ್ಲರೂ ನಿಮಗೆ ಹೇಗೆ ಗೊತ್ತು? ಎಂದಾಗ ವಿದ್ಯಾರ್ಥಿಗಳು ಆ ವ್ಯಕ್ತಿಗಳ ಜೀವನ ಸಾಧನೆಯ ಬಗ್ಗೆ ಹೇಳುತ್ತಾರೆ. ತರಗತಿ ನಿಶ್ಯಬ್ದವಾದ ನಂತರ ಒಬ್ಬ ವಿದ್ಯಾರ್ಥಿನಿ ಎದ್ದುನಿಂತು ಉತ್ತರ ನೀಡುತ್ತಾಳೆ. ಆ ಉತ್ತರವನ್ನು ಕೇಳಿದ ಶಿಕ್ಷಕರು ಏನೋ ಸಾಧಿಸಿದವರಂತೆ ಮುಗುಳ್ನಗೆ ಬೀರುತ್ತ, ತಾನು ನಿರೀಕ್ಷಿಸಿದ ಉತ್ತರ ನೀಡಿದ್ದಕ್ಕಾಗಿ ವಿದ್ಯಾರ್ಥಿನಿಗೆ ಅಭಿನಂದಿಸುತ್ತಾರೆ.



ಆ ವಿದ್ಯಾರ್ಥಿನಿ ನೀಡಿದ ಉತ್ತರ ಏನೆಂದರೆ ''ಯಾರು ತನ್ನ ಸ್ವಾರ್ಥಕ್ಕಾಗಿ ಜೀವಿಸುತ್ತಾರೋ, ಅವರು ಕಾಲಾನಂತರ ಮರೆತು ಹೋಗುತ್ತಾರೆ. ಯಾರು ಇತರರಿಗಾಗಿ, ಸಮಾಜದ ಉದ್ಧಾರಕ್ಕಾಗಿ, ಪರಹಿತಕ್ಕಾಗಿ ಬದುಕುತ್ತಾರೋ ಅವರನ್ನು ಎಂದಿಗೂ ಮರೆಯುವುದಿಲ್ಲ, ಅಂತಹವರು ನಿತ್ಯ ಸ್ಮರಣೀಯರು'' ಎಂದು ವಿದ್ಯಾರ್ಥಿನಿ ನೀಡಿದ ಈ ಉತ್ತರಕ್ಕಾಗಿ ತರಗತಿಯಲ್ಲಿದ್ದ ಎಲ್ಲ ವಿದ್ಯಾರ್ಥಿಗಳು ಚಪ್ಪಾಳೆ ತಟ್ಟಿ ಅಭಿನಂದಿಸುತ್ತಾರೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಲು ಹೊರಟ ವಿಷಯ ಮತ್ತು ಉದ್ದೇಶ ಬಹು ಸ್ಪಷ್ಟವಾಗಿತ್ತು ಎಂಬುದು ಈ ಸಂಗತಿಯಿಂದ ನಮಗೆ ತಿಳಿಯುತ್ತದೆ.

ಹೀಗೆ ನಮ್ಮ ನಾಡು, ನುಡಿ, ದೇಶಕ್ಕಾಗಿ ತಮ್ಮ ಜ್ಞಾನ, ಧನ, ಜೀವನವನ್ನೇ ಸಮರ್ಪಿಸಿಕೊಂಡ ಮಹನೀಯರನ್ನು ನಾವು ಮರೆಯಲು ಸಾಧ್ಯವೇ ಇಲ್ಲ. ಅವರು ನಿತ್ಯ ಸ್ಮರಣೀಯರು. ಇದಕ್ಕೆ ಪೂರಕವೆಂಬಂತೆ ಕವಿ ಕೆ.ಸಿ. ಶಿವಪ್ಪರವರು ಒಂದು ಮುಕ್ತಕದಲ್ಲಿ ಹೀಗೆ ಹೇಳುತ್ತಾರೆ.

ಸಿರಿತನದ ಉತ್ತುಂಗ ನೀ ಏರಿ ನಿಂತಾಗ
ಪರಹಿತವ ನೆನೆದರದು ಜೀವಸಮೃದ್ಧಿ.
ಉಪಕಾರವೆಸಗಿದರೆ ಇರುವೆ ಜನಮನದಲ್ಲಿ
ಜನಕೆ ಹಿತನೆರಳಾಗು ಮುದ್ದುರಾಮ.

ಯಾರೇ ಆಗಲಿ, ಎಂತಹ ಭೌತಿಕ ಶ್ರೀಮಂತಿಕೆಯನ್ನು ಹೊಂದಿದ್ದರೂ, ಯಾವುದೇ ಅಧಿಕಾರ ಉಪ್ಪರಿಗೆಯ ಮೇಲೆ ಕೂತಿದ್ದರೂ ಅದರ ಮೂಲಕ ಉಪಕಾರವನ್ನು, ಸತ್ಕಾರ್ಯಗಳನ್ನು, ಪರಹಿತ ಕಾರ್ಯಗಳನ್ನು ನೆರವೇರಿಸಿದವರು ಮಾತ್ರ ಬಾಳಿನಲ್ಲಿ ಧನ್ಯತೆಯನ್ನು ಪಡೆಯುತ್ತಾರೆ. ಅದು ಮಾನವಮಾತ್ರ ಲಕ್ಷಣವೂ ಹೌದು. ಜೊತೆಗೆ ಅವರೆಂದೂ ಜನಮನದಲ್ಲಿ ನೆಲೆಸಿರುತ್ತಾರೆ ಎಂಬುದು ಕವಿಯ ಅಭಿಮತ.

ಈ ರೀತಿ ಸಮಾಜಕ್ಕಾಗಿ ತಮ್ಮ ಅಪಾರ ಜ್ಞಾನ, ಬುದ್ಧಿಶಕ್ತಿ, ಸಮಯವನ್ನು ನಮ್ಮ ನಾಡು, ನುಡಿ, ದೇಶಕ್ಕಾಗಿ ಸಮರ್ಪಿಸಿಕೊಂಡ ಮಹಾನ್ ಚೇತನಗಳಲ್ಲಿ ಒಬ್ಬರಾದ ಸರ್ ಎಂ. ವಿಶ್ವೇಶ್ವರಯ್ಯರವರ ಜನ್ಮ ದಿನವನ್ನು ಸೆಪ್ಟೆಂಬರ್ 15 ರಂದು ಇಂಜಿನಿಯರ್ ದಿನ ಎಂದು ದೇಶಾದ್ಯಂತ ಆಚರಿಸುತ್ತಿದ್ದೇವೆ. ಅವರು ಅಭಿವೃದ್ಧಿಯ ಹರಿಕಾರರಾಗಿ ಸಮಾಜಕ್ಕೆ ನೀಡಿರುವ ಅಪಾರವಾದ ಕೊಡುಗೆಗಳಿಂದಾಗಿ ಎಂದೆಂದಿಗೂ ಜನಮನದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದರೆ ತಪ್ಪಾಗಲಾರದು. ಅಂತಹ ಮಹನೀಯರ ಸ್ಮರಣೆಯನ್ನು ಮಾಡಬೇಕಾದದ್ದು ನಮ್ಮೆಲ್ಲರ ಕರ್ತವ್ಯವೂ ಹೌದು.

ವಿಶ್ವಕಂಡ ಮಹೋನ್ನತ ಸಿವಿಲ್ ಇಂಜಿನಿಯರ್ ಮತ್ತು ದಕ್ಷ ಆಡಳಿತಗಾರರಾದ ವಿಶ್ವೇಶ್ವರಯ್ಯರವರು ನಮ್ಮ ರಾಷ್ಟ್ರದ ಸರ್ವೋತ್ತಮ ನಾಗರಿಕ ಪ್ರಶಸ್ತಿಯಾದ 'ಭಾರತರತ್ನ' ವನ್ನು ಪಡೆದ ಪ್ರಥಮ ಕನ್ನಡಿಗ. ಮೈಸೂರು ಸಂಸ್ಥಾನದ ಮುಖ್ಯ ಇಂಜಿನಿಯರ್ ಆಗಿ, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯಾಗಿ, ಮೈಸೂರು ಸಂಸ್ಥಾನದ ದಿವಾನರಾಗಿ ವೈಶಿಷ್ಟ್ಯಪೂರ್ಣವಾದ ಕೆಲಸಗಳನ್ನು ಮಾಡಿ ತಮ್ಮ ಪ್ರಾಮಾಣಿಕತೆ, ಕರ್ತವ್ಯಪರತೆ, ಸರಳತೆಯಿಂದ ಅದರಲ್ಲೂ ಸಾಮಾನ್ಯ ಜನರು ಹಾಗೂ ರೈತರ ಬಗ್ಗೆ ಅವರಿಗಿದ್ದ ಕಾಳಜಿ ತುಡಿತದಿಂದ ನಿರ್ವಹಿಸಿದ ಅದ್ವಿತೀಯವಾದ ಕಾರ್ಯಗಳ ಪೈಕಿ ಕಾವೇರಿ ನದಿಗೆ ಅಡ್ಡಲಾಗಿ ಕನ್ನಂಬಾಡಿ ಅಣೆಕಟ್ಟು ಕಟ್ಟಿದ್ದು ಅವರ ಮಹತ್ಸಾಧನೆ.

ಮೈಸೂರು ಮತ್ತು ಮಂಡ್ಯ ಭಾಗಗಳಲ್ಲಿ ಲಕ್ಷಾಂತರ ಎಕರೆ [illegible] ಲಕ್ಷಾಂತರ [illegible] ಕಾವೇರಿ ನದಿಯ [illegible] ಮಾಡುವ [illegible] 1911 ರಲ್ಲಿ [illegible] ಮಂಡ್ಯ ಭಾಗದಲ್ಲಿ [illegible] ಆ ಭಾಗದ ರೈತರು [illegible] ಸಾಕಷ್ಟು [illegible] ಎಂ.ವಿ.ಯವರು [illegible] ನಮ್ಮ ದೇಶದ ಅಗ್ರಗಣ್ಯ [illegible] ಜೆ.ಆರ್.ಡಿ. ಟಾಟಾ [illegible] ಇರಿಸಿಕೊಂಡಿದ್ದರು.

ವಿಶ್ವೇಶ್ವರಯ್ಯರವರು ನಮ್ಮ ದೇಶದ [illegible] ಬ್ಯಾಂಕಿಂಗ್ ಹಾಗೂ ಆರ್ಥಿಕ ಕ್ಷೇತ್ರದ ಸುಧಾರಣೆ, ಮಹಿಳಾ ಸಮಾನತೆ ಮತ್ತು ಶಿಕ್ಷಣ, ವಿದ್ಯುತ್ ಉತ್ಪಾದನೆ, ನೀರಾವರಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಗಳು ವಿಶ್ವದ ಗಮನವನ್ನು ಸೆಳೆಯುವುದಷ್ಟೇ ಅಲ್ಲ ಅನೇಕ ಗೌರವಗಳು ಹಾಗೂ ಪ್ರಶಸ್ತಿಗಳು ಇವರನ್ನು ಹುಡುಕಿಕೊಂಡು ಬಂದಿವೆ. 101 ವರ್ಷ ಸುದೀರ್ಘ ಹಾಗೂ ಸಾರ್ಥಕ ಜೀವನ ನಡೆಸಿದ ಸರ್.ಎಂ. ವಿಶ್ವೇಶ್ವರಯ್ಯನವರು ನಮ್ಮ ನಾಡು ನುಡಿ ದೇಶಕ್ಕಾಗಿ ದುಡಿದ ಕನ್ನಡಿಗ ಎಂಬುದು ನಮ್ಮೆಲ್ಲರ ಹೆಮ್ಮೆ.

ಆಂಗ್ಲ ಪತ್ರಿಕೆಯೊಂದು ನಡೆಸಿದ ಸಮೀಕ್ಷೆಯ ಮೂಲಕ ಗುರುತಿಸಲಾದ ಶತಮಾನದ ಮೂರು ಶ್ರೇಷ್ಠ ಭಾರತೀಯರಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರೂ ಒಬ್ಬರು. ಇಂತಹ ಮಹಾನ್ ವ್ಯಕ್ತಿಯ ಜನ್ಮದಿನವನ್ನು ಇಂಜಿನಿಯರ್ ದಿನ ಎಂದು ಆಚರಿಸುತ್ತಿರುವುದು ಅರ್ಥಪೂರ್ಣವೆಂದೇ ಹೇಳಬಹುದು. ಈ ಮಹನೀಯರ ಬದುಕಿನ ನಡೆ ನುಡಿ ನಮ್ಮ ಜೀವನದ ಹಾದಿಗೆ ಕಣ್ಬೆಳಕಾಗಿರಲಿ.

''[illegible] ನಿತ್ಯ ಸ್ಮರಣೀಯರು''

ವಿಜಯ ಕರ್ನಾಟಕ

# ಸಿರಿನಾಡು ಕಟ್ಟಿದ ಸರ್.ಎಂವಿ

## ಹಲವು ರಾಜ್ಯಗಳ ಪಾಲಿಗೆ ಅವಿಸ್ಮರಣೀಯ ತಂತ್ರಜ್ಞ

■ ಡಾ. ವಿ.ಬಿ ಆರತೀ




ಭಾರತದ ಸಂಪನ್ಮೂಲಗಳ ಲೂಟಿ ಮಾಡುತ್ತ, ಜನಜೀವನವನ್ನು ಅಸ್ತವ್ಯಸ್ತ ಗೊಳಿಸಿದ್ದ ಆಂಗ್ಲರ ಆಡಳಿತದ ಕಾಲವದು. ನಂದೀಬೆಟ್ಟದ ಬದಿಯ ಮುದ್ದೇನಹಳ್ಳಿ ಗ್ರಾಮದಲ್ಲಿ ನೀರಿನ ತೀವ್ರ ಅಭಾವವಿತ್ತು. ಐದಾರು ಮೈಲಿ ನಡೆದು ನೀರು ತರಬೇಕಾದ ಪರಿಸ್ಥಿತಿ. ಆ ಹಳ್ಳಿಯ ಬಡ ಕುಟುಂಬದ ಹೆಣ್ಣುಮಗಳೊಬ್ಬಳು ಇದನ್ನು ನೋಡಿ ಮರುಗಿ, ತನ್ನ ಪುಟ್ಟ ಮಗನಿಗೆ ಹೇಳಿದಳು- ''ಮಗು, ನೀನು ದೊಡ್ಡವನಾದ ಮೇಲೆ ಏನಾದರೂ ಮಾಡಿ ಇಡೀ ಹಳ್ಳಿಗೆ ನೀರಿನ ವ್ಯವಸ್ಥೆಯನ್ನು ಮಾಡಿಸಬೇಕು. ಮಾತು ಕೊಡು,'' ಎಂದಳು. ತಾಯಿ ಮಾತು ಆ ಪುಟ್ಟಬಾಲನಿಗೆ ಜೀವನದ ಧ್ಯೇಯವನ್ನು ತೆರೆದಿಟ್ಟಿತು. ಆ ತಾಯಿಯೇ ವೆಂಕಟಲಕ್ಷ್ಮಮ್ಮ, ಆ ಬಾಲಕನೇ ವಿಶ್ವೇಶ್ವರಯ್ಯ. ಸರ್ ಎಂ ವಿಶ್ವೇಶ್ವರಯ್ಯನವರು ತನ್ನ ಆ ಹಳ್ಳಿಗಷ್ಟೇ ಅಲ್ಲ, ರಾಜ್ಯಕ್ಕೂ ರಾಷ್ಟ್ರಕ್ಕೂ ವಿಶ್ವದ ಹಲವಾರು ಪ್ರದೇಶಗಳಿಗೂ ಹಲವಾರು ದೊಡ್ಡ ಸರಕಾರಿ-ಖಾಸಗಿ ಯೋಜನೆಗಳನ್ನು ಮಾಡಿಸಿ ಲಕ್ಷೋಪಲಕ್ಷ ಜನರಿಗೆ ನೀರನ್ನೊದಗಿಸಿದರು.

**ಬೀದಿ ದೀಪದಡಿ ಓದು, ವಾರಾನ್ನವೇ ವರ:** ಸಂಸ್ಕೃತ ಪಂಡಿತರಾಗಿದ್ದ ತಂದೆ ಮೋಕ್ಷಗುಂಡಂ ಶ್ರೀನಿವಾಸಶಾಸ್ತ್ರಿಗಳಿಂದ ಅಧ್ಯಯನಶೀಲತೆ, ತರ್ಕಯುತ ಚಿಂತನೆಗಳನ್ನು ಮೈಗೂಡಿಸಿಕೊಂಡ ವಿಶ್ವೇಶ್ವರಯ್ಯನವರು ತಾಯಿಯಿಂದ ಸೇವಾಪರತೆಗಳನ್ನು ಮೈಗೂಡಿಸಿಕೊಂಡರು. ಹಳ್ಳಿಮಕ್ಕಳಿಗಿದ್ದ ಆಯ್ಕೆ ಆರೂವರೆ ಕಿ.ಮಿ.ದೂರದ ಚಿಕ್ಕಬಳ್ಳಾಪುರದ ಆಂಗ್ಲರ ಶಾಲೆಯೊಂದೇ ಆಗಿತ್ತು. ಬಾಲಕ ವಿಶ್ವೇಶ್ವರಯ್ಯ ದಿನವೂ ಶಾಲೆಗೆ ನಡೆದು ಹೋಗಿ ಕಲಿಯುತ್ತಿದ್ದನು. ಎಷ್ಟು ವಿದ್ಯಾಸಕ್ತಿಯೆಂದರೆ ಗ್ರಾಮದಲ್ಲಿ ಕರೆಂಟ್ ಇರಲಿಲ್ಲ. ಸಾಯಂಕಾಲ ಓದಿಕೊಳ್ಳಲು, ಶಾಲು ಹೊದ್ದು ಮೂರು.ಕಿ.ಮಿ ನಡೆದು ಹೋಗಿ, ಮುಖ್ಯರಸ್ತೆಯ ಬೀದಿ ದೀಪದಡಿ ಓದುತ್ತಿದ್ದನು!

ಹನ್ನೆರಡನೇ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡ ವಿಶ್ವೇಶ್ವರಯ್ಯ, ಪರಿವಾರದ ಆರ್ಥಿಕ ಮುಗ್ಗಟ್ಟಿನ ನಡುವೆಯೂ ಪ್ರೌಢಶಾಲಾ ವ್ಯಾಸಂಗಕ್ಕಾಗಿ ಬೆಂಗಳೂರಲ್ಲಿ ನೆಂಟರಿಷ್ಟರ ಮನೆಗಳಲ್ಲಿ ವಾರಾನ್ನ ಮಾಡುತ್ತ ವ್ಯಾಸಂಗ ಮಾಡಿದರು. (ವಾರದಲ್ಲಿ ಒಂದು ದಿನ ಒಬ್ಬರ ಮನೆಯಲ್ಲಿ ಉಣ್ಣುವ ವ್ಯವಸ್ಥೆ) ಚಿಕ್ಕಮಕ್ಕಳಿಗೆ ಸಾಯಂಕಾಲ ಪಾಠ ಹೇಳುತ್ತ ಪುಸ್ತಕ ಮತ್ತು ಅಗತ್ಯವಸ್ತುಗಳನ್ನು ಕೊಳ್ಳುತ್ತಿದ್ದರು. ಪುಣೆಯಲ್ಲಿನ College of Engineering ಗೆ ಸೇರಿ Civil Engineering ಪದವೀಧರರಾಗಿ ವಿಶ್ವವಿದ್ಯಾಲಯಕ್ಕೇ ಮೊದಲಿಗರೆನಿಸಿದರು.

**ದು ಜಿನಿಯರ್ಸ್**

**ಹಲವು ರಾಜ್ಯಗಳಿಗೆ ಕಣ್ಮಣಿ:** ಮೊದಲು ಉದ್ಯೋಗ ಮುಂಬೈನ ಬ್ರಿಟಿಷ್ ಸರಕಾರದ ನಾಸಿಕ್ ನಗರದ ಪಿಡಬ್ಲೂಡಿನಲ್ಲಿ, ಅಸಾಧಾರಣ ಕಾರ್ಯದಕ್ಷತೆಯ ಮೂಲಕ ಎಲ್ಲರ ಮನಗೆದ್ದರು. ಪ್ರಾಂತ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಶಕ್ತಿಮೀರಿ ಶ್ರಮಿಸಿದರು. ಸುಕ್ಕೂರು ಕ್ಷೇತ್ರಕ್ಕೆ ಸಿಂಧುನದಿಯ ನೀರನ್ನು ತರುವಲ್ಲಿ ಉಂಟಾದ ಭೌಗೋಳಿಕ ಸಮಸ್ಯೆಗಳನ್ನು ಎದುರಿಸಲಾಗದೆ ಕೈಬಿಡಲಾಗಿದ್ದ ಕಾಲದಲ್ಲಿ, ವಿಶ್ವೇಶ್ವರಯ್ಯನವರು ಆ ಸಮಸ್ಯೆಯನ್ನು ಚಾಕಚಕ್ಯತೆಯಿಂದ ಪರಿಹರಿಸಿ, ಯೋಜನೆಯನ್ನು ಪುನಃ ಸಫಲವಾಗಿ ಜಾರಿಗೊಳಿಸಿದರು. ಆನಂತರ ಆಂಧ್ರದ ನೀರಾವರಿ ವಿಭಾಗಕ್ಕೆ ಸೇರಿದರು. ಹೈದರಾಬಾದ್‌ನಲ್ಲಿ ಮೂಸಾನದಿಯ ಅನಿಶ್ಚಿತ ಪ್ರವಾಹಗಳ ದೊಡ್ಡ ಸಮಸ್ಯೆಗೆ ಉತ್ತಮ ತಂತ್ರಜ್ಞಾನದ ಶಾಶ್ವತ ಪರಿಹಾರವನ್ನು ಕಲ್ಪಿಸಿ ಖ್ಯಾತರಾದರು. ಒಡಿಶಾ ರಾಜ್ಯಕ್ಕೂ, ವಿಶಾಖಪಟ್ಟಣದ ಹಡಗುತಾಣಕ್ಕೂ ಸಮುದ್ರದ ತೇವಾಂಶ ಹಾಗೂ ನೀರು-ಕೊರತೆಗಳಿಂದ ಶಾಶ್ವತ ರಕ್ಷಣೆಯನ್ನು ಕಲ್ಪಿಸಿದರು. ದೇಶದಲ್ಲೂ ವಿದೇಶಗಳಲ್ಲೂ ಹಲವಾರು ಭವ್ಯವಾದ



ಅಣೆಕಟ್ಟುಗಳನ್ನು ಕಟ್ಟಿಸಿದ, ರಸ್ತೆ-ಸಾರಿಗೆಯ ವಿನ್ಯಾಸಗಳನ್ನೂ, ಉದ್ಯೋಗಜನಕ ಕಾರ್ಖಾನೆ-ಯೋಜನೆಗಳನ್ನೂ ರೂಪಿಸಿದ ಖ್ಯಾತಿ ಇವರಿಗೆ ಸಲ್ಲುತ್ತದೆ. ಅಣೆಕಟ್ಟುಗಳನ್ನು ನೀರಿನ ಒತ್ತಡದಿಂದ ಕಾಪಾಡಲು Automatic water barrier gates ಗಳನ್ನು ಆವಿಷ್ಕರಿಸಿದ ಪೇಟೆಂಟ್ ಇವರ ಹೆಸರಲ್ಲೇ ಇದೆ.


ಈ ಕರ್ಮಯೋಗಿಯನ್ನು ಗುರುತಿಸಿದ ಮೈಸೂರಿನ ಮಹಾರಾಜರು ಮೈಸೂರು ರಾಜ್ಯದ ದಿವಾನ್‌ರನ್ನಾಗಿ ನೇಮಿಸಿದರು. ತಮ್ಮ ಅಧಿಕಾರದ ಆರು ವರ್ಷಗಳಲ್ಲಿ 6500ಕ್ಕೂ ಹೆಚ್ಚು ಶಾಲೆಗಳನ್ನು ನಿರ್ಮಿಸಿದಲ್ಲದೆ ವಿಜ್ಞಾನ, ತಂತ್ರಜ್ಞಾನ, ಕ[illegible] ಸಾಹಿತ್ಯ ಉದ್ಯೋಗಜನಕ ಕಾರ್ಖಾನೆಗಳು, ಸಂಸ್ಥೆ[illegible] ಮುಂತಾದವುಗಳನ್ನು ಒಂದಾದ ಮೇಲೊಂದರಂತೆ ಸ್ಥಾಪಿಸುತ್ತ ಅಪಾರ ಉದ್ಯೋಗಾವಕಾಶಗಳನ್ನು ಕಲ್ಪಿಸಿದರು. ಬ್ಯಾಂಕಿಂಗ್, ಹಣಕಾಸು ಕ್ಷೇತ್ರಗಳಲ್ಲೂ ಅನೇಕ ಯಶಸ್ವಿ ಯೋಜನೆಗಳನ್ನು ಜಾರಿಗೊಳಿಸಿದರು- ಮುಂಬೈನಲ್ಲಿ premier Aircraft Factory, ಬೆಂಗಳೂರಿನಲ್ಲಿ HAL, KS&DL, State Bank of Mysore, Sandal oil factory, Century club, ಕನ್ನಡ ಸಾಹಿತ್ಯ ಪರಿಷತ್, Chrome Tanning Factory, Mysore Chamber of Commerce, University of Agricultural Sciences, Maharani's college for women, Public library, KRS dam, -ಹೀಗೆ ಪಟ್ಟಿ ಬೆಳೆಯುತ್ತದೆ. ಏಶಿಯಾದಲ್ಲೇ ಅತ್ಯುತ್ತಮ ವಿನ್ಯಾಸದ ಬಡಾವಣೆ ಎಂಬ ಮಾನ್ಯತೆಗೆ ಪಾತ್ರವಾದಂತಹ ಬೆಂಗಳೂರಿನ ಜಯನಗರ ಬಡಾವಣೆಯ ವಿನ್ಯಾಸವನ್ನು ರೂಪಿಸಿದವರೂ ವಿಶ್ವೇಶ್ವರಯ್ಯನವರೇ! ಬ್ರಿಟಿಷ್ ಸರಕಾರದ ಉದ್ದೇಶಪೂರ್ವಕ ವಿರೋಧಗಳನ್ನೂ ಹಣದ ಅಭಾವವನ್ನೂ ನಿರಂತರವಾಗಿ ಎದುರಿಸುತ್ತಲೇ ಛಲಬಿಡದೆ ಭದ್ರಾವತಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿದರು. ದುಡ್ಡಿಲ್ಲದೆ ಮುಚ್ಚಿ ಹೋಗುವ ಸ್ಥಿತಿಗಿಳಿದ ಕಾರ್ಖಾನೆಯನ್ನು ಉಳಿಸಲು ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ, ತಮ್ಮ ಎರಡು ವರ್ಷಗಳ ಸಂಬಳವನ್ನೇ ತ್ಯಾಗ ಮಾಡಿ, ಎಲ್ಲರಿಗೂ ಸಂಬಳವನ್ನಾಗಿ ಹಂಚಿದ್ದೂ ಉಂಟು! ಕೊನೆಗೂ ಇವರ ಆಗ್ರಹಕ್ಕೂ, ಜನರ ನಿಂದೆಗೂ ಸೋತು ಬ್ರಿಟಿಷ ಸರಕಾರ ಕಾರ್ಖಾನೆಗೆ ಹಣ ನೀಡುವುದನ್ನು ಮುಂದುವರೆಸಬೇಕಾಯಿತು.

ರಾಜರ ಸಭೆಗಳಲ್ಲಿ ಬ್ರಿಟಿಷರನ್ನು ಕುರ್ಚಿಗಳ ಮೇಲೂ ಭಾರತೀಯರನ್ನು ನೆಲದ ಮೇಲೂ ಕೂರಿಸುವ ತಾರತಮ್ಯವನ್ನು ನಿಲ್ಲಿಸಿ, ಎಲ್ಲರಿಗೂ ಸಮಾನ ಆಸನ-ವ್ಯವಸ್ಥೆಯನ್ನು ತಂದವರು ಸ್ವಾಭಿಮಾನದ ವಿಶ್ವೇಶ್ವರಯ್ಯನವರು. ಪ್ರಾಮಾಣಿಕತೆಗೆ ಮತ್ತೊಂದು ಹೆಸರೇ ವಿಶ್ವೇಶ್ವರಯ್ಯ! ಅಧಿಕಾರವಿದೆಯೆಂದು ನೆಂಟರಿಷ್ಟರಿಗೆ ಸರಕಾರದ ಅನುಕೂಲಗಳನ್ನೆಂದೂ ಕಲ್ಪಿಸಿಕೊಡುತ್ತಿರಲಿಲ್ಲ. ಭ್ರಷ್ಟಾಚಾರವನ್ನು ನಿಯತ್ರಿಸಬೇಕಾದರೆ, ವಿಶ್ವೇಶ್ವರಯ್ಯನಂತಹವರ ಜೀವನಸಂದೇಶಗಳನ್ನು ಎಲ್ಲರ ಮನಗಳಿಗೆ ತಲುಪಿಸುತ್ತಿರಬೇಕು.

editor@vijaykarnataka.com

Scanned with Oken Scanner

THE TIMES OF INDIA, MYSURU
THURSDAY, SEPTEMBER 15, 2022



# UVCE: A Legacy institution's transformation

**Basavaraj Bommai**
Chief Minister of Karnataka


It was the year 1917. Nalvadi Krishnaraja Wodeyar, considered to be among the most progressive kings of his time, was ruling Mysore. Sir M Visvesvaraya, equally talented and a visionary, was his Diwan. The dreams and plans that both of them had for the development of the then Mysore state have remained eternal even after a hundred years have passed.

And they seem very relevant even now. One of them is the establishment of a government engineering college at a strategic location in Bengaluru. The college is now 107 years old and is located within walking distance of the Vidhana Soudha, Central College and SJ Polytechnic. Then, the institution was called Government Engineering College and later became University Visvesvaraya College of Engineering (UVCE), and today, it is Sir M Visvesvaraya Engineering University.

It is pertinent to note that this was the first engineering college established in the then state of Mysore and the fifth in the entire country. It was the view of Krishnaraja Wodeyar and Sir MV that such a college was needed to create talented people with all the technical and engineering skills required for a modern world. The institution has lived up to the dreams they envisioned and has produced some eminent personalities like Dr V K Atre, M R Srinivas, Roddam Narasimha, Prahlad, Anuradha, Vijaya Bhaskar, Ramesh Aravind and many others.

However, it seemed like this glorious era was fading. This red building, camouflaged behind a canopy of trees in Bengaluru's Krishnaraja Circle, was in a dilapidated condition a few years ago, and became just one amongst the many engineering colleges in the State. This is when our government in Karnataka decided to revive this proud institution, which could have otherwise faded into memory.

Three years ago, when our government came into existence in the state, Dr C N Ashwath Narayan took over the responsibility of the higher education department, we discussed the history of UVCE, importance and its contributions to the nation building process. I myself had long dreamt of studying in the reputed UVCE college. We concurred this institution was in dire need of a holistic revamp.



Experts suggested that UVCE should be converted into an institution of excellence on the lines of IITs and IIMs in the country. On these lines, we instituted a committee under the leadership of Professor S Sadagopan to suggest how UVCE could be made a symbol of national pride and be elevated to the status of IITs or IIMs.

The committee suggested fundamental and profound changes and noted that the college should be made an independent and autonomous university, and this university should be financially, academically and administratively independent and autonomous in all respects. We accepted the Committee's recommendation and a notification in this regard was also issued in February 2022, followed by allocating a budget of Rs 150 crore annually to this purpose. Recently, the Cabinet has approved Rs 85 crore for improvement of the Mechanical Block.

Like IITs and IIMs, this too will be a government-private partnership model. In addition, the Board of Directors shall have complete independence to oversee all the affairs of the institution. B Muthuraman, a BTech from IIT Madras and MBA from XLRI Institute, Jamshedpur, who served as vice-president in Tata Steel, has been appointed as the first chairman of this new University. Like him, there are many experienced members on the management board.

They shall design the curriculum to suit the contemporary needs and recruit experienced faculty to deliver them. The renovation of the university has now just begun at a cost of Rs 10 crore and every possible step is being taken to bring back its sheen. The Alumni Association headed by Major General Neelakanthappa has set up a state-of-the-art laboratory and they have promised to invest another Rs 30 crore more.

In the next eight years i.e. by 2030, I dream of bringing back the lost glory of this renowned college and elevate it to a position of eminence in the league of the IITs, IIMs and other global centres of technical excellence. In this regard, the University shall be formally inaugurated on Sir M Visvesvaraya's birthday i.e. today, September 15 and the Higher Education Department shall release a roadmap of how the University shall shape up by 2030.

"Dare to dream, then decide to do" — this fundamental tenet is the driving force behind our goal to reinvigorate the lost sheen of this great cradle of learning started by the legend Sir M Visvesvaraya.

Scanned with Oken Scanner



# ಗುರುವಿಗೆ ಹೃದಯದಲ್ಲಿ ಸ್ಥಾನ: ರವಿ

**ಚಿಕ್ಕಮಗಳೂರು:** ಅರಿವು ಮೂಡಿಸುವವರು ಗುರು ಎನಿಸಿಕೊಳ್ಳುತ್ತಾರೆ. ಅವರು ವಿದ್ಯಾರ್ಥಿಗಳು ಹೃದಯದಲ್ಲಿ ಸ್ಥಾನ ಪಡೆಯುತ್ತಾರೆಂದು ಶಾಸಕ ಸಿ.ಟಿ.ರವಿ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ, ನಗರಸಭೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಜಿಲ್ಲಾ ಮತ್ತು ತಾಲೂಕು ಶಿಕ್ಷಕರ ದಿನಾಚರಣಾ ಸಮಿತಿ, ಶಿಕ್ಷಣ ಇಲಾಖೆ, ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಹಯೋಗದಲ್ಲಿ ಸೋಮವಾರ ಆದಿಚುಂಚನಗಿರಿತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಂಡಿದ್ದ ಡಾ. ಸರ್ವಪಲ್ಲಿರಾಧಾಕೃಷ್ಣನ್ 135ನೇ ಜನ್ಮ ದಿನೋತ್ಸವ ಮತ್ತು 61ನೇ ಶಿಕ್ಷಕರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ದೇವರ ಸ್ಥಾನವನ್ನು ನೀಡಲಾಗಿದೆ. ಗುರುಗಳಿಗೆ ಇತಿಹಾಸ ಸೃಷ್ಟಿಸುವ ಸಾಮರ್ಥ್ಯವಿದೆ ಗುರು ಹಾಗೂ ಶಿಕ್ಷಕ ಈ ಪದಗಳ ನಡುವೆ ಅಗಾಧ ವ್ಯತ್ಯಾಸವಿದೆ. ಕರ್ತವ್ಯ ನಿರ್ವಹಿಸುವವರು ಶಿಕ್ಷಕ ಎನಿಸಿಕೊಂಡರೆ ಅರಿವು ಮೂಡಿಸುವವರು ಗುರು ಎನಿಸುತ್ತಾರೆ. ಅರಿವು ಮೂಡಿಸುವ ಗುರು ಹೃದಯದಲ್ಲಿ ಸ್ಥಾನ ಪಡೆಯುತ್ತಾರೆಂದರು.



- ಡಾ. ಸರ್ವಪಲ್ಲಿರಾಧಾಕೃಷ್ಣನ್ 135ನೇ ಜನ್ಮ ದಿನೋತ್ಸವ
- ನಗರದಲ್ಲಿ 61ನೇ ಶಿಕ್ಷಕರ ದಿನಾಚರಣೆ ಉದ್ಘಾಟನೆ

> ಡಾ. ಸರ್ವಪಲ್ಲಿರಾಧಾಕೃಷ್ಣನ್ ರಾಯಭಾರಿಯಾಗಿದ್ದಾಗ ಭಾರತದ ಸಂಸ್ಕೃತಿಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸುವ ಮೂಲಕ ಭಾರತದ ಬಗ್ಗೆ ವಿದೇಶಗಳಿಗೆ ಇರುವ ಕಲ್ಪನೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದವರು.
>
> – ಕೆ.ಎನ್. ರಮೇಶ್, ಜಿಲ್ಲಾಧಿಕಾರಿ.

ಒಂದು ಶಿಲೆ ಉತ್ತಮ ಶಿಲ್ಪಿಯ ಕೈಗೆ ಸಿಕ್ಕಿದರೆ ಸುಂದರ ಶಿಲ್ಪವಾಗುವ ಹಾಗೆ ಉತ್ತಮಗುರುವಿನ ಕೈಗೆ ಸಿಕ್ಕಿದ ವಿದ್ಯಾರ್ಥಿಗಳು ಇತಿಹಾಸವನ್ನು ಸೃಷ್ಟಿಸುವ ವ್ಯಕ್ತಿಗಳಾಗಿ ಬದಲಾಗುತ್ತಾರೆ. ಈ ಹಿನ್ನೆಯಲ್ಲಿಯೆ ಭಾರತದಲ್ಲಿ ಗುರುವಿಗೆ ದೇವರ ಸ್ಥಾನ ನೀಡಲಾಗಿದೆ. ಅಜ್ಞಾನದ ಕತ್ತಲನ್ನು ದೂರಗೊಳಿಸಿ ಜ್ಞಾನದ ಬೆಳಕನ್ನು ನೀಡಿ ಗುರಿಯಕಡೆಗೆ ಮುನ್ನಡೆಸಲು ಗುರುವಿನ ಮಾರ್ಗದರ್ಶನಬೇಕೆಂದು ಹೇಳಿದರು.

ಎಲ್ಲವನ್ನು ಬದಲಿಸುವ, ಎಲ್ಲವನ್ನು ಅ… ಹಾಕುವ ಹಾಗೂ

»

ಅಧ್ಯಕ್ಷ ವರಸಿದ್ಧಿ
…ಮಗಳೂರು ಜಿಲ್ಲಾ

ಕನ್ನಡಪ್ರಭ
ಮಂಗಳವಾರ 6.9.2022

# ಇತಿಹಾಸ ಸೃಷ್ಟಿಸುವ ಶಕ್ತಿ ಗುರುವಿಗಿದೆ: ಸಿ.ಟಿ.ರವಿ

## ಚಿಕ್ಕಮಗಳೂರು ಜಿಲ್ಲಾಡಳಿತದಿಂದ ರಾಧಾಕೃಷ್ಣನ್ ಜನ್ಮದಿನೋತ್ಸವ, ಶಿಕ್ಷಕರ ದಿನಾಚರಣೆ | 24 ಶಿಕ್ಷಕರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ

• ಕನ್ನಡಪ್ರಭ ವಾರ್ತೆ ಚಿಕ್ಕಮಗಳೂರು

ಇತಿಹಾಸವನ್ನು ಸೃಷ್ಟಿಸುವ ಶಕ್ತಿ, ಸಾಮರ್ಥ್ಯ ಗುರು ಎನ್ನುವ ಎರಡಕ್ಷರಕ್ಕಿದೆ. ಅಜ್ಞಾನದ ಕತ್ತಲನ್ನು ದೂರಗೊಳಿಸಲು ಜ್ಞಾನದ ಬೆಳಕು ಕೊಡುವ ಗುರು ಬೇಕು ಎಂದು ಶಾಸಕ ಸಿ.ಟಿ.ರವಿ ಹೇಳಿದರು.

ನಗರದ ಆದಿಚುಂಚನಗಿರಿ ತಾಂತ್ರಿಕ ಮಹಾ ವಿದ್ಯಾಲಯದ ಸಭಾಂಗಣದಲ್ಲಿ ಸೋಮವಾರ ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ 135ನೇ ಜನ್ಮದಿನೋತ್ಸವ ಮತ್ತು 61ನೇ ಶಿಕ್ಷಕರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಕಲ್ಲು ಶಿಲ್ಪಿ ಕೈಗೆ ಸಿಕ್ಕರೆ ಶಿಲೆಯಾಗುತ್ತದೆ. ಉತ್ತಮ ಗುರುವಿನ ಕೈಗೆ ಸಿಕ್ಕ ಮಕ್ಕಳೂ ಕೂಡ ಇತಿಹಾಸ ಸೃಷ್ಟಿಸುವ ವ್ಯಕ್ತಿಗಳಾಗುತ್ತಾರೆ. ಭಾರತದ ಸನಾತನ ಧರ್ಮ ದೇವರು ಎಂದು ಗುರುತಿಸಿದ್ದು, ಮನುಷ್ಯನಲ್ಲಿ ದೈವತ್ವ ಕಂಡಿದ್ದು ತಾಯಿ, ತಂದೆ ನಂತರ ಗುರುಗಳಲ್ಲಿ. ಒರ್ವ ವೈದ್ಯ ರೋಗಕ್ಕೆ ಚಿಕಿತ್ಸೆ ನೀಡಬಹುದು. ಔಷಧಿ ಕಂಡು ಹಿಡಿಯಬಹುದು, ವಿಜ್ಞಾನಿ ಹೊಸ ಸಂಶೋಧನೆ ಮಾಡಬಹುದು, ರಾಜಕಾರಣಿ ಜನ ನೆನಪಿನಲ್ಲಿರುವ ಕೆಲಸ ಮಾಡಬಹುದು. ಆದರೆ ಇವರೆಲ್ಲರನ್ನು ಸೃಷ್ಟಿಸುವ ಸಾಮರ್ಥ್ಯವಿರುವುದು ಗುರುವಿಗೆ ಮಾತ್ರ ಎಂದರು.

ತಂತ್ರಜ್ಞಾನವನ್ನು ಹುಟ್ಟು ಹಾಕಿದ್ದೇವೆ. ಆದರೆ ವಿಶ್ವೇಶ್ವರಯ್ಯನವರ ರೀತಿ ಪ್ರಾಮಾಣಿಕರನ್ನು ಹುಟ್ಟು ಹಾಕುವಲ್ಲಿ ಸೋತಿದ್ದೇವೆ. ಇದನ್ನು ಗಂಭೀರವಾಗಿ ಆಲೋಚಿಸಬೇಕಿದೆ. 2047ಕ್ಕೆ ದೇಶಕ್ಕೆ ಸ್ವಾತಂತ್ರ್ಯ ಬಂದು ನೂರು ವರ್ಷವಾಗಲಿದ್ದು, ಅಮೃತ ಮಹೋತ್ಸವದಿಂದ ಅಮೃತ ಕಾಲದೆಡೆಗೆ ಹೋಗುತ್ತಿದ್ದೇವೆ. ಆಧುನಿಕ ಸವಾಲುಗಳನ್ನು ಎದುರಿಸುವುದಕ್ಕೆ ಮಾತ್ರ ಸಾಮರ್ಥ್ಯ ಪಡೆಯುವುದಲ್ಲ, ನಮ್ಮ ಪಾರಂಪರಿಕ ಸಂಬಂಧವನ್ನು ಗಟ್ಟಿಗೊಳಿಸುವ ಕಡೆಗೂ ಆಲೋಚಿಸಬೇಕಾದ ಅವಶ್ಯವಿದೆ ಎಂದರು.

ಭಾರತದ ಸನಾತನ ಸಂಸ್ಕೃತಿ ತನ್ನ ಪ್ರಾರ್ಥನೆಯಲ್ಲಿ ದೇವರೇ ನನಗೆ ಒಳಿತು ಮಾಡು ಎನ್ನುವುದನ್ನು ಮಾತ್ರ ಕಲಿಸಲಿಲ್ಲ, ಸರ್ವೇ ಜನೋ ಸುಖಿನೋಭವಂತು ಎಂದು ಜಗತ್ತಿನ ಎಲ್ಲಾ ಜನ ಪ್ರಾಣಿ, ಪಕ್ಷಿ, ಸಸ್ಯ ಸಂಕುಲಗಳು ಸುಖವಾಗಿರಲಿ ಎಂದು ಪ್ರಾರ್ಥಿಸುತ್ತೇವೆ ಎಂದರು.

ಜಿಲ್ಲಾಧಿಕಾರಿ ಕೆ.ಎನ್.ರಮೇಶ್ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಗುರುಗಳಿಗೆ ಹಾಗೂ ಶಿಕ್ಷಕರಿಗೆ ಅತ್ಯುತ್ತಮ ಸ್ಥಾನವಿದ್ದು, ದೇಶದ ಭವಿಷ್ಯ ನಿರ್ಮಾಣ ಮಾಡುವಲ್ಲಿ ಗುರುಗಳ ಪಾತ್ರ ಮಹತ್ವದ್ದಾಗಿದೆ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ರಾಯಭಾರಿಯಾಗಿದ್ದಾಗ ಭಾರತದ ಸಂಸ್ಕೃತಿಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸುವ ಮೂಲಕ ದೇಶದ ಬಗ್ಗೆ ವಿದೇಶಿಯರಿಗಿದ್ದ ಕಲ್ಪನೆಯನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯಲು ಅಪಾರ ಕೊಡುಗೆ ನೀಡಿದರು ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಸುಬ್ರಾಯ ನಂಡೋಡಿ ಪ್ರಧಾನ ಉಪನ್ಯಾಸ ನೀಡಿ, ಶಿಕ್ಷಕರು ತಮ್ಮ ಸಮಸ್ಯೆ, ಸವಾಲುಗಳನ್ನು ಮತ್ತು ಜವಾಬ್ದಾರಿಯನ್ನು ನೆನಪಿಸಿಕೊಳ್ಳುವ ದಿನ. ಗುರು ಎಂದರೆ ಬ್ರಹ್ಮ, ಎಲ್ಲವನ್ನು ನಮ್ಮಲ್ಲೆ ಸೃಷ್ಟಿಸುವವರು ಗುರುಗಳು. ನಮಗೆ ಒಂದು ಜೀವ ಸೃಷ್ಟಿಯಾಗಿರುತ್ತದೆ. ಅದಕ್ಕೆ ಸಂಸ್ಕಾರ ಕೊಡುವ ಮೊಟ್ಟ ಮೊದಲ ಗುರು ತಾಯಿ. ಮನೆಯೇ ಒಂದು ಶಾಲೆ. ಆ ಶಾಲೆಯಲ್ಲಿ ಸಿಗ ಬೇಕಾದದ್ದು ಅಂಗ್ಲ ಶಿಕ್ಷಣವಲ್ಲ, ನಡವಳಿಕೆ, ವರ್ತನೆಯ ಶಿಕ್ಷಣ. ತಾರತಮ್ಯ, ಜಾತಿ, ಮತ, ಬೇಧ ಭಾವ ಮಾಡದೆ ಅಧ್ಯಾಪಕರು ಮಕ್ಕಳಲ್ಲಿ ಸೃಜನ ಶೀಲತೆಯ ಬೀಜ ಬಿತ್ತಿ, ಗೊಬ್ಬರ, ನೀರೆರೆದು ಪೋಷಿಸಬೇಕು. ಅಂತಹ ಲಾಲನೆ ಪಾಲನೆ ಗುರುಗಳು ಮಾಡಿದಾಗ ಭವ್ಯ ಭಾರತ ನಿರ್ಮಾಣವಾಗುತ್ತದೆ ಎಂದರು.

ಅಜ್ಞಾನ ಎಂಬುದು ಅಂಧಕಾರವಿದ್ದಂತೆ. ಅದನ್ನು ತೆಗೆದು ಹಾಕಲು ಜ್ಞಾನದ ಬೆಳಕು ಬೇಕು. ಆ ಜ್ಞಾನದ ಬೆಳಕು ಕೊಡುವ ಜವಾಬ್ದಾರಿ ಗುರುವಾದವನಿಗಿದೆ. ಅದು ಶಿಕ್ಷಣ ಕ್ಷೇತ್ರದಲ್ಲಿ ಮಾತ್ರವಲ್ಲ, ತಾಯಿ, ತಂದೆ, ಶಿಕ್ಷಕರು ಅಥವಾ ಆಯಾ ಕ್ಷೇತ್ರದಲ್ಲಿರುವ ಗುರುಗಳು ಜವಾಬ್ದಾರಿ ಹೊರಬೇಕು. ಆಗ ಅಜ್ಞಾನ ನಿವೃತ್ತಿಯಾಗುತ್ತದೆ ಎಂದು ಹೇಳಿದರು.

ಇದೇ ವೇಳೆ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ ಆಯ್ಕೆಯಾದ ಕಿರಿಯ ಪ್ರಾಥಮಿಕ ವಿಭಾಗ, ಹಿರಿಯ ಪ್ರಾಥಮಿಕ, ಪ್ರೌಢಶಾಲಾ ವಿಭಾಗಕ್ಕೆ ತಲಾ ಒಂದರಂತೆ ಜಿಲ್ಲೆಯ 8 ಶೈಕ್ಷಣಿಕ ಬ್ಲಾಕ್‌ಗಳಿಂದ 24 ಶಿಕ್ಷಕರಿಗೆ 5 ಸಾವಿರ ರೂ. ನಗದಿನೊಂದಿಗೆ ಪ್ರಶಸ್ತಿ ಪತ್ರ ನೀಡಿ ಪುರಸ್ಕರಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ಸಫಾಯಿ ಕರ್ಮಾಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ಪಿ.ವೆಂಕಟೇಶ್, ನಗರಸಭೆ ಅಧ್ಯಕ್ಷ ವರಸಿದ್ಧಿ ವೇಣುಗೋಪಾಲ್, ಸಿಡಿಎ ಅಧ್ಯಕ್ಷ ಸಿ.ಆನಂದ್, ಜಿಪಂ ಮಾಜಿ ಸದಸ್ಯ ಬೆಳವಾಡಿ ರವೀಂದ್ರ, ಜಿಪಂ ಸಿಇಒ ಜಿ.ಪ್ರಭು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ತಹಸೀಲ್ದಾರ್ ವಿನಾಯಕ್ ಸಾಗರ್, ತಾಪಂ ಇಒ ಎಚ್.ಕೆ.ತಾರಾನಾಥ್, ಎಐಟಿ ಪ್ರಾಚಾರ್ಯ ಡಾ.ಸಿ.ಟಿ.ಜಯದೇವ್, ಡಿಡಿಪಿಐ ಜಿ.ರಂಗನಾಥಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಆರ್.ಮಂಜುನಾಥ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಬಿ.ಎಸ್. ಪರಮೇಶ್ವರಪ್ಪ, ತಾಲೂಕು ಅಧ್ಯಕ್ಷ ಕಿರಣಕುಮಾರ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಪ್ರಭಾಕರ್, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಾನಾಯ್ಕ, ಜಗದೀಶ್, ಅಜ್ಜಯ್ಯ ಇದ್ದರು.



ಚಿಕ್ಕಮಗಳೂರಿನ ಎಐಟಿ ಕಾಲೇಜಿನ ಸಭಾಂಗಣದಲ್ಲಿ ಸೋಮವಾರ ನಡೆದ ಶಿಕ್ಷಕರ ದಿನಾಚರಣೆ ಸಮಾರಂಭವನ್ನು ಶಾಸಕ ಸಿ.ಟಿ.ರವಿ ಉದ್ಘಾಟಿಸಿದರು. ಜಿಲ್ಲಾಧಿಕಾರಿ ರಮೇಶ್, ನಗರಸಭಾಧ್ಯಕ್ಷ ವರಸಿದ್ಧಿ ವೇಣುಗೋಪಾಲ್ ಉಪಸ್ಥಿತರಿದ್ದಾರೆ.

Scanned with Oken Scanner

ವಿಜಯ ಕರ್ನಾಟಕ

ಮಂಗಳವಾರ, 6 ಸೆಪ್ಟೆಂಬರ್ 2022



ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಸಿ.ಟಿ.ರವಿ ಹೇಳಿಕೆ

# ಶಿಕ್ಷಣದಿಂದ ಸದೃಢ ರಾಷ್ಟ್ರ



ಚಿಕ್ಕಮಗಳೂರು ನಗರದ ಎಐಟಿ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯನ್ನು ಶಾಸಕ ಸಿ.ಟಿ.ರವಿ ಉದ್ಘಾಟಿಸಿದರು.

**ವಿಕ ಸುದ್ದಿಲೋಕ** ಚಿಕ್ಕಮಗಳೂರು

ಶಿಕ್ಷಣದಿಂದ ಮಾತ್ರ ಸದೃಢ ಹಾಗೂ ಸುಸಂಸ್ಕೃತ ರಾಷ್ಟ್ರ ನಿರ್ಮಿಸಲು ಸಾಧ್ಯ ಎಂದು ಶಾಸಕ ಸಿ.ಟಿ ರವಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಿಕ್ಷಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಸೋಮವಾರ ಆಯೋಜನೆಗೊಂಡಿದ್ದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ 135ನೇ ಜನ್ಮ ದಿನೋತ್ಸವ ಮತ್ತು 61ನೇ ಶಿಕ್ಷಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಕರ್ತವ್ಯಕ್ಕಷ್ಟೇ ಸೀಮಿತವಾಗುವವರು ಶಿಕ್ಷಕ ಎನಿಸಿಕೊಂಡರೆ, ಅರಿವು ಮೂಡಿಸಿ, ಬದುಕಿನ ದಾರಿ ತೋರುವವರು ಗುರು ಎನಿಸಿಕೊಳ್ಳುತ್ತಾರೆ. ಕಲ್ಲು ಶಿಲ್ಪಿಯ ಕೈಗೆ ಸಿಕ್ಕಿದರೆ ಸುಂದರ ಶಿಲ್ಪವಾಗುವ ಹಾಗೆ ಉತ್ತಮ ಗುರುವಿನ ಕೈಗೆ ಸಿಕ್ಕ ವಿದ್ಯಾರ್ಥಿಗಳು ಇತಿಹಾಸ ಸೃಷ್ಟಿಸುವ ವ್ಯಕ್ತಿಗಳಾಗುತ್ತಾರೆ. ಸವಾಲು ಎದುರಿಸುವ ಸಾಮರ್ಥ್ಯ ಹೊಂದಿದ್ದರೆ ಸಾಲದು, ಸಂಬಂಧಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿಯೂ ಆಲೋಚಿಸಬೇಕಿದೆ ಎಂದರು.

ಜಿಲ್ಲಾಧಿಕಾರಿ ಕೆ.ಎನ್.ರಮೇಶ್ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಮಹತ್ವದ ಸ್ಥಾನ ನೀಡಲಾಗಿದೆ. ದೇಶದ ಭವಿಷ್ಯ ರೂಪಿಸುವಲ್ಲಿ ಅವರ ಪಾತ್ರ ಮಹತ್ವದ್ದು ಎಂದರು. ಜಿ.ಪಂ. ಸಿಇಒ ಜಿ.ಪ್ರಭು ಮಾತನಾಡಿ, ಶಿಕ್ಷಕರು ದೇಶದ ಅಭಿವೃದ್ಧಿಗೆ ತುಡಿಯುವ ಯುವಪೀಳಿಗೆಯನ್ನು ನಿರ್ಮಿಸಬೇಕು ಎಂದು ಸಲಹೆ ನೀಡಿದರು.

ನಗರಸಭೆ ಅಧ್ಯಕ್ಷ ವರಸಿದ್ಧಿ ವೇಣು ಗೋಪಾಲ್ ಅಧ್ಯಕ್ಷತೆ ವಹಿಸಿದರು. ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮತ್ತು ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಕಾಸರಗೋಡು ಪ್ರೌಢಶಾಲೆ ನಿವೃತ್ತ ಮುಖ್ಯಶಿಕ್ಷಕ ಸುಬ್ರಾಯ ನಂಡೋಡಿ ಉಪನ್ಯಾಸ ನೀಡಿದರು. ಡಿಡಿಪಿಐ ರಂಗನಾಥ ಸ್ವಾಮಿ, ಬಿಇಒ ಎಸ್.ಆರ್. ಮಂಜುನಾಥ್, ರಾಜ್ಯ ಸಫಾಯಿ ಕರ್ಮಾಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ಪಿ.ವೆಂಕಟೇಶ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಆನಂದ, ಎಸ್ಪಿ ಉಮಾ ಪ್ರಶಾಂತ್ ಇತರರಿದ್ದರು,

Scanned with Oken Scanner

ವಿಜಯ ಕರ್ನಾಟಕ VK
06 ಗುರುವಾರ, 18 ಆಗಸ್ಟ್ 2022, ಶಿವಮೊಗ್ಗ

# ಎಐಟಿ ವಿದ್ಯಾರ್ಥಿಗಳ ಪ್ರಾಜೆಕ್ಟ್ ಅತ್ಯುತ್ತಮ



ಚಿಕ್ಕಮಗಳೂರಿನ ಎಐಟಿ ಕಾಲೇಜಿನ ಪ್ರಾಂಶುಪಾಲ ಡಾ.ಜಯದೇವ್ ಅವರು ವಿದ್ಯಾರ್ಥಿಗಳು ಮತ್ತು ಮಾರ್ಗದರ್ಶಕರನ್ನು ಅಭಿನಂದಿಸಿದರು.

**ವಿಕ ಸುದ್ದಿಲೋಕ** ಚಿಕ್ಕಮಗಳೂರು

ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದ ಇನ್ಫಾರ್ಮೆಷನ್ ಸೈನ್ಸ್ ವಿಭಾಗದ ವಿದ್ಯಾರ್ಥಿಗಳು ತಯಾರಿಸಿದ ಪ್ರಾಜೆಕ್ಟ್ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಅತ್ಯುತ್ತಮ ಯೋಜನೆ ಎಂದು ಘೋಷಿಸಿದೆ.

ಎಚ್.ಎಸ್.ಅವಿನಾಶ್, ಎಸ್.ಭರತ್, ಎಸ್.ಇ.ಕೀರ್ತಿ, ಜೆ.ಪೃಥ್ವಿ ಅವರು ಪ್ರೊ. ನಂಜೇಶ್, ಪ್ರೊ.ಸಂಪತ್ ಅವರ ಮಾರ್ಗದರ್ಶನದಲ್ಲಿ Virtual Dressing Room using Augmented Reality ಪ್ರಾಜೆಕ್ಟ್‌ನ್ನು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯವರು 45ನೇ ವಿದ್ಯಾರ್ಥಿ ಯೋಜನೆಯಡಿಯಲ್ಲಿ ಬೆಸ್ಟ್ ಪ್ರಾಜೆಕ್ಟ್ ಆಫ್ ದ ಇಯರ್ ಎಂದು ಘೋಷಿಸಿದೆ. ಈ ಯೋಜನೆ ಕಾರ್ಯಕ್ರಮ ಆಗಸ್ಟ್ 12 ಮತ್ತು 13 ರ ವಿಟಿಯು ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ನಿಟ್ಟಿನಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಟಿ. ಜಯದೇವ ಅವರು ವಿದ್ಯಾರ್ಥಿಗಳು ಮತ್ತು ಮಾರ್ಗದರ್ಶಕರನ್ನು ಅಭಿನಂದಿಸಿದರು. ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಸಂಪತ್, ಪ್ರೊ.ನಂಜೇಶ್, ಪ್ರೊ. ಸುಮನ್ ಕಾಲೇಜಿನ ಯೋಜನೆಯ ಸಂಯೋಜಕ ಡಾ.ಬಿ.ಎಂ. ಕಿರಣ್ ಉಪಸ್ಥಿತರಿದ್ದರು.

Scanned with Oken Scanner

2
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
ಸೋಮವಾರ 8 ಆಗಸ್ಟ್ 2022
8 AUGUST 2022

# ಶಿವಮೊಗ್ಗದ ಎನ್ಇಎಸ್ ಚಾಂಪಿಯನ್

## ರಾಜ್ಯ ಮಟ್ಟದ ಅಂತರ ಕಾಲೇಜು ಮ್ಯಾನೇಜ್‌ಮೆಂಟ್ ಫೆಸ್ಟ್

■ ವಿಜಯವಾಣಿ ಸುದ್ದಿಜಾಲ ಚಿಕ್ಕಮಗಳೂರು

ಅಂತರ ಕಾಲೇಜು ಮ್ಯಾನೇಜ್‌ಮೆಂಟ್ ಫೆಸ್ಟ್‌ನಲ್ಲಿ ಶಿವಮೊಗ್ಗದ ಎನ್ಇಎಸ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಕಾಲೇಜು ವಿದ್ಯಾರ್ಥಿಗಳು ಚಾಂಪಿಯನ್ ಆಗಿ ಹೊರಹೊಮ್ಮಿದರು.

ನಗರದ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದ ಎಂಬಿಎ ವಿಭಾಗದಿಂದ ಸ್ವಾತಂತ್ರ್ಯಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ರಾಜ್ಯ ಮಟ್ಟದ ಅಂತರ ಕಾಲೇಜು ಮ್ಯಾನೇಜ್‌ಮೆಂಟ್ ಫೆಸ್ಟ್‌ನಲ್ಲಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಸೇರಿದಂತೆ ವಿವಿಧ ಜಿಲ್ಲೆಗಳ 35 ಕಾಲೇಜಿನ 750 ವಿದ್ಯಾರ್ಥಿಗಳು, ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ.

**» 35 ಕಾಲೇಜುಗಳ 750 ವಿದ್ಯಾರ್ಥಿಗಳು ಭಾಗಿ**

ತಹಸೀಲ್ದಾರ್ ವಿನಾಯಕ್ ಸಾಗರ್ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿ, ವಿದ್ಯಾರ್ಥಿಗಳು ಇಂಥ ವೇದಿಕೆಗಳನ್ನು ಸದ್ಬಳಕೆ ಮಾಡಿಕೊಂಡು ಪ್ರತಿಭೆಯನ್ನು ಅನಾವರಣಗೊಳಿಸಬೇಕು ಎಂದು ಹೇಳಿದರು.

ಪ್ರಾಚಾರ್ಯ ಡಾ. ಸಿ.ಟಿ.ಜಯದೇವ ಮಾತನಾಡಿ, ಇಂಥ ಸ್ಪರ್ಧೆಗಳು ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ಕಟ್ಟಿಕೊಳ್ಳಲು ನೆರವಾಗುತ್ತದೆ ಮತ್ತು ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯನ್ನು ಜಾಗೃತಗೊಳಿಸುತ್ತದೆ ಎಂದರು.

ನಿವೃತ್ತ ಯೋಧರಾದ ಸಿ.ಕೆ.ಮೋಹನ್, ನಾಗೇಶ್ ಮಲ್ಯ ಅವರನ್ನು ಸನ್ಮಾನಿಸಲಾಯಿತು. ಆಡಳಿತ ಮಂಡಳಿ ಸದಸ್ಯ ಕೆ.ಮೋಹನ್, ಡಾ. ಕೆ.ಎಸ್.ಪ್ರಕಾಶ್ ರಾವ್ , ಡಾ. ಎಚ್.ಪಿ.ವಿನೀತ್ ಇದ್ದರು.

ವಿಜಯವಾಣಿ ಚಿತ್ರ



ಚಿಕ್ಕಮಗಳೂರಿನ ಎಐಟಿಯ ಎಂಬಿಎ ವಿಭಾಗದಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಅಂತರ ಕಾಲೇಜು ಮ್ಯಾನೇಜ್‌ಮೆಂಟ್ ಫೆಸ್ಟ್‌ನಲ್ಲಿ ನಿವೃತ್ತ ಯೋಧರಾದ ಸಿ.ಕೆ.ಮೋಹನ್, ನಾಗೇಶ್ ಮಲ್ಯ ಅವರನ್ನು ಗೌರವಿಸಲಾಯಿತು. ವಿನಾಯಕ್ ಸಾಗರ್, ಡಾ. ಸಿ.ಟಿ.ಜಯದೇವ ಇತರರಿದ್ದರು.

Scanned with Oken Scanner

ಬುಧವಾರ • ಜುಲೈ 20, 2022 ಪ್ರಜಾವಾಣಿ

# 30 ಎಂಜಿನಿಯರಿಂಗ್ ಕಾಲೇಜುಗಳ ಅಭಿವೃದ್ಧಿ

## ಪ್ರಮುಖ ನಾಯಕರ ಮಾಲೀಕತ್ವದ ಕಾಲೇಜುಗಳಿಗೂ ಪ್ರಗತಿ ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾದೇಶಿಕ ಉತ್ಕೃಷ್ಟ ತಾಂತ್ರಿಕ ಶಿಕ್ಷಣ ವ್ಯವಸ್ಥೆ' (ರೀತಿ) ಯೋಜನೆಯಡಿ 16 ಖಾಸಗಿ ಕಾಲೇಜುಗಳೂ ಸೇರಿ ಒಟ್ಟು 30 ಎಂಜಿನಿಯರಿಂಗ್ ಕಾಲೇಜುಗಳನ್ನು ರಾಜ್ಯ ಸರ್ಕಾರ ಅಭಿವೃದ್ಧಿಪಡಿಸಲಿದೆ.

ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಕುಟುಂಬದ ಒಡೆತನದ ಶಿವಮೊಗ್ಗದ ಪಿಇಎಸ್ ಎಂಜಿನಿಯರಿಂಗ್ ಕಾಲೇಜು, ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಅಧ್ಯಕ್ಷರಾಗಿರುವ ಪುತ್ತೂರಿನ ವಿವೇಕಾನಂದ ಎಂಜಿನಿಯರಿಂಗ್ ಕಾಲೇಜು, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಅಧ್ಯಕ್ಷರಾಗಿರುವ ಭಾಲ್ಕಿಯ ಭೀಮಣ್ಣ ಖಂಡ್ರೆ ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ಹಲವು ರಾಜಕೀಯ ಮುಖಂಡರ ಶಿಕ್ಷಣ ಸಂಸ್ಥೆಗಳು ಈ ಪಟ್ಟಿಯಲ್ಲಿವೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು), ಉದ್ಯಮ ಕ್ಷೇತ್ರ ಮತ್ತು ಆಯಾ ಕಾಲೇಜುಗಳ ಆಡಳಿತ ಮಂಡಳಿಗಳ ಸಹಭಾಗಿತ್ವದಲ್ಲಿ ಐದು ವರ್ಷಗಳ ಅವಧಿಯಲ್ಲಿ ಈ ಕಾಲೇಜುಗಳನ್ನು ಅಭಿವೃದ್ಧಿಪಡಿಸುವ ಗುರಿ ಇದೆ. ಮೂರೂ ವಲಯದವರು ತಲಾ ಶೇಕಡ 33ರಷ್ಟು ವೆಚ್ಚ ಹಂಚಿಕೆಯೊಂದಿಗೆ ಯೋಜನೆಯನ್ನು ಅನುಷ್ಠಾನಕ್ಕೆ ತರಲಿದ್ದಾರೆ.

ವಿಟಿಯು ಕುಲಪತಿ ಪ್ರೊ. ಕರಿಸಿದ್ದಪ್ಪ ನೇತೃತ್ವದ ಉನ್ನತಮಟ್ಟದ ಸಮಿತಿಯು ರೀತಿ ಯೋಜನೆಗೆ ಆಯ್ಕೆಯಾಗಿರುವ 30 ಕಾಲೇಜುಗಳಿಗೆ ಸಂಬಂಧಿಸಿದ ವರದಿಯನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರಿಗೆ ಮಂಗಳವಾರ ಸಲ್ಲಿಸಿತು.

ವರದಿ ಸ್ವೀಕರಿಸಿದ ಮಾತನಾಡಿದ ಸಚಿವರು, 'ಜಿಲ್ಲೆಗೊಂದು ಅತ್ಯುತ್ತಮ ತಾಂತ್ರಿಕ ಶಿಕ್ಷಣ ಸಂಸ್ಥೆ ಅಭಿವೃದ್ಧಿಪಡಿಸುವುದು ಈ ಯೋಜನೆಯ ಉದ್ದೇಶ. ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಲ್ಲದ ಜಿಲ್ಲೆಗಳಲ್ಲಿ ಖಾಸಗಿ ಕಾಲೇಜುಗಳನ್ನು ಆಯ್ಕೆಮಾಡಲಾಗಿದೆ' ಎಂದರು.

ಅಂತರರಾಷ್ಟ್ರೀಯ ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ಈ ಕಾಲೇಜುಗಳಲ್ಲಿ ನೀಡಲಾಗುವುದು. ಸ್ವಯಂ ಮೌಲ್ಯಮಾಪನ ಮತ್ತು 'ಮೆಂಟರ್ ಆಡಿಟ್ ಮಾದರಿ'ಯನ್ನು ಈ ಕಾಲೇಜುಗಳಲ್ಲಿ ಜಾರಿಗೊಳಿಸಲಾಗುವುದು ಎಂದು ಹೇಳಿದರು.

**ಯೋಜನೆಯ ಸ್ವರೂಪ:** ಆಯ್ಕೆಯಾಗಿರುವ ಕಾಲೇಜುಗಳು ಮೂರು ವರ್ಷದೊಳಗೆ 'ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟು' (ಎನ್‌ಐಆರ್‌ಎಫ್) ರ‍್ಯಾಂಕಿಂಗ್ ಪಡೆಯಬೇಕು. ಐದು ವರ್ಷಗಳೊಳಗೆ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗಳಿಂದ ಮಾನ್ಯತೆ ಪಡೆಯಬೇಕು. ಕೊನೆಯ ವರ್ಷದ ವೇಳೆಗೆ ಶೈಕ್ಷಣಿಕ ಯೋಜನೆಗಳಲ್ಲಿ ಕನಿಷ್ಠ ಶೇ 80ರಷ್ಟಕ್ಕೆ ಎನ್‌ಬಿಎ ಮಾನ್ಯತೆ ಹೊಂದಿರಬೇಕು ಎಂಬ ಷರತ್ತು ವಿಧಿಸಲಾಗಿದೆ.

ಅಂತಿಮ ವರ್ಷದ ಬಿ.ಇ ವಿದ್ಯಾರ್ಥಿಗಳಲ್ಲಿ ಕನಿಷ್ಠ ಶೇ 50ರಷ್ಟು ಮಂದಿಗೆ ಕೊನೆಯ ವರ್ಷದ ವೇಳೆಗೆ ಉದ್ಯೋಗಾವಕಾಶ ಲಭಿಸಿರಬೇಕು. ಶೇ 75ರಷ್ಟು ವಿದ್ಯಾರ್ಥಿಗಳಿಗೆ ಗುಣಮಟ್ಟದ ಇಂಟರ್ನ್‌ಶಿಪ್ ಮತ್ತು ಶೇ 100ರಷ್ಟು ವಿದ್ಯಾರ್ಥಿಗಳಿಗೆ ಉದ್ಯೋಗ ಲಭಿಸಬೇಕು. ವಿಟಿಯುನಿಂದ ಶಾಶ್ವತ ಮಾನ್ಯತೆ ಪಡೆಯಬೇಕು. ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿ ಕನಿಷ್ಠ 10 ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು ಎಂದೂ ಶಿಫಾರಸು ಮಾಡಲಾಗಿದೆ.

### ಕಾಲೇಜುಗಳ ವಿವರ

ಬೆಳಗಾವಿಯ ಅಂಗಡಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್, ತುಮಕೂರು ಜಿಲ್ಲೆ ಗುಬ್ಬಿಯ ಚನ್ನಬಸವೇಶ್ವರ ಎಂಜಿನಿಯರಿಂಗ್ ಕಾಲೇಜು, ಉಡುಪಿಯ ಶ್ರೀಮಧ್ವ ವಾದಿರಾಜ ಎಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್, ಮೈಸೂರಿನ ಜೆಎಸ್‌ಎಸ್‌ಎಸ್ ಮಹಿಳಾ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಸಂಸ್ಥೆ, ಕೆಜಿಎಫ್‌ನ ಡಾ.ಟಿ ತಿಮ್ಮಯ್ಯ ತಾಂತ್ರಿಕ ಶಿಕ್ಷಣ ಕಾಲೇಜು, ಬಾಗಲಕೋಟೆ ಜಿಲ್ಲೆ ಮುಧೋಳದ ಬಿಳುಗೂರು ಗುರುಬಸವ ಮಹಾಸ್ವಾಮೀಜಿ ಇನ್‌ಸ್ಟಿಟ್ಯೂಟ್, ವಿಜಯಪುರದ ಪಿ.ಜಿ. ಹಳಕಟ್ಟಿ ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ಚಿಕ್ಕಮಗಳೂರಿನ ಆದಿಚುಂಚನಗಿರಿ ತಾಂತ್ರಿಕ ಕಾಲೇಜು, ಚಿಕ್ಕಬಳ್ಳಾಪುರದ ಎಸ್.ಜೆ.ಸಿ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಳ್ಳಾರಿಯ ರಾವ್ ಬಹದ್ದೂರ್ ವೈ.ಮಹಾಬಲೇಶ್ವರಪ್ಪ ಎಂಜಿನಿಯರಿಂಗ್ ಕಾಲೇಜು, ಶಿವಮೊಗ್ಗದ ಪಿಇಎಸ್ ತಾಂತ್ರಿಕ ಮತ್ತು ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆ, ಬೀದರ್ ಜಿಲ್ಲೆ ಭಾಲ್ಕಿಯ ಭೀಮಣ್ಣ ಖಂಡ್ರೆ ತಾಂತ್ರಿಕ ಕಾಲೇಜು, ಗದಗದ ತೋಂಟದಾರ್ಯ ಎಂಜಿನಿಯರಿಂಗ್ ಕಾಲೇಜು, ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ವಿವೇಕಾನಂದ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಶಿಕ್ಷಣ ಕಾಲೇಜು, ಹುಬ್ಬಳ್ಳಿಯ ಜೈನ್ ಎಂಜಿನಿಯರಿಂಗ್ ಕಾಲೇಜು ಮತ್ತು ಯಾದಗಿರಿ ಜಿಲ್ಲೆಯ ಶೋರಾಪುರದ ವೀರಪ್ಪ ನಿಷ್ಠಿ ಎಂಜಿನಿಯರಿಂಗ್ ಕಾಲೇಜು.

**ಸರ್ಕಾರಿ ಕಾಲೇಜುಗಳು:** ಚಾಮರಾಜನಗರ, ಚಳ್ಳಕೆರೆ, ಹಾಸನ, ಹಾವೇರಿ, ಕುಶಾಲನಗರ, ತಲಕಾಡು, ಕೃಷ್ಣರಾಜಪೇಟೆ, ರಾಯಚೂರು, ರಾಮನಗರ, ಕಾರವಾರ, ಹೂವಿನಹಡಗಲಿಗಳಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು, ಬೆಂಗಳೂರಿನ ಎಸ್.ಕೆ.ಎಸ್.ಜೆ.ಟಿ.ಐ., ದಾವಣಗೆರೆಯಲ್ಲಿರುವ ಯೂನಿವರ್ಸಿಟಿ ಬಿಡಿಟಿ ಕಾಲೇಜು ಮತ್ತು ಕಲಬುರ್ಗಿಯ ವಿಟಿಯು ಸ್ನಾತಕೋತ್ತರ ಅಧ್ಯಯನ ಕೇಂದ್ರ.

Scanned with Oken Scanner

# ನಮ್ಮೊಳಗಿರುವ ದಿವ್ಯ ವಾಣಿ ಎಚ್ಚರಿಸಿದರೆ ಸನ್ಮಾರ್ಗ



**ಚಿಕ್ಕಮಗಳೂರು:** ಪ್ರತಿನಿತ್ಯ ಮನಸ್ಸಿಗೆ ಒಳಿತು, ಕೆಡುಕುಗಳು ತಿಳಿಯುತ್ತವೆ. ನಮ್ಮೊಳಗಿನ ದಿವ್ಯ ವಾಣಿಯನ್ನು ಎಚ್ಚರಿಸಿದಾಗ ಸದಾ ಉತ್ತಮ ಸನ್ಮಾರ್ಗ ಗೊತ್ತಾಗಲಿದೆ ಎಂದು ಆದಿ ಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ನಗರದ ಜಿಲ್ಲಾ ಒಕ್ಕಲಿಗರ ಸಮುದಾಯ ಭವನದಲ್ಲಿ ಜಿಲ್ಲಾ ಒಕ್ಕಲಿಗರ ಸಂಘ, ಮಹಿಳಾ ಒಕ್ಕಲಿಗರ ಸಂಘ, ಹಾಗೂ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಚಿಕ್ಕಮಗಳೂರು ಶಾಖೆ ಆಶ್ರಯದಲ್ಲಿ ಆಯೋಜಿಸಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ, ನಮ್ಮೊಳಗಿರುವ ಅಜ್ಞಾನ, ಅಂಧಕಾರವನ್ನು ಹೋಗಲಾಡಿಸಲು ಪ್ರಯತ್ನಿಸಿದರೆ ಅದು ನಮ್ಮಿಂದಲೇ ಸಾಧ್ಯವಿದೆ, ಆಧ್ಯಾತ್ಮಿಕ ಸಾಧನೆ ಪರಂಪರೆಯಲ್ಲಿ ಗುರು ಶಿಷ್ಯನಿಗೆ ದಾರಿ ತೋರಿಸಬಲ್ಲನೇ ವಿನಃ ಸಾಧನೆಯ ಅಂತಿಮ ಹಂತದ ವರೆಗೂ ಕರೆದೊಯ್ಯಲು ಸಾಧ್ಯವಿಲ್ಲ, ಗೌತಮ ಬುದ್ಧ ರಾಜನ ಮಗನಾಗಿದ್ದರೂ ಮಾನಸಿಕ ತೊಳಲಾಟಕ್ಕೆ ಸಿಲುಕಿ ಜೀವನದಲ್ಲಿ ಸಾವು, ಮುಪ್ಪು, ರೋಗ, ಹಿಂಸೆಯನ್ನು ಕಂಡು ಅದಕ್ಕೆ ಮುಕ್ತಿ ಹುಡುಕಲು ಸಂಚಾರ ಮಾಡಿ ಅಂತಿಮವಾಗಿ ಜ್ಞಾನೋದಯವಾದಗ ಜೀವನದ ಮಹತ್ವವನ್ನು ಅರಿತು ಸಂದೇಶ ಸಾರಿದನು ಎಂದರು.

ಸದಾ ಒಳಿತನ್ನು ಮಾಡುವಂತೆ ಪ್ರೇರಿಪಿಸುವುದು ಮನಸ್ಸು. ನಮ್ಮ ಯೋಜನೆ, ಯೋಚನೆಗಳಲ್ಲಿ ಸಕರಾತ್ಮಕ ಚಿಂತನೆಗಳನ್ನು ಅಳವಡಿಸಿ ಕೊಂಡಲ್ಲಿ ಫಲಪ್ರದವಾಗಲಿದೆ.

ನಮ್ಮ ದೇಹವು ಆರೋಗ್ಯದಿಂದ ಸ್ಥೂಲ ದೇಹ, ಯೋಚನೆಗಳಿಂದ ಸೂಕ್ಷ್ಮ ದೇಹ, ಹಾಗೂ ಬೆಳಕಿಗೆ ಅಂಟಿಕೊಂಡಿರುವಂತೆ ಕಾರಣ ದೇಹವನ್ನು ಹೊಂದಿದೆ. ನಮ್ಮ ಸಾಧನೆಗೆ ನಾವೇ ಪ್ರಯತ್ನಿಸಬೇಕು, ಆಗ ಮಾತ್ರ ನಮ್ಮ ಮನೆ ಬೆಳಕನ್ನು ನಾವೇ ಹತ್ತಿಸಿಕೊಳ್ಳಬಹುದು ಎಂದು ಹೇಳಿದರು.

ಜಗತ್ತನ್ನೇ ಗೆದ್ದ ಅಲೆಕ್ಸಾಂಡರ್ ಕೊನೆಗೆ ಏನನ್ನು ಕೊಂಡೊಯ್ಯಲಿಲ್ಲ, ಬದುಕಿನಲ್ಲಿ ಮಾನಸಿಕ ಖಿನ್ನತೆಗಳು ಸಹಜ ಅದೆಲ್ಲಕ್ಕೂ ಭಕ್ತಿ ಮಾರ್ಗವನ್ನು ಅನುಸರಿಸಬೇಕು, ಉತ್ತಮ ಆಲೋಚನೆಗಳು, ಮಾನವೀಯತೆಯನ್ನು ಬೆಳೆಸಿಕೊಳ್ಳ ಬೇಕು, ಅಂತಃಕರಣವನ್ನು ಶುದ್ಧಿಯಾಗಿಟ್ಟುಕೊಳ್ಳಬೇಕು, ಸತತ ಪರಿಶ್ರಮವಿದ್ದಾಗ ಸಾಧನೆ ಹಂತ ತಲುಪಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಶೃಂಗೇರಿ ಶಾಖಾ ಮಠದ ಶ್ರೀ ಗುಣನಾಥ ಸ್ವಾಮೀಜಿ, ಹಾಸನ ಶಾಖಾ ಮಠದ ಶಂಭು ನಾಥ ಸ್ವಾಮೀಜಿ, ದಸರಘಟ್ಟ ಶಾಖಾಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ, ಚಿಕ್ಕಮಗಳೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಟಿ.ರಾಜಶೇಖರ್, ಉಪಾಧ್ಯಕ್ಷ ಲಕ್ಷ್ಮಣಗೌಡ, ಗೌರವ ಕಾರ್ಯದರ್ಶಿ ಎಂ.ಸಿ ಪ್ರಕಾಶ್, ಶೃಂಗೇರಿ ಶಾಸಕ ಟಿ.ಡಿ ರಾಜೇಗೌಡ, ಮಾಜಿ ಶಾಸಕ ಎಸ್.ವಿ ಮಂಜುನಾಥ್, ಮಹಿಳಾ ಸಂಘದ ಅಧ್ಯಕ್ಷೆ ಸವಿತಾ ರಮೇಶ್, ಎಐಟಿ ಕಾಲೇಜು ರಿಜಿಸ್ಟ್ರಾರ್ ಸುಬ್ರಾಯ್, ಪ್ರಾಂಶುಪಾಲರಾದ ಸಿ.ಟಿ ಜಯದೇವ್, ಹಾಗೂ ಸಂಘದ ನಿರ್ದೇಶಕರು ಇದ್ದರು.



**ಚಿಕ್ಕಮಗಳೂರು:** ನಗರಕ್ಕೆ ಆಗಮಿಸಿದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ಕನ್ನಡ ಸೇನೆ ವತಿಯಿಂದ ಸನ್ಮಾನಿಸಲಾಯಿತು. ಕನ್ನಡ ಸೇನೆ ಜಿಲ್ಲಾಧ್ಯಕ್ಷ ರಾಜೇಗೌಡ, ಕರವೇ ಜಿಲ್ಲಾಧ್ಯಕ್ಷ ತೇಗೂರು ಜಗದೀಶ್, ಶಂಕರ್, ಜಯಪ್ರಕಾಶ್ ಇದ್ದರು.



# ಮಹಿಳಾ ಸಂಘದಿಂದ ಶ್ರೀಗಳಿಗೆ ಸನ್ಮಾನ

**ಚಿಕ್ಕಮಗಳೂರು:** ನಗರಕ್ಕೆ ಆಗಮಿಸಿದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ದೇವಾಂಗ ಸಂಘ ಮತ್ತು ಬನಶಂಕರಿ ಮಹಿಳಾ ಸಂಘದ ವತಿಯಿಂದ ಸನ್ಮಾನಿಸಲಾಯಿತು. ದೇವಾಂಗ ಸಂಘದ ಜಿಲ್ಲಾಧ್ಯಕ್ಷ ಭಗವತಿ ಹರೀಶ್, ಉಪಾಧ್ಯಕ್ಷರಾದ ರವಿಕುಮಾರ್, ಕಾರ್ಯದರ್ಶಿ ತ್ಯಾಗರಾಜ್, ಮೋಹನ್, ಲೋಹಿತ್, ಸುವರ್ಣಕೇಶವಮೂರ್ತಿ, ಭಾರತಿ, ಧನಲಕ್ಷ್ಮೀಗೋಕುಲ್ ಇದ್ದರು.



# ಶ್ರೀಗಳಿಂದ ಸರ್ಜರಿ ಕ್ಲಿನಿಕ್ ಉದ್ಘಾಟನೆ

**ಚಿಕ್ಕಮಗಳೂರು:** ನಗರದ ಮಲಬಾರ್ ಗೋಲ್ಡ್ ಸಮೀಪ ನೂತನವಾಗಿ ಆರಂಭಗೊಂಡ ಸ್ಕಿನ್ ಸರ್ಜ್ ಸ್ಕಿನ್ ಅಂಡ್ ಜನರಲ್ ಸರ್ಜರಿ ಕ್ಲಿನಿಕ್‌ನ್ನು ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಶೃಂಗೇರಿ ಶಾಖಾ ಮಠದ ಶ್ರೀ ಗುಣನಾಥಸ್ವಾಮೀಜಿ, ವೈದ್ಯರಾದ ಡಾ.ಚಿರಂತ್ ಜಿ.ಎಸ್, ಡಾ.ಪ್ರತೀಕ್ಷಾ ಎಸ್, ಡಾ.ಸ್ವಾಮಿ, ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಎಂ.ಸಿ. ಪ್ರಕಾಶ್, ಮಾಜಿ ಅಧ್ಯಕ್ಷ ಹಳಸೆ ಶಿವಣ್ಣ, ಲೋಕಪ್ಪಗೌಡ, ಸುಬ್ಬರಾಯ್, ಪ್ರತಿಭಾಶ್ರೀಧರ್, ಹರಿಣಾಕ್ಷಿನಾಗರಾಜ್, ಪ್ರಸಾದ್ ಇದ್ದರು.

Scanned with Oken Scanner

ಗಿರಿವಾಣಿ
18-06-2022 ಶನಿವಾರ
ಪುಟ - 2

# ಮನಸ್ಸು ಸನ್ಮಾರ್ಗದಲ್ಲಿ ಸಾಗಲು ಸತ್ಸಂಗ ಬೇಕು



ಚಿಕ್ಕಮಗಳೂರು-ದೇಹಕ್ಕೆ ಯೋಗ ಬೇಕು ಹಾಗೆಯೇ ಮನಸ್ಸಿಗೆ ಸತ್ಸಂಗ ಬೇಕು ಎಂದು ಆದಿ ಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ನಗರದ ಜಿಲ್ಲಾ ಒಕ್ಕಲಿಗರ ಸಮುದಾಯ ಭವನದಲ್ಲಿ ಚಿಕ್ಕಮಗಳೂರು ಜಿಲ್ಲಾ ಒಕ್ಕಲಿಗರ ಸಂಘ, ಮಹಿಳಾ ಒಕ್ಕಲಿಗರ ಸಂಘ, ಹಾಗೂ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಚಿಕ್ಕಮಗಳೂರು ಶಾಖೆ ಸಂಯುಕ್ತಾಶ್ರದಲ್ಲಿ ಆಯೋಜಿಸಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು ಒಳ್ಳೆಯ ಮನಸ್ಸುಗಳು ಮಾನವ ಕಲ್ಯಾಣಕ್ಕೆ ಶ್ರಮಿಸಿದರೆ, ಅದೇ ಕೆಟ್ಟ ಮನಸ್ಸು ವಿಚಿದ್ರಕಾರಿ ಕಾರ್ಯಗಳಲ್ಲಿ ತೊಡಗುತ್ತದೆ, ಈ ಬದಲಾವಣೆಯೆಂಬುದು ನಮ್ಮ ಮನಸ್ಸುಗಳಿಂದಲೇ ಆರಂಭಗೊಳ್ಳಬೇಕು ಎಂದು ಹೇಳಿದರು. ಇಂತಹ ಸತ್ಸಂಗ ಕಾರ್ಯಕ್ರಮಗಳಲ್ಲಿ ಪ್ರತಿಯೊಬ್ಬರು ಭಾಗವಹಿಸುವ ಮೂಲಕ ತಮ್ಮ ಮನಸ್ಸುಗಳನ್ನು ಸಂಸ್ಕಾರ ಪಡೆದು ತಮ್ಮ ಮಕ್ಕಳಿಗೆ ಸಂಸ್ಕಾರ ಹೇಳಿಕೊಡುವ ಮೂಲಲಕ ಪ್ರಹ್ಲಾದ, ಧೃವಕುಮರಾನಂಥ ಸಂಸ್ಕಾರವಂತ ಮಕ್ಕಳನ್ನು ರೂಪಿಸಬೇಕು ಎಂದು ಹೇಳಿದರು.

ಗಂಡು ಮತ್ತು ಹೆಣ್ಣಿನ ಬೇಧ ಮನುಷ್ಯ ಮಾಡಿಕೊಂಡಿರುವ ಸೃಷ್ಟಿ, ಮನಸ್ಸಿಗೆ ಬಿದ್ಯಾವುದು ಇಲ್ಲ, ದೇಹಕ್ಕೆ ಯೋಗವೊಂದೆ ಸಾಕು, ಮನಸ್ಸಿಗೆ ಸತ್ಸಂಗ ಬೇಕು, ಮನಸ್ಸು ಸರಿಯಾದ ದಾರಿಯಲ್ಲಿ ಸಾಗಬೇಕು ಸಧೃಢವಾಗಬೇಕೆಂಬದರೆ ಸತ್ಸಂಗದ ಅವಶ್ಯಕತೆ ಇದೆ ಎಂದರು.

ಆಧುನಿಕತೆ ಇಂದು ವಿಸ್ತಾರವಾಗಿ ಬೆಳೆದಿದೆ. ಸಾವಿರಾರು ಜನರು ಮಾಡುವ ಕೆಲಸವನ್ನು ಇಂದು ರೋಬೋಟ್ ನಿರ್ವಹಿಸುತ್ತೆ, ಮಾನವನ ಭಾವನೆಗನ್ನು ಅರ್ಥೈಹಿಸಿಕೊಳ್ಳುವ ಮಟ್ಟಿಗೆ ತಂತ್ರಜ್ಞಾನ ಬೆಳೆದಿದೆ, ಮನುಷ್ಯ ಬ್ಯಾಂಕ್‌ನಲ್ಲಿ ಸಾಲ ಪಡೆಯಬೇಕಾದರೂ ಕೂಡ ದಾಖಲಾತಿಗಳನ್ನು ಪರಿಶೀಲಿಸಿ ಎಷ್ಟು ಮೊತ್ತದ ಸಾಲ ನೀಡಬೇಕೆಂಬುದನ್ನೂ ಕೂಡ ರೋಬೋಟ್ ನಿರ್ಧರಿಸುತ್ತದೆ, ಯಂತ್ರಗಳಿಗೆ ತರಬೇತಿ ನೀಡಿ ಮನುಷ್ಯನ ಕೆಲಸಗಳನ್ನು ಅದರಿಂದ ಮಾಡಿಸಿಕೊಳ್ಳುತ್ತಿದೇವೆ ಎಂದರು.

ಚಿಕ್ಕಮಗಳೂರು ಮತ್ತು ಆದಿಚುಂಚನಗಿರಿ ಶ್ರೀ ಮಠಕ್ಕೂ ಅವಿನಾಭಾವ ಸಂಬಂಧವಿದೆ ಹಾಗಾಗಿಯೇ ಮಠ ಮಾನ್ಯಗಳು ಪ್ರಾಥಮಿಕ ಶಿಕ್ಷಣದ ಕನಸು ಕಾಣುತ್ತಿದ್ದ ದಿನಗಳಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳು ಚಿಕ್ಕಮಗಳೂರಿನಲ್ಲಿ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯ ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿದ್ದಾರೆ, ಅಮೇರಿಕಾದ ನಾಸಾದಲ್ಲಿ ಭಾರತೀಯ ವಿದ್ಯಾರ್ಥಿಗಳಿದ್ದಾರೆ, ಅಲ್ಲದೇ ವಿಶ್ವದ ನಾನಾ ಕಡೆಗಳಲ್ಲಿ ಭಾರತೀಯರಿದ್ದಾರೆ ಅವರಲ್ಲೂ ಎಐಟಿ ಕಾಲೇಜಿನಲ್ಲಿ ಓದಿದವರು ಸಿಗುತ್ತಾರೆ ಎಂದರು.

ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಟಿ.ರಾಜಶೇಖರ್ ಸತ್ಸಂಗ ಕಾರ್ಯಕ್ರಮ ಹಾಗೂ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪರಂಪರೆಯ ಕುರಿತು ವಿಸ್ತಾರವಾಗಿ ಪ್ರಾಸ್ತವಿಕ ಭಾಷಣ ಮಾಡಿದರು. ಸಂಸ್ಥಾನದ 72 ನೇ ಪೀಠಾಧ್ಯಕ್ಷರಾಗಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳಾಗಿದ್ದು, ಲೋಕ ಕಲ್ಯಾಣಕ್ಕಾಗಿ ಗುರುಪರಂಪರೆಯನ್ನು ಬೆಳೆಸಿಕೊಂಡು ಬರುತ್ತಿದ್ದಾರೆ. ಚುಂಚನಗಿರಿ ಮಠವು ಅನ್ನಪೂರ್ಣೇಶ್ವರಿಯಂತೆ ನಿತ್ಯ ಅನ್ನದಾಸೋಹ, ಮಕ್ಕಳ ವಿದ್ಯಾಭ್ಯಾಸಕ್ಕೆ ಆಶ್ರಯ ಒದಗಿಸಿದೆ ಎಂದರು. ಈ ಸಂದರ್ಭದಲ್ಲಿ ಶೃಂಗೇರಿ ಶಾಖಾ ಮಠದ ಗುಣನಾಥ ಸ್ವಾಮೀಜಿ, ಹಾಸನ ಶಾಖಾ ಮಠದ ಶಂಬುನಾಥ ಸ್ವಾಮೀಜಿ, ಶಾಸಕ ಸಿ.ಟಿ.ರವಿ, ನಗರಸಭೆ ಅಧ್ಯಕ್ಷ ವರಸಿದ್ಧಿ ವೇಣುಗೋಪಾಲ್, ಚಿಕ್ಕಮಗಳೂರು ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಎಂ.ಸಿ.ಪ್ರಕಾಶ್, ಉಪಾಧ್ಯಕ್ಷ ಲಕ್ಷ್ಮಣ್ ಗೌಡ, ನಿರ್ದೇಶಕರಾದ ಶ್ಯಾಮ್, ಸುಜಿತ್, ಕುಸುಮಾ ರಮೇಶ್, ವಿಕ್ರಾಂತ್, ಸಿಇಒ ಕುಳ್ಳೇಗೌಡ, ವ್ಯವಸ್ಥಾಪಕ ರಾಮು, ಮಹಿಳಾ ಸಂಘದ ಅಧ್ಯಕ್ಷೆ ಸವಿತಾ ರಮೇಶ್, ಸದಸ್ಯರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ಸಂಘದ ಗೌರವ ಸ್ವಾಗತಿಸಿದರು.

## ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ

ಚಿಕ್ಕಮಗಳೂರು, ಜೂ.17: 2022-23ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕಾರ್ಯ ಆರಂಭವಾಗಿದ್ದು, ಸಮೀಕ್ಷೆಯಲ್ಲಿ ರೈತರು ತಮ್ಮ ಜಮೀನಿನಲ್ಲಿ ತಾವು ಬೆಳೆದ ಬೆಳೆ ವಿವರ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ರೈತರು ತಮ್ಮ ಮೊಬೈಲ್‌ನಲ್ಲಿ ಗೂಗಲ್ ಪ್ಲೇಸ್ಟೋರ್‌ನಿಂದ ಮುಂಗಾರು ರೈತರ ಬೆಳೆ ಸಮೀಕ್ಷೆ 2022-3 ...

ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅಭಿಮತ | ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪದವಿ ಪ್ರದಾನ

# ಸತ್ಯದ ಮಾರ್ಗದಲ್ಲಿ ನಡೆಯುವವರಿಗೆ ನೋವು-ನಲಿವು ಎಲ್ಲವೂ ನಗಣ್ಯ

ವಿಜಯವಾಣಿ ಸುದ್ದಿಜಾಲ ಚಿಕ್ಕಮಗಳೂರು

ವಿದ್ಯಾರ್ಥಿಗಳು ನಾಲ್ಕು ವರ್ಷಗಳಲ್ಲಿ ಕಲಿತ ಶಿಕ್ಷಣವನ್ನು ಬದುಕಿನ ಶಕ್ತಿಯನ್ನಾಗಿ ಅರಳಿಸಿದರೆ ಉಪಯೋಗ ಸಿಗುತ್ತದೆ. ಸತ್ಯದೆಡೆಗೆ ಹೆಜ್ಜೆ ಹಾಕುವವರಿಗೆ ನೋವು-ನಲಿವು ಎಲ್ಲವೂ ನಗಣ್ಯ ಎಂದು ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನದ ಪೀಠಾಧಿಪತಿ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ನಗರದ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 2021-22ನೇ ಸಾಲಿನ ಅಂತಿಮ ವರ್ಷದ ಬಿಇ, ಎಂ.ಟೆಕ್ ಮತ್ತು ಎಂಬಿಎ ವಿದ್ಯಾರ್ಥಿಗಳಿಗೆ ಗುರುವಾರ ಏರ್ಪಡಿಸಿದ್ದ ಪದವಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಪಾಲಕರ ಕೈಹಿಡಿದುಕೊಂಡು ಬಂದು ಈ ವಿದ್ಯಾಸಂಸ್ಥೆ ಸೇರಿದ್ದು, ಈಗ ನಡುಗುವ ಅವರ ಕೈಗಳನ್ನು ಹಿಡಿದುಕೊಂಡು ನೀವು ಮುಂದೆ ಸಾಗಬೇಕು. ಈಗತಾನೆ ಸಮಾಜಕ್ಕೆ ಹಿಂದಿರುಗುತ್ತಿರುವ ನೀವು ಬದುಕನ್ನು ಚೆನ್ನಾಗಿ ನಡೆಸಬೇಕು. ಬದುಕಿನಲ್ಲಿ ಮುಂದಿನ ದಿನಗಳು ಹೇಗೆ ಬರುತ್ತವೆ ಎಂದರೆ ಅಳುತ್ತಿದ್ದರೂ ಯಾರೂ ಕೇಳುವುದಿಲ್ಲ. ಹಾಗಾಗಿ ಯಾರ ಹಂಗಲ್ಲೂ ಬದುಕಬಾರದು. ಸಕಾರಾತ್ಮಕ ಅಂಶವನ್ನು ಅಳವಡಿಸಿಕೊಂಡವನಿಗೆ ನಕಾರಾತ್ಮಕವು ಸಕಾರಾತ್ಮಕವಾಗಿ ಗೋಚರಿಸುತ್ತದೆ ಎಂದರು.

ಮೈಸೂರು ವಿಶ್ವವಿದ್ಯಾಲಯದ ಕುಲಸಚಿವ ಡಾ. ಜಿ.ಹೇಮಂತಕುಮಾರ್ ಮಾತನಾಡಿ, ಯುವಪೀಳಿಗೆಗೆ ಜ್ಞಾನದ ಬಲ ಭದ್ರವಾಗಿರಬೇಕು. ಭದ್ರತೆಗೆ ಅತ್ಯಮೂಲ್ಯವಾದ ಕಲೆಗಳಾದ ತಂತ್ರಜ್ಞಾನ; ನಾಯಕತ್ವ ಗುಣ, ತರ್ಕ, ಉತ್ಸಾಹ, ಗಮನ, ಸೃಜನಶೀಲತೆ, ಆವಿಷ್ಕಾರಗಳನ್ನು ಅಳವಡಿಸಿಕೊಳ್ಳಬೇಕು. ಆಗ ಉತ್ತಮ ರೀತಿಯಲ್ಲಿ ಸಮಾಜ ಸೇವೆ ಮಾಡುವ ಸುಲಭ ದಾರಿ ಸಿಗುತ್ತದೆ ಎಂದು ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ 2018ರಿಂದ 2022ರವರೆಗೆ ನಡೆಸಿದ ಅಂತಿಮ ವರ್ಷದ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಚಿಕ್ಕಮಗಳೂರು ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದ ಬಿಇ, ಎಂ.ಟೆಕ್ ಮತ್ತು ಎಂ.ಬಿ.ಎ ಕೋರ್ಸ್‌ನಲ್ಲಿ ರ‍್ಯಾಂಕ್ ಪಡೆದಿರುವ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು. ಶ್ರೀ ಆದಿಚುಂಚನಗಿರಿ ಶೃಂಗೇರಿ ಶಾಖೆಯ ಶ್ರೀ ಗುಣನಾಥ ಸ್ವಾಮೀಜಿ, ಹಾಸನ ಶ್ರೀ ಶಂಭುನಾಥ ಸ್ವಾಮೀಜಿ, ಆಡಳಿತ ಮಂಡಳಿ ಸದಸ್ಯರಾದ ಕೆ.ಮೋಹನ್, ಡಾ. ಸಂಪತ್, ವಿವೇಕಾನಂದ, ಅರ್ಪಿತಾ, ಡಾ. ಸುನೀತಾ ಇತರರಿದ್ದರು.




ವಿಜಯವಾಣಿ ಚಿತ್ರ

ಎಐಟಿಯಲ್ಲಿ ಅಂತಿಮ ವರ್ಷದ ಬಿಇ, ಎಂ.ಟೆಕ್ ಮತ್ತು ಎಂಬಿಎ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭವನ್ನು ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು, ಶ್ರೀ ಗುಣನಾಥ ಸ್ವಾಮೀಜಿ, ಶ್ರೀ ಶಂಭುನಾಥ ಸ್ವಾಮೀಜಿ, ಡಾ. ಸಿ.ಕೆ ಸುಬ್ಬರಾಯ ಇತರರಿದ್ದರು.

> ಉತ್ತಮ ಅವಕಾಶ ನೀಡುವ ದಿನಗಳು ಆರಂಭವಾಗಿವೆ. ಹಾಗಾಗಿ ಸರಳವಾಗಿ ಹೊಸ ಕೌಶಲ ಮತ್ತು ತಂತ್ರಜ್ಞಾನ ಕಲಿಯುವ ನಿಟ್ಟಿನಲ್ಲಿ ಮುಂದೆ ಸಾಗಿ ಸಂತೋಷವನ್ನು ಅನುಭವಿಸಿದಾಗ ಮಾತ್ರ ಭವಿಷ್ಯ ಉಜ್ವಲವಾಗಿರುತ್ತದೆ.
>
> | ಡಾ. ಸಿ.ಟಿ.ಜಯದೇವ ಎಐಟಿ ಪ್ರಾಚಾರ್ಯ

> ಬದುಕೆಂದರೆ ನೋವು-ನಲಿವಿನ ಆಟ. ಅದರಲ್ಲಿ ಏಳು-ಬೀಳು ಸಹಜ. ಸರಿಯಾದ ಜ್ಞಾನದ ಬೆಳಕಿನಲ್ಲಿ ತಂತ್ರಜ್ಞಾನವನ್ನು ಬಳಸುವ ಕಲೆ ಗೊತ್ತಿರಬೇಕು. ಒಳಗಿನ ಜ್ಞಾನವನ್ನು ಅಭಿವ್ಯಕ್ತಿಪಡಿಸಿಕೊಂಡು ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಬೇಕು. ಇಲ್ಲಿ ಕಲಿತದ್ದು ಯಾವತ್ತಿಗೂ ಸಾಕಾಗುವುದಿಲ್ಲ. ನೂತನ ತಂತ್ರಜ್ಞಾನದ ಕಡೆ ಜ್ಞಾನವನ್ನು ಆಧುನೀಕರಿಸಿಕೊಳ್ಳಬೇಕು.
>
> | ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠ


> ಜೀವನದಲ್ಲಿ ಏರಿಳಿತ ಸಹಜ. ನೋವುಗಳನ್ನು ಮರೆತು ಮುಂದೆ ಸಾಗಬೇಕು. ಶಿಸ್ತು ಮತ್ತು ವಿಧೇಯತೆ ಯಶಸ್ಸಿನ ಮೆಟ್ಟಿಲುಗಳು. ಅದು ನಿಮ್ಮನ್ನು ಯಾವುದೇ ಎತ್ತರಕ್ಕೂ ಕೊಂಡೊಯ್ಯಬಹುದು. ಇಲ್ಲಿ ನಾವೆಲ್ಲರೂ ಕೆಲವು ಉದ್ದೇಶಗಳೊಂದಿಗೆ ಇದ್ದೇವೆ. ಆದರೆ ಸರಿಯಾದ ವಿದ್ಯೆಯಿಂದ ಜ್ಞಾನದ ಬಲ ಹೆಚ್ಚಾಗಿ ಸಾರ್ಥಕತೆಯ ಕಡೆ ದಾರಿ ತೋರುತ್ತದೆ.
>
> | ಡಾ. ಸಿ.ಕೆ.ಸುಬ್ಬರಾಯ ಎಐಟಿ ಕಾಲೇಜಿನ ನಿರ್ದೇಶಕ

Scanned with Oken Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA
ಶನಿವಾರ 18 ಜೂನ್ 2022
18 JUNE 2022
5B

## ಸತ್ಸಂಗದಿಂದ ಸಂಸ್ಕಾರ ವೃದ್ಧಿ

ಚಿಕ್ಕಮಗಳೂರು: ಮನಸ್ಸಿಗೆ ಜ್ಞಾನ, ಸಂಸ್ಕಾರ ನೀಡಲು ಸತ್ಸಂಗಗಳು ಸಹಕಾರಿ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು. ಒಕ್ಕಲಿಗರ ಸಮುದಾಯ ಭವನದಲ್ಲಿ ಜಿಲ್ಲಾ ಒಕ್ಕಲಿಗರ ಸಂಘ ಆಯೋಜಿಸಿದ್ದ ಸತ್ಸಂಗ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮನಸ್ಸಿಗೆ ಸರಿಯಾದ ಮಾರ್ಗದರ್ಶನ ನೀಡಿದರೆ ದೇವರ ಹತ್ತಿರ ಕರೆದೊಯ್ಯುತ್ತದೆ, ನಿರ್ಲಕ್ಷ್ಯಿಸಿದರೆ ದೆವ್ವದ ದರ್ಶನ ಮಾಡಿಸುತ್ತದೆ ಎಂದು ಹೇಳಿದರು.



ಚಿಕ್ಕಮಗಳೂರಿನ ಜಿಲ್ಲಾ ಒಕ್ಕಲಿಗರ ಸಂಘ ಆಯೋಜಿಸಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು.

25 ವರ್ಷಗಳ ಕಾಲ ನಿರಂತರವಾಗಿ ವಿಶ್ವ ವಿದ್ಯಾಲಯಗಳಲ್ಲಿ ಅಧ್ಯಯನದಲ್ಲಿ ತೊಡಗಿ ಉಳಿದ ಎಪ್ಪತ್ತೈದು ವರ್ಷಗಳ ಕಾಲ ದೇಹವನ್ನು ಸಾಕುವುದಕ್ಕಾಗಿ ಹಗಲಿರುಳೂ ಶ್ರಮಿಸುತ್ತ ಭಗವಂತನ ಸ್ಮರಣೆ ಮಾಡಲು ಸಮಯವಿಲ್ಲದೆ ಹೋದರೆ ಮನುಷ್ಯನಿಗೂ ಪ್ರಾಣಿಗೂ ವ್ಯತ್ಯಾಸವಿಲ್ಲ ಎಂದರು. ಯಂತ್ರಗಳ ಕಾರ್ಯ ನಿರ್ವಹಣೆಯಿಂದ ಮನುಷ್ಯನಿಗೆ ಉಳಿದಿರುವ ಸಮಯದಲ್ಲಿ ದೇವರ ಸ್ಮರಣೆ ಮೂಲಕ ಸದ್ವಿನಿಯೋಗ ಮಾಡಿಕೊಳ್ಳಬೇಕು. ದಿನನಿತ್ಯವೂ ನಿರಂತರ ಓಂಕಾರ ಉಚ್ಚರಿಸಿದಾಗ ಮಾನಸಿಕ ಮತ್ತು ದೈಹಿಕ ಕಾಯಿಲೆಗಳಿಂದ ದೂರ ಆಗಬಹುದು ಎಂದರು. ಶೃಂಗೇರಿ ಶಾಖಾ ಮಠದ ಶ್ರೀ ಗುಣನಾಥ ಸ್ವಾಮೀಜಿ, ಹಾಸನ ಶ್ರೀ ಶಂಭುನಾಥ ಸ್ವಾಮೀಜಿ, ಒಕ್ಕಲಿಗರ ಸಂಘದ ಅಧ್ಯಕ್ಷ ಟಿ.ರಾಜಶೇಖರ್, ಕಾರ್ಯದರ್ಶಿ ಮಾಡ್ಲಾ ಪ್ರಕಾಶ್, ಉಪಾಧ್ಯಕ್ಷ ರವಿ ಇದ್ದರು.

Scanned with Oken Scanner

ವಿಜಯ ಕರ್ನಾಟಕ
ಶನಿವಾರ, 18 ಜೂನ್ 2022, ಶಿವಮೊಗ್ಗ ನಮ್ಮ ಚಿಕ್ಕಮಗಳೂರು III

# ಎಐಟಿನಲ್ಲಿ ಚುಂಚನಕ್ಕೆ ಚಾಲನೆ

**ವಿಕ ಸುದ್ದಿಲೋಕ** ಚಿಕ್ಕಮಗಳೂರು

ಸಾಂಸ್ಕೃತಿಕ ಚಟುವಟಿಕೆಗಳಿಂದ ವಿದ್ಯಾರ್ಥಿಯ ಮನೋವಿಕಾಸದ ಜತೆಗೆ ಉತ್ತಮ ಸಂಸ್ಕಾರ ದೊರೆಯು ತ್ತದೆ ಎಂದು ಎಐಟಿ ಪ್ರಾಂಶುಪಾಲ ಡಾ.ಸಿ.ಟಿ.ಜಯದೇವ ಹೇಳಿದರು.

ನಗರದ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿ ಸಂಘವು ಶುಕ್ರವಾರ ಏರ್ಪಡಿಸಿದ್ದ ಚುಂಚನ-2022 ಅಂತರಕಾಲೇಜು ಸಾಂಸ್ಕೃತಿಕ ಹಬ್ಬವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಕಾಲೇಜಿನ ಸಾಂಸ್ಕೃತಿಕ ಹಬ್ಬ ಚುಂಚನ ವಿದ್ಯಾರ್ಥಿಗಳ ಅಂತರಂಗದಲ್ಲಿ ಹುದುಗಿರುವ ವಿಶೇಷ ಕಲೆಗಳನ್ನು ಹೊರಗೆ ಹಾಕಲು ಸೂಕ್ತ ವೇದಿಕೆ ಎಂದರು. ಕಾಲೇಜಿನ ಆಡಳಿತ ಮಂಡಳಿ ಸದಸ್ಯ ಕೆ. ಮೋಹನ್‌ಮಾತನಾಡಿ, ವಿದ್ಯಾರ್ಥಿಗಳ ಉತ್ಸಾಹ , ಸಂತಸ ಚುಂಚನದಲ್ಲಿ ಇಮ್ಮಡಿಯಾಗಲಿ ಎಂದು ಹಾರೈಸಿದರು.

ವಿದ್ಯಾರ್ಥಿಕಲ್ಯಾಣ ಅಧಿಕಾರಿ, ಪ್ರಾಧ್ಯಾಪಕ ವಿವೇಕಾನಂದ ಮಾತನಾಡಿ ಈ ಬಾರಿಯ ಸಾಂಸ್ಕೃತಿಕ ಉತ್ಸವ ಚುಂಚನ ಕ್ಕಾಗಿ ಮದುಮ ಗಳಂತೆ ಕಾಲೇಜನ್ನು ಸಿಂಗರಿಸಲಾಗಿದೆ. ಪ್ರಖ್ಯಾತ ಯುವ ಹಾಡುಗಾರ ವಾಸುಕಿ ವೈಭವ್ ಆಗಮಿಸುತ್ತಿದ್ದಾರೆ. ನಾಲ್ಕನೆಯ ಆಯಾಮ ಚಿತ್ರತಂಡ ದವರ ಕಾರ್ಯಕ್ರಮವಿದೆ ಎಂದರು.

ವಿದ್ಯಾರ್ಥಿನಿ ಪಂಚಮಿ ಪ್ರಾರ್ಥಿಸಿ, ಪೂಜ ಮತ್ತು ಜೀವಿತಾ ನಿರೂಪಿಸಿದರು. ನಿಶಾ ವಂದಿಸಿದರು. ಡಾ.ರಾಮೇ ಗೌಡ, ಡಾ.ಪ್ರಕಾಶ್‌ರಾವ್, ಡಾ.ಜಿ. ಆರ್. ವೀರೇಂದ್ರ, ಡಾ.ದಿನೇಶ್, ಡಾ.ಸಂಪತ್ ಇದ್ದರು.



ಚಿಕ್ಕಮಗಳೂರಿನ ಎಟಿಯಲ್ಲಿ ಏರ್ಪಡಿಸಿರುವ ಚುಂಚನ ಸಾಂಸ್ಕೃತಿಕ ಕಾರ್ಯಕ್ರಮವನ್ನು ಡಾ.ಸಿ.ಟಿ.ಜಯದೇವ ಉದ್ಘಾಟಿಸಿದರು.

Scanned with Oken Scanner

|| ನಮ್ಮ ಚಿಕ್ಕಮಗಳೂರು ಶನಿವಾರ, 18 ಜೂನ್ 2022, ಶಿವಮೊಗ್ಗ


### ಸತ್ಸಂಗ ಕಾರ್ಯಕ್ರಮದಲ್ಲಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಭಿಮತ

# ನಮ್ಮಿಂದಲೇ ನಮ್ಮ ಅಂಧಕಾರ ನಿವಾರಣೆ

**ವಿಕ ಸುದ್ದಿಲೋಕ ಚಿಕ್ಕಮಗಳೂರು**

ನಮ್ಮೊಳಗಿರುವ ಅಜ್ಞಾನ, ಅಂಧಕಾರವನ್ನು ಹೋಗಲಾಡಿಸಲು ನಮ್ಮಿಂದಲೇ ಸಾಧ್ಯವಿದೆ ಎಂದು ಆದಿ ಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಗುರುವಾರ ನಗರದ ಜಿಲ್ಲಾ ಒಕ್ಕಲಿಗರ ಸಮುದಾಯ ಭವನದಲ್ಲಿ ಜಿಲ್ಲಾ ಒಕ್ಕಲಿಗರ ಸಂಘ, ಮಹಿಳಾ ಒಕ್ಕಲಿಗರ ಸಂಘ, ಹಾಗೂ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಚಿಕ್ಕಮಗಳೂರು ಶಾಖೆ ಸಂಯುಕ್ತಾಶ್ರದಲ್ಲಿ ಆಯೋಜಿಸಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.



ಚಿಕ್ಕಮಗಳೂರು ಜಿಲ್ಲಾ ಒಕ್ಕಲಿಗರ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ಭಕ್ತರು ಪಾದಪೂಜೆ ನೇರವೇರಿಸಿದರು.

ಆಧ್ಯಾತ್ಮಿಕ ಸಾಧನೆ ಪರಂಪರೆಯಲ್ಲಿ ಗುರು ಶಿಷ್ಯನಿಗೆ ದಾರಿ ತೋರಿಸಬಲ್ಲನೇ ವಿನಃ ಸಾಧನೆಯ ಅಂತಿಮ ಹಂತದವರೆಗೂ ಕರೆದೊಯ್ಯಲು ಸಾಧ್ಯವಿಲ್ಲ, ಗೌತಮ ಬುದ್ಧ ರಾಜನ ಮಗನಾಗಿದ್ದರೂ ಮಾನಸಿಕ ತೊಳಲಾಟಕ್ಕೆ ಸಿಲುಕಿ ಜೀವನದಲ್ಲಿ ಸಾವು, ಮುಪ್ಪು, ರೋಗ, ಹಿಂಸೆಯನ್ನು ಕಂಡು ಅದಕ್ಕೆ ಮುಕ್ತಿ ಹುಡುಕಲು ಸಂಚಾರ ಮಾಡಿ ಅಂತಿಮವಾಗಿ ಜ್ಞಾನೋದಯವಾದಗ ಜೀವನದ ಮಹತ್ವವನ್ನು ಅರಿತು ಸಂದೇಶ ಸಾರಿದನು ಎಂದರು.


ಜಗತ್ತನ್ನೆ ಗೆದ್ದ ಅಲೆಕ್ಸಾಂಡರ್ ಕೊನೆಗೆ ಏನನ್ನೂ ಕೊಂಡೊಯ್ಯಲಿಲ್ಲ, ಬದುಕಿನಲ್ಲಿ ಮಾನಸಿಕ ಖಿನ್ನತೆಗಳು ಸಹಜ, ಆದೆಲ್ಲಕ್ಕೂ ಭಕ್ತಿ ಮಾರ್ಗವನ್ನು ಅನುಸರಿಸಬೇಕು. ಉತ್ತಮ ಆಲೋಚನೆಗಳು, ಮಾನವೀಯತೆಯನ್ನು ಬೆಳೆಸಿಕೊಳ್ಳಬೇಕು. ಅಂತಃಕರಣವನ್ನು ಶುದ್ಧಿಯಾಗಿಟ್ಟುಕೊಳ್ಳಬೇಕು, ಸತತ ಪರಿಶ್ರಮವಿದ್ದಾಗ ಸಾಧನೆ ಹಂತ ತಲುಪಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶೃಂಗೇರಿ ಶಾಖಾ ಮಠದ ಶ್ರೀ ಗುಣನಾಥ ಸ್ವಾಮೀಜಿ, ಹಾಸನ ಶಾಖಾ ಮಠದ ಶ್ರೀ ಶಂಭೂನಾಥ ಸ್ವಾಮೀಜಿ, ದಸರಘಟ್ಟ ಶಾಖಾಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಟಿ. ರಾಜಶೇಖರ್ ಮತ್ತಿತರರಿದ್ದರು.

Scanned with Oken Scanner

ಗಿರಿವಾಹಿನಿ
17-06-2022 ಶುಕ್ರವಾರ

# ಮನಸ್ಸಿಗೆ ಸಂಸ್ಕಾರ , ಸತ್ಸಂಗ ಅಗತ್ಯ": ಡಾ.ನಿರ್ಮಲಾನಂದನಾಥ ಸ್ವಾಮೀಜಿ



ಚಿಕ್ಕಮಗಳೂರು: ಮನಸ್ಸಿಗೆ ಸಂಸ್ಕಾರ ಬೇಕು. ಈ ನಿಟ್ಟಿನಲ್ಲಿ ಸತ್ಸಂಗ ಅಗತ್ಯ ಎಂದು ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಜಿಲ್ಲಾ ಒಕ್ಕಲಿಗರ ಸಂಘದ ವತಿಯಿಂದ ನಗರದ ವಿಜಯಪುರದ ಒಕ್ಕಲಿಗರ ಸಮುದಾಯ ಭವನದಲ್ಲಿ ಬುಧವಾರ ಏರ್ಪಡಿಸಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮನಸ್ಸಿಗೆ ಸರಿಯಾದ ಮಾರ್ಗದರ್ಶನ ಇದ್ದರೆ ಸನ್ಮಾರ್ಗದಲ್ಲಿ ಸಾಗುತ್ತದೆ. ಒಳಿತು ಮತ್ತು ಕೆಡುಕು ಎರಡೂ ಮನಸ್ಸನ್ನು ಅವಲಂಬಿಸಿವೆ ಎಂದು ಹೇಳಿದರು.

ಮನಸ್ಸು ಒಂದೊಂದು ಕ್ಷಣದಲ್ಲಿ ಒಂದೊಂದು ರೀತಿ ಇರುತ್ತದೆ. ಯಾವಾಗಲೂ ಸರಿಯಾಗಿ ಇಟ್ಟುಕೊಳ್ಳಬೇಕು. ಸರಿಯಾಗಿ ಸಂಸ್ಕಾರ ಸಂಲಗ್ನಗೊಳಿಸಬೇಕು. ಒಳ್ಳೆಯದನ್ನು ಮಾಡಬೇಕು ಎಂದು ಕಿವಿಮಾತು ಹೇಳಿದರು.

ಒಕ್ಕಲಿಗರ ಸಂಘದ ಅಧ್ಯಕ್ಷ ಟಿ.ರಾಜಶೇಖರ್, ಗೌರವ ಕಾರ್ಯದರ್ಶಿ ಎಂ.ಸಿ. ಪ್ರಕಾಶ್, ಉಪಾಧ್ಯಕ್ಷ ಎನ್.ಲಕ್ಷ್ಮಣಗೌಡ, ಇತರರು ಇದ್ದರು.

Scanned with Oken Scanner

2 | ಜನಮಿತ್ರ
ಜನಮನದ ಕೈಗನ್ನಡಿ

# ಯಾರ ಹಂಗಲ್ಲೂ ಬಾಳಬಾರದು

## ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪದವಿ ಪ್ರದಾನ । ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ನುಡಿ




ಬದುಕೆಂದರೆ ನೆರಳು ಬೆಳಕಿನ ಆಟ ಅದರಲ್ಲಿ ಏಳು ಬೀಳು ಸಹಜ. ಸರಿಯಾದ ಜ್ಞಾನದ ಬೆಳಕಿನಲ್ಲಿ ತಂತ್ರಜ್ಞಾನವನ್ನು ಬಳಸುವ ಕಲೆ ಗೊತ್ತಿರಬೇಕು.
-ಡಾ.ನಿರ್ಮಲಾನಂದನಾಥ ಸ್ವಾಮೀಜಿ,
ಆದಿಚುಂಚನಗಿರಿ ಪೀಠಾಧ್ಯಕ್ಷ

**ಚಿಕ್ಕಮಗಳೂರು:** ಯಾರ ಹಂಗಲ್ಲೂ ಬದುಕಬಾರದು. ಸಕಾರಾತ್ಮಕ ಅಂಶವನ್ನು ಅಳವಡಿಸಿಕೊಂಡವರಿಗೆ ನಕಾರಾತ್ಮಕವು ಸಕಾರಾತ್ಮಕವಾಗಿ ಬದಲಾವಣೆಗೊಳ್ಳುತ್ತದೆ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ನಗರದ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 2021-22ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಅಂತಿಮ ವರ್ಷದ ಬಿ.ಇ. ಎಂ.ಟೆಕ್, ಮತ್ತು ಎಂ.ಬಿ.ಎ. ವಿದ್ಯಾರ್ಥಿಗಳಿಗೆ ಗುರುವಾರ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಬದುಕೆಂದರೆ ನೆರಳು ಬೆಳಕಿನ ಆಟ ಅದರಲ್ಲಿ ಏಳು ಬೀಳು ಸಹಜ. ಸರಿಯಾದ ಜ್ಞಾನದ ಬೆಳಕಿನಲ್ಲಿ ತಂತ್ರಜ್ಞಾನವನ್ನು ಬಳಸುವ ಕಲೆ ಗೊತ್ತಿರಬೇಕೆಂದರು.

ಒಳಗಿನ ಅಂತರ್ಜ್ಞಾನವನ್ನು ಅಭಿವೃದ್ಧಿ ಮಾಡಿಕೊಂಡು ಆತ್ಮ ವಿಶ್ವಾಸ ಹೆಚ್ಚಿಸಿಕೊಳ್ಳಬೇಕು. ಇಲ್ಲಿ ತಾವುಗಳು ಕಲಿತದ್ದು ಯಾವುದಕ್ಕೂ ಸಾಕಾಗುವುದಿಲ್ಲ, ಪ್ರಸ್ತುತ ನೂತನ ತಂತ್ರಜ್ಞಾನ ಕಡೆ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಮಾನವ ಸ್ವಭಾವಕ್ಕೆ ಹೆಚ್ಚು ಮಹತ್ವ ಹಾಕುತ್ತಾರೋ ಅವರಿಗೆ ಸೋಲು-ಗೆಲುವು, ಹಗಲು-ರಾತ್ರಿ ಎಲ್ಲವೂ ಸಾಧ್ಯ. ಈ ಒಂದೆ ತಾವುಗಳು ತಂದೆತಾಯಿಯವರ ಕೈ ಹಿಡಿದುಕೊಂಡು ಬಂದು ಈ ವಿದ್ಯಾಸಂಸ್ಥೆ ಸೇರಿದ್ದು, ಈಗ ನಡುಗುವ ಅವರ ಕೈಗಳನ್ನು ಹಿಡಿದುಕೊಂಡು ನೀವುಗಳು ಮುಂದೆ ಸಾಗಬೇಕು. ಈಗಾಗಲೇ ಸಮಾಜಕ್ಕೆ ಒಂದಿರುಗುತ್ತಿರುವ ನೀವುಗಳು ಬದುಕನ್ನು ಚೆನ್ನಾಗಿ ನಡೆಸಬೇಕೆಂದು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಡಾ.ಜಿ. ಹೇಮಂತ ಕುಮಾರ್ ಮಾತನಾಡಿ, ಇಂದಿನ ಯುವಪೀಳಿಗೆಗೆ ಜ್ಞಾನದ ಬಲ ಭದ್ರವಾಗಿರಬೇಕು. ಈ ಭದ್ರತೆಗೆ ಅತ್ಯಮೂಲ್ಯವಾದ ಕಲೆಗಳಾದ ಪ್ರಸ್ತುತ ಆಧುನಿಕ ತಂತ್ರಜ್ಞಾನ, ನಾಯಕತ್ವದ ಗುಣ, ವಿಮರ್ಶಾತ್ಮಕ ತರ್ಕ, ಉತ್ಸಾಹ, ಗಮನ, ಸೃಜನಶೀಲತೆ, ಆವಿಷ್ಕಾರ ಮುಂತಾದವುಗಳ ಯಶಸ್ವಿ ಅಳವಡಿಕೆ ಬೇಕು. ಈ ಬಲಗಳನ್ನು ಅಳವಡಿಸಿಕೊಂಡಾಗ ಉತ್ತಮ ರೀತಿಯಲ್ಲಿ ಸಮಾಜ ಸೇವೆ ಮಾಡುವ ಸುಲಭ ದಾರಿ ಸಿಗುತ್ತದೆ ಎಂದರು.

ತಾವುಗಳು ಜೀವನದ ಮಧ್ಯ ಭಾಗದಲ್ಲಿದ್ದು, ಸಾಧನೆಗಳನ್ನು ಸರಿಯಾಗಿ ಮಾಡಿದಾಗ ದೇಶವು ನಿಮ್ಮನ್ನು ಸ್ಮರಿಸುತ್ತದೆ. ಕಲಿಕೆ ಎನ್ನುವುದು ನಿರಂತರ, ತಾವುಗಳು ಕಠಿಣ ಪರಿಶ್ರಮದಿಂದ ಪ್ರತಿಭಾವಂತರಾಗಿ ಮುಂದೆ ಬಂದಾಗ ಸಮಾಜ ನಿಮ್ಮನ್ನು ಗುರುತಿಸಿ, ಹೆಚ್ಚು ಯಶಸ್ಸನ್ನು ಹೊಂದುವಿರಿ. ಜವಾಬ್ದಾರಿ ಸ್ಥಾನದಲ್ಲಿದ್ದರೆ ಮಾತ್ರ ನಿಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅರಿತುಕೊಂಡು ಮುನ್ನಡೆಯಲು ಸಾಧ್ಯ.

» 03

Scanned with Oken Scanner

ಶುಕ್ರವಾರ, 17 ಜೂನ್ 2022, ಶಿವಮೊಗ್ಗ
facebook.com/vijaykarnataka · twitter.com/vijaykarnataka · vijaykarnataka.com · www.vijaykarnatakaepaper.com
ವಿಜಯ ಕರ್ನಾಟಕ

### ಅಂತಿಮ ವರ್ಷದ ವಿದ್ಯಾರ್ಥಿಗಳ ಪದವಿ ಪ್ರದಾನ ಕಾರ್ಯಕ್ರಮ

# ಕಲಿಕೆಯನ್ನು ಶಕ್ತಿಯಾಗಿ ಅರಳಿಸಿ

**ವಿಕ ಸುದ್ದಿಲೋಕ** ಚಿಕ್ಕಮಗಳೂರು

ಯಾರು ಸತ್ಯದೆಡೆಗೆ ಹೆಜ್ಜೆ ಹಾಕುತ್ತಾರೋ ಅವರಿಗೆ ನೋವು, ನಲಿವು, ಹಗಲು, ರಾತ್ರಿ ಎಲ್ಲವೂ ನಗಣ್ಯ. 4 ವರ್ಷದ ಕಲಿಕೆಯನ್ನು ಶಕ್ತಿಯನ್ನಾಗಿ ಅರಳಿಸಿದರೆ ಹೆಚ್ಚು ಉಪಯೋಗ ಸಿಗುತ್ತದೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.


**ಡಾ. ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ**

ನಗರದ ಎಐಟಿ ಕಾಲೇಜಿನಲ್ಲಿ ಗುರುವಾರ ಏರ್ಪಡಿಸಿದ್ದ ಅಂತಿಮ ವರ್ಷದ ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭದಲ್ಲಿ ಆಶೀರ್ವಚನ ನೀಡಿದರು. ಈಗತಾನೆ ಸಮಾಜಕ್ಕೆ ಹಿಂದಿರುಗುತ್ತಿರುವ ವಿದ್ಯಾರ್ಥಿಗಳು ಬದುಕನ್ನು ಚೆನ್ನಾಗಿ ಅರ್ಥೈಸಿಕೊಳ್ಳಬೇಕು. ಬದುಕಿನಲ್ಲಿ ಯಾವಾಗಲೂ ಸಕಾರಾತ್ಮಕ ಅಂಶಗಳನ್ನು ಅಳವಡಿಸಿಕೊಂಡವನಿಗೆ ನಕಾರಾತ್ಮವು ಸಕಾರಾತ್ಮಕವಾಗಿ ಬದಲಾವಣೆಗೊಳ್ಳುತ್ತದೆ. ಬದುಕೆಂದರೆ ನೆರಳು ಬೆಳಕಿನ ಆಟ. ಅದರಲ್ಲಿ ಏಳು ಬೀಳು ಸಹಜ. ಸರಿಯಾದ ಜ್ಞಾನದ ಬೆಳಕಿನಲ್ಲಿ ತಂತ್ರಜ್ಞಾನವನ್ನು ಬಳಸುವ ಕಲೆ ಗೊತ್ತಿರಬೇಕು. ಒಳಗಿನ ಅಂತರ್‌ಜ್ಞಾನವನ್ನು ಅಭಿವೃದ್ಧಿಪಡಿಸಿಕೊಂಡು ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಬೇಕು ಎಂದರು.

ಎಐಟಿ ಕಾಲೇಜಿನ ನಿರ್ದೇಶಕ ಡಾ.ಸಿ.ಕೆ.ಸುಬ್ಬರಾಯ ಮಾತನಾಡಿ, ಜೀವನದಲ್ಲಿ ಏರಿಳಿತ ಸಹಜ. ಹೀಗಾಗಿ ನೋವು ನಲಿವು ಎಲ್ಲವನ್ನು ಮರೆತು ಮುಂದೆ ಸಾಗಬೇಕು. ಶಿಸ್ತು ಮತ್ತು ವಿಧೇಯತೆ ಯಶಸ್ಸಿನ ಮೆಟ್ಟಿಲುಗಳಾಗಿದ್ದು ಅದು ನಿಮ್ಮನ್ನು ಯಾವುದೇ ಎತ್ತರಕ್ಕೂ ಕೊಂಡೊಯ್ಯಬಹುದು ಎಂದರು.

ಎಐಟಿ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಟಿ. ಜಯದೇವ ಸ್ವಾಗತಿಸಿದರು. ವಿಟಿಯು ನಡೆಸಿದ ಅಂತಿಮ ವರ್ಷದ ಎಂಜಿನಿಯರಿಂಗ್ ಪರೀಕ್ಷೆಯಲ್ಲಿ .ರ‍್ಯಾಂಕ್ ಪಡೆದಿರುವ ವಿದ್ಯಾರ್ಥಿಗಳಿಗೆ ಕಾಲೇಜಿನಿಂದ ಚಿನ್ನದ ಪದಕ ನೀಡಿ ಗೌರವಿಸಲಾಯಿತು. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶೃಂಗೇರಿ ಶಾಖೆಯ ಶ್ರೀ ಗುಣನಾಥ ಸ್ವಾಮೀಜಿ, ಹಾಸನ ಶ್ರೀ ಶಂಭುನಾಥ ಸ್ವಾಮೀಜಿ, ಆಡಳಿತ ಮಂಡಳಿ ಸದಸ್ಯ ಕೆ.ಮೋಹನ್ ಇದ್ದರು.

ಡಾ.ಸಂಪತ್ ವಿದ್ಯಾರ್ಥಿಗಳಿಗೆ ಪ್ರಮಾಣವಚನ ಬೋಧಿಸಿದರು. ಪ್ರಾಧ್ಯಾಪಕರಾದ ವಿವೇಕಾನಂದ ಮತ್ತು ಅರ್ಪಿತಾ ನಿರೂಪಿಸಿ, ಸುನೀತಾ ವಂದಿಸಿದರು.




ಚಿಕ್ಕಮಗಳೂರಿನ ಎಐಟಿ ಕಾಲೇಜಿನ ಅಂತಿಮ ವರ್ಷದ ಪ್ರತಿಭಾವಂತ ವಿದ್ಯಾರ್ಥಿಗಳ ಪದವಿ ಪ್ರಧಾನ ಸಮಾರಂಭವನ್ನು ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.


ಇಂದಿನ ಯುವಪೀಳಿಗೆಗೆ ಜ್ಞಾನದ ಬಲ ಭದ್ರವಾಗಿರಬೇಕು. ಈ ಭದ್ರತೆಗೆ ಅತ್ಯಮೂಲ್ಯ ಕಲೆಗಳಾದ ತಂತ್ರಜ್ಞಾನ, ನಾಯಕತ್ವದ ಗುಣ, ವಿಮರ್ಶಾತ್ಮಕ ತರ್ಕ, ಉತ್ಸಾಹ, ಗಮನ, ಸೃಜನಶೀಲತೆ, ಆವಿಷ್ಕಾರ ಮತ್ತಿತರ ಯಶಸ್ವಿ ಗುಣಗಳನ್ನು ಅಳವಡಿಸಿಕೊಳ್ಳಬೇಕು.

**-ಡಾ.ಜಿ.ಹೇಮಂತಕುಮಾರ್,** ಮೈಸೂರು ವಿವಿ ಕುಲಸಚಿವ

## ಬೋಧಿ ವೃಕ್ಷ

ಈ ವಾರ...

**ಅಂತಾರಾಷ್ಟ್ರೀಯ ಯೋಗ ದಿನಾಚರಣೆ**



ಜೂನ್ 21 ವಿಶ್ವ ಯೋಗ ದಿನ. ಈ ಹಿನ್ನೆಲೆಯಲ್ಲಿ ವಿವಿಧ ಆಧ್ಯಾತ್ಮಿಕ ಚಿಂತಕರಿಂದ ಯೋಗ ಕುರಿತಾಗಿ ಚಿಂತನ ಬರಹಗಳು.

- ಯೋಗಿಗಳಿಗೆ ಗುಣೇಶನ ಆಶೀರ್ವಾದವಿರಲಿ. ಶ್ರೀ ಶ್ರೀ ರವಿಶಂಕರ್ ಗುರೂಜಿ
- ಯೋಗವೆಂದರೆ ಒಳಗೊಳ್ಳುವಿಕೆಯ ಭಾವ ಸದ್ಗುರು ಜಗ್ಗಿ ವಾಸುದೇವ್
- ಮನಸ್ಸು ಆತ್ಮಗಳ ಸಂಯೋಗ ಶ್ರೀಗುರು ವಚನಾನಂದ ಸ್ವಾಮೀಜಿ

Format No. ACD40
Issue No. 01
Rev. No. 00

Scanned with Oken Scanner

ಜನಮಿತ್ರ

16 ಜೂನ್ ಗುರುವಾರ 2022

# ...ೇಹಕ್ಕೆ ಯೋಗ ಸಾಕು; ಮನಸಿಗೆ ಸತ್ಸಂಗ ಬೇಕು

## ...ಸರಿ ಮಾರ್ಗದಲ್ಲಿದ್ದರೆ ದೇವರ ಬಳಿಗೆ ಕೊಂಡೊಯ್ಯುತ್ತದೆ। ಗಂಡು-ಹೆಣ್ಣಿನ ಬೇಧ ಮನುಷ್ಯ ಮಾಡಿಕೊಂಡಿರುವ ಸೃಷ್ಟಿ: ನಿರ್ಮಲಾನಂದನಾಥ ಸ್ವಾಮೀಜಿ

... ದೇಹಕ್ಕೆ ಕೇವಲ ಯೋಗ ... ಅದು ಉತ್ತಮವಾಗಿರುತ್ತೆ. ... ಉತ್ತಮವಾಗಿರಬೇಕೆಂದರೆ ... ಎಂದು ಆದಿಚುಂಚನಗಿರಿ ... ಮಠದ ನಿರ್ಮಲಾನಂದನಾಥ ... ತಿಳಿಸಿದರು.

... ಒಕ್ಕಲಿಗರ ಸಮುದಾಯಭವನ ... ಸತ್ಸಂಗ ಕಾರ್ಯಕ್ರಮದಲ್ಲಿ ... ಮನುಷ್ಯ ಉತ್ತಮ ... ರೂಪುಗೊಳ್ಳಬೇಕಾದರೆ ... ಅಗತ್ಯತೆಗಳೇನು ... ಚಿಕ್ಕಮಗಳೂರು ಮತ್ತು ... ಶ್ರೀ ಮಠಕ್ಕೂ ಅವಿನಾಭಾವ ... ಮಠಮಾನ್ಯಗಳು ... ಕನಸು ಕಾಣುತ್ತಿದ್ದಂತಹ ... ಬಾಲಗಂಗಾಧರನಾಥ ... ದಲ್ಲಿ ಆದಿ ಚುಂಚನಗಿರಿ ... ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಅಮೇರಿಕಾದ ನಾಸಾದಲ್ಲಿ ಭಾರತೀಯ ವಿಜ್ಞಾನಿಗಳಿದ್ದಾರೆ. ವಿಶ್ವದ ನಾನಾ ದೇಶಗಳಿಗೆ ಹೋದರೂ ಕೂಡಾ ಭಾರತೀಯರು ಅದರಲ್ಲೂ ಐಟಿ ಕಾಲೇಜಿನಲ್ಲಿ ಓದಿದವರು ಸಿಗುತ್ತಾರೆ ಎಂದರು. ಆಧುನಿಕತೆ ಎಷ್ಟು ಬೆಳೆದಿದೆ ಎಂದರೆ ಸಾವಿರಾರು ಜನ ಮಾಡುವ ಕೆಲಸವನ್ನು ಒಂದು ರೋಬೋಟ್ ಮಾಡುತ್ತೆ. ಒಂದು ರೋಬೋಟ್ ಮಾನವನ ಭಾವನೆಗಳನ್ನೂ ಅರ್ಥೈಸಿಕೊಳ್ಳುವ ಮಟ್ಟಿಗೆ ತಂತ್ರಜ್ಞಾನ ಬೆಳೆದಿದೆ. ಮನುಷ್ಯ ಬ್ಯಾಂಕ್‌ನಲ್ಲಿ ಸಾಲ ಪಡೆಯಬೇಕಾದರೂ ಕೂಡಾ ದಾಖಲಾತಿಗಳನ್ನು ಪರಿಶೀಲಿಸಿ, ಎಷ್ಟು ಮೊತ್ತದ ಸಾಲ ನೀಡಬೇಕೆಂಬುದನ್ನೂ ಕೂಡಾ ರೋಬೋಟ್ ನಿರ್ಧರಿಸುತ್ತದೆ. ಯಂತ್ರಗಳಿಗೆ ತರಬೇತಿ ಕೊಟ್ಟು ಮನುಷ್ಯನ ಕೆಲಸಗಳನ್ನೂ ಕೂಡಾ ಅದರಿಂದ ಮಾಡಿಸಿಕೊಳ್ಳುತ್ತಿದ್ದೇವೆ. 25 ವರ್ಷಗಳ ಕಾಲ ನಾವು ವಿಶ್ವವಿದ್ಯಾಲಯಗಳಲ್ಲಿ ಕಲಿಯುವುದು ಮುಂದಿನ 75 ವರ್ಷಗಳ ಕಾಲ ಈ ದೇಹವನ್ನು ಸಾಕಿ ಸಲಹುವುದಕ್ಕಾಗಿ ಮಾತ್ರ. ದೇಹ ಸಾಕುವ ಉದ್ದೇಶದಿಂದ 25 ವರ್ಷ ಓದುತ್ತೇವೆ ಅಂದರೆ ಅದರಲ್ಲಿ ಏನಾದರೂ ಇದೆ ಎಂದರ್ಥ ಎಂದು ವಿದ್ಯಾಭ್ಯಾಸದ ಹಿಂದಿನ ಉದ್ದೇಶವನ್ನು ಬಿಡಿಯಾಗಿ ಸರಳವಾಗಿ ತಿಳಿಸಿದರು. ದೇಹವನ್ನು ಸಾಕುವುದಕ್ಕಾಗಿ ಹಗಲಿರುಳು ಶ್ರಮಿಸುತ್ತಾ ಭಗವಂತನ ಸ್ಮರಣೆ ಮಾಡಲು ಸಮಯವಿಲ್ಲದೆ ಹೋದರೆ ಮನುಷ್ಯನಿಗೂ ಪ್ರಾಣಿಗೂ ವ್ಯತ್ಯಾಸವೇನು ಎಂದು ಪ್ರಶ್ನಿಸಿದರು.

ಮನುಷ್ಯರಾಗಿ ಬಂದಿದ್ದೇವೆ ಎಂದರೆ ದೇಹವನ್ನು ಆಧಾರವಾಗಿ ಮತ್ತು ಮನಸ್ಸನ್ನು ಉಪಕರಣವಾಗಿ ಬಳಸಿಕೊಂಡು ದೇಹವನ್ನು ಸಾಕುತ್ತಿದ್ದೇವೆಂಬುದನ್ನು ತಿಳಿಸಿದರು.



ಕಾರ್ಯಕ್ರಮದಲ್ಲಿ ಮಠದ ಶೃಂಗೇರಿ ಶಾಖಾ ಸ್ವಾಮೀಜಿ, ಗುಣನಾಥ ... ಶಾಖಾ ಮಠದ ... ಸ್ವಾಮೀಜಿ, ಒಕ್ಕಲಿಗರ ಸಂಘದ ಅಧ್ಯಕ್ಷ ರಾಮೇಗೌಡ್ರ, ಕಾರ್ಯದರ್ಶಿ ಪ್ರಕಾಶ್, ಮಾಜಿ ಉಪಾಧ್ಯಕ್ಷ ರವಿ ಸೇರಿದಂತೆ ಹಲವರು ಇದ್ದರು.

### ಸತ್ಸಂಗ ಯಾಕೆ ಬೇಕು....

ಗಂಡು ಮತ್ತು ಹೆಣ್ಣಿನ ಬೇಧ ಮನುಷ್ಯ ಮಾಡಿಕೊಂಡಿರುವ ಸೃಷ್ಟಿ. [illegible]

### ಸಂಸ್ಕಾರವಂತ ಮಕ್ಕಳನ್ನು ರೂಪಿಸಿ: ಸ್ವಾಮೀಜಿ

ಒಳ್ಳೆಯ ಮನಸ್ಸುಗಳು ಮಾನವ ಕಲ್ಯಾಣಕ್ಕೆ ಶ್ರಮಿಸುವವೆ. [illegible]

ಚಿಕ್ಕಮಗಳೂರು ಗುರುವಾರ, 16 ಜೂನ್ 2022, ಶಿವಮೊಗ್ಗ
facebook.com/vijaykarnataka twitter.com/vijaykarnataka www.vijaykarnataka.com www.vijaykarnatakaepaper.com
ವಿಜಯ ಕರ್ನಾಟಕ

### ಬಿಇ ವಿದ್ಯಾರ್ಥಿಗಳ ಪ್ರವೇಶ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಶ್ರೀ ಹೇಳಿಕೆ

# ಶಿಕ್ಷಣದ ಜತೆಗೆ ಜೀವನ ಪಾಠ ಸೇರಲಿ

**ವಿಕ ಸುದ್ದಿಲೋಕ** ಚಿಕ್ಕಮಗಳೂರು

ಪುಸ್ತಕದ ಹೊರತಾಗಿ ಜೀವನ ಕಲಿಸುವ ಪಾಠವನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.


ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬುಧವಾರ ಏರ್ಪಡಿಸಿದ್ದ ಪ್ರಥಮ ವರ್ಷದ ಬಿಇ ವಿದ್ಯಾರ್ಥಿಗಳ ಪ್ರವೇಶ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ಮಕ್ಕಳ ಭವಿಷ್ಯದ ಚಿಂತೆ ಎಲ್ಲ ಪೋಷಕರಿಗಿದ್ದು ಉನ್ನತ ಹುದ್ದೆ ಸೇರುವ ಮೂಲಕ ಅವರ ಮನಸ್ಸು ಸಂತೋಷಪಡಿಸಿ. ಅವಕಾಶ ವಂಚಿತರಾಗದೆ ಸಮಯೋಚಿತವಾಗಿ ಮುಂದೆ ಬಂದು ಸಾಧನೆ ಮಾಡಿ ಎಂದರು.

ರಾಜೀವ್‌ಗಾಂಧಿ ಆರೋಗ್ಯ ವಿವಿ ಮಾಜಿ ನಿರ್ದೇಶಕ ಡಾ.ಕೆ.ಪಿ.ಪುತ್ತೂರಾಯ ಮಾತನಾಡಿ, ವಿದ್ಯಾರ್ಥಿಗಳು ಅಭ್ಯಾಸವನ್ನು ತಪಸ್ಸಿನಂತೆ ಅಳವಡಿಸಿಕೊಂಡರೆ ಸಾಧನೆ ಸಾಧ್ಯ ಎಂದರು.

ಶಾಸಕ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಮಾತನಾಡಿ, ವಿದ್ಯಾರ್ಥಿಗಳು ಹೆಚ್ಚಿನ ಜ್ಞಾನ ಸಂಪಾದಿಸಿ ಅತ್ಯುತ್ತಮ ವ್ಯಕ್ತಿಯಾಗಿ ಸಮಾಜದಲ್ಲಿ ಹೆಸರು ಪಡೆಯಿರಿ ಎಂದರು. ರಾಜ್ಯಸಭೆ ಸದಸ್ಯ ಜಗ್ಗೇಶ್ ಮಾತನಾಡಿ, ನಾವುಗಳು ಪಶು ಪಕ್ಷಿ ಆಗುವ ಬದಲು ಮನುಷ್ಯರಾಗಿ ಹುಟ್ಟಿರುವುದು ನಮ್ಮ ಪುಣ್ಯ. ವಿದ್ಯಾರ್ಥಿ ಜೀವನದಲ್ಲಿ ಉತ್ತಮ ನಡವಳಿಕೆ ಅಳವಡಿಸಿಕೊಂಡು ಗುರಿ ಸಾಧಿಸಬೇಕು ಎಂದು ಹೇಳಿದರು.

ಜಿ.ಪಂ.ಸಿಇಒ ಜಿ.ಪ್ರಭು ಮಾತನಾಡಿದರು. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶೃಂಗೇರಿ ಶಾಖೆಯ ಶ್ರೀ ಗುಣನಾಥ ಸ್ವಾಮೀಜಿ, ಶಾಸಕ ಎಂ.ಕೆ.ಪ್ರಾಣೇಶ್, ಡಾ.ಸಿ.ಕೆ. ಸುಬ್ಬರಾಯ, ಕೆ.ಮೋಹನ್ ಇದ್ದರು.

ಪಂಚಮಿ ತಂಡ ಪ್ರಾರ್ಥಿಸಿ, ಪ್ರಾಂಶುಪಾಲ ಡಾ. ಸಿ.ಟಿ. ಜಯದೇವ ಸ್ವಾಗತಿಸಿದರು. ಅಂಜಲಿ ನಿರೂಪಿಸಿ, ಡಾ..ಎನ್.ಡಿ .ದಿನೇಶ್ ವಂದಿಸಿದರು.



ಚಿಕ್ಕಮಗಳೂರಿನ ಎಐಟಿಯಲ್ಲಿ ಏರ್ಪಡಿಸಿದ್ದ ಇಂಡಕ್ಷನ್ ಕಾರ್ಯಕ್ರಮವನ್ನು ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

# ವಿದ್ಯೆಗಿಂತ ಮಿಗಿಲಾದ ಶಕ್ತಿ ಬೇರೊಂದಿಲ್ಲ

**ವಿಕ ಸುದ್ದಿಲೋಕ** ಮೂಡಿಗೆರೆ

ವಿದ್ಯೆ ಯಾರಿಂದಲೂ ಕದಿಯಲಾರದ ವಸ್ತು. ವಿದ್ಯೆ ಒಲಿಸಿಕೊಂಡರೆ ಸಮಾಜದಲ್ಲಿ ಬದುಕುವ ಸಾಮರ್ಥ್ಯ ಹೊಂದಲು ಸಾಧ್ಯವಿದೆ ಎಂದು ಆದಿಚುಂಚನಗಿರಿಯ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಅವರು ಬುಧವಾರ ಪಟ್ಟಣದ ಬಿಜಿಎಸ್ ಶಾಲೆಯ ಆಡಿಟೋರಿಯಂ ಕೊಠಡಿ ಉದ್ಘಾಟಿಸಿ ಮಾತನಾಡಿದರು. ಶಿಕ್ಷಕರು ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಿಸಲು ಶಕ್ತಿ ಮೀರಿ ಶ್ರಮಿಸಬೇಕು ಎಂದರು.

ಶೃಂಗೇರಿ ಮಠದ ಶ್ರೀ ಗುಣನಾಥ ಸ್ವಾಮೀಜಿ ಮಾತನಾಡಿ, ಶಿಕ್ಷಣದ ಗುಣಮಟ್ಟ ಕಾಪಾಡಿಕೊಂಡರೆ ವಿದ್ಯಾರ್ಥಿ ಉತ್ತಮ ಸೇವಾ ಮನೋಭಾವನೆಯಿಂದ ದೇಶಕ್ಕೆ ಮಾದರಿಯಾಗುತ್ತಾರೆ ಎಂದರು.

ಬಿಜಿಎಸ್ ಪ್ರೌಢಶಾಲೆ ಪ್ರಾಚಾರ್ಯ ಮಂಜುನಾಥ್ ಪ್ರಸಾದ್ ಮಾತನಾಡಿದರು. ಕಾಲೇಜು ಪ್ರಾಂಶುಪಾಲ ಸಂದೇಶ್, ಎನ್.ಎಲ್. ಸುಂದರೇಶ್ವರ್, ಎನ್.ಎಲ್.ಪುಣ್ಯಮೂರ್ತಿ, ಹಳೇಕೋಟೆ ರಮೇಶ್, ಎಂ.ಡಿ.ಜಯಪಾಲ್, ಹಳಸೆ ಶಿವಣ್ಣ, ಕೆ ಎಚ್.ವೆಂಕಟೇಶ್, ಬಿದರಹಳ್ಳಿ ಜಯರಾಮ್, ಗೌಡಹಳ್ಳಿ ದಿವಾಕರ್ ಉಪಸ್ಥಿತರಿದ್ದರು.


ಮೂಡಿಗೆರೆ ಬಿಜಿಎಸ್ ಶಾಲೆಯ ಆಡಿಟೋರಿಯಮ್ ಕೊಠಡಿಯನ್ನು ಆದಿಚುಂಚನಗಿರಿಯ ಶ್ರೀ ನಿರ್ಮಲಾ ನಂದನಾಥ ಸ್ವಾಮೀಜಿ ಉದ್ಘಾಟಿಸಿ ಮಾತನಾಡಿದರು.

# ಬುಲ್ಡೋಜರ್ ಎದುರು ನಿಂತರೆ ಚುನಾವಣೆಯಲ್ಲಿ ತಕ್ಕಪಾಠ

**ವಿಕ ಸುದ್ದಿಲೋಕ** ಚಿಕ್ಕಮಗಳೂರು

ಕಾಂಗ್ರೆಸ್ ನೀತಿ ಮತಾಂತರ ಗಳು, ಅಕ್ರಮ ಗೋಹತ್ಯೆ ಮಾಡುವವರು, ಭ್ರಷ್ಟಾಚಾರಿಗಳ ಪರವಾಗಿ ನಿಲ್ಲುವುದು ಅಂತಾ ಹೇಳಲಿ. ಅವರು ಬುಲ್ಡೋಜರ್ ಎದುರುಗಡೆ ನಿಂತರೆ ಉತ್ತರ ಪ್ರದೇಶದಲ್ಲಿ ಹೇಗೆ ಠೇವಣಿ ನಷ್ಟವಾಗಿದೆಯೋ ಅದು ಇಲ್ಲಿಯೂ ಆಗುತ್ತದೆ ಎಂದು ಶಾಸಕ ಸಿ.ಟಿ.ರವಿ ಹೇಳಿದರು.



ಬುಲ್ಡೋಜರ್ ಹತ್ತಿಸಿದರೆ ನಾನೇ ಹೋಗಿ ಅದರಡಿ ಮಲಗ್ತೀನಿ ಎಂಬ ಡಿ.ಕೆ ಶಿವಕುಮಾರ್ ಹೇಳಿಕೆಗೆ ಬುಧವಾರ ನಗರದಲ್ಲಿ ತಿರುಗೇಟು ನೀಡಿದರು.

ಕಾಂಗ್ರೆಸ್ ಸ್ವಾತಂತ್ರ್ಯ ಪೂರ್ವದ ಯಾವ ನಿಲುವುಗಳನ್ನೂ ಉಳಿಸಿಕೊಂಡಿಲ್ಲ. ಮಹಾತ್ಮ ಗಾಂಧಿ ಮತಾಂತರ, ಗೋಹತ್ಯೆಯ ವಿರುದ್ಧ ಇದ್ದರು. ಇವತ್ತಿನ ಕಾಂಗ್ರೆಸ್ ಅಕ್ರಮ ಗೋಹತ್ಯೆ ಪರ. [illegible] ಕೆಲಸವನ್ನು ಮಾಡುತ್ತಿದೆ ಎಂದರು.

[illegible]

ಇದೇ ವೇಳೆ [illegible] ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಇಂದು ಹುಟ್ಟೂರಿಗೆ ಸೈನಿಕನ ಪಾರ್ಥಿವ ಶರೀರ

**ವಿಕ ಸುದ್ದಿಲೋಕ** ಬಾಳೆಹೊನ್ನೂರು



ತನ್ನೂರಿನಿಂದ ಮರಳಿ ಕರ್ತವ್ಯಕ್ಕೆಂದು ಗುಜರಾತ್‌ಗೆ ತೆರಳಿ ಬೇಕಾಗಿದ್ದ ಚಿಕ್ಕಮಗಳೂರು [illegible] ಬಳಿ ಮುಸಿಗದ್ದೆಯ ಸೈನಿಕ ಗಣೇಶ್ ಇತ್ತೀಚೆಗೆ ಬಿಹಾರದ ಕಿಶನ್‌ಗಂಜ್ ಬಳಿ ಶವವಾಗಿ ಪತ್ತೆಯಾಗಿದ್ದು, ಪಾರ್ಥಿವ ಶರೀರ ಬುಧವಾರ ಬೆಂಗಳೂರಿನಿಂದ ಚಿಕ್ಕಮಗಳೂರಿಗೆ ತಂದಿದ್ದು, ಸಾರ್ವಜನಿಕ ಆಸ್ಪತ್ರೆಯಲ್ಲಿರಿಸಲಾಗಿದೆ. ಗುರುವಾರ ಬೆಳಗ್ಗೆ ಒಂಬತ್ತು ಗಂಟೆಗೆ ಶೃಂಗೇರಿ ಕ್ಷೇತ್ರದ ಗಡಿ ಊರಾದ ಹುಣಸೆಹಳ್ಳಗೆ ಪಾರ್ಥಿವ ಶರೀರ ಆಗಮಿಸಲಿದ್ದು, ಮೆರವಣಿಗೆಯಲ್ಲಿ [illegible] ಸಂಗಮೇಶ್ವರ ಪೇಟೆಯಲ್ಲಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಮಾಡಿ ಕೊಡಲಾಗಿದೆ. ನಂತರ ವಿವಿಧ ಗಣ್ಯರು, ಅಧಿಕಾರಿಗಳ ಸಮ್ಮುಖದಲ್ಲಿ ಮುಸಿಗದ್ದೆಗೆ [illegible] ಸರಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಮೂಲಗಳು [illegible]

ನಿರ್ಮಲಾನಂದನಾಥ ಶ್ರೀ ಅಭಿಮತ | ಎಐಟಿಯಲ್ಲಿ ಪ್ರಥಮ ವರ್ಷದ ಬಿಇ ತರಗತಿ ಪ್ರವೇಶ ಕಾರ್ಯಕ್ರಮ

# ಶಿಕ್ಷಣದ ಜತೆ ಬದುಕುವ ಕಲೆ ತಿಳಿಸುವ ಪಾಠವೂ ಮುಖ್ಯ

ವಿಜಯವಾಣಿ ಸುದ್ದಿಜಾಲ ಚಿಕ್ಕಮಗಳೂರು

ವ್ಯಾಸಗಳು ಮಳೆಗಾಲದಂತೆ. ಶಕ್ತಿ ಇರುವಾಗ ಸದ್ಬಳಕೆ ಮಾಡಿಕೊಂಡು ಗುರಿ ಸಾಧಿಸಬೇಕು. ದ್ಯಾರ್ಥಿಗಳು ಪುಸ್ತಕದ ಹೊರತಾಗಿ ಬದುಕುವ ಕಲೆ ತಿಳಿಸಿಕೊಡುವ ಪಾಠವನ್ನು ಳವಡಿಸಿಕೊಳ್ಳಬೇಕು ಎಂದು ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನದ ಪೀಠಾಧಿಪತಿ ಶ್ರೀ ಡಾ. ರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ 2021-22ನೇ ಸಾಲಿನ ಪ್ರಥಮ ವರ್ಷದ ಬಿಇ ತರಗತಿಗಳ ಎರಡನೇ ಪ್ರವೇಶ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದರು.

**ಗುರಿ ಸಾಧನೆಗಾಗಿ ಹೆಚ್ಚಿನ ಶ್ರಮ, ಏಕಾಗ್ರತೆ ಅಗತ್ಯ**

ಪಾಲಕರ ಭವಿಷ್ಯ, ಭರವಸೆ ನೀವುಗಳೇ. ನಿಮಗೆ ಜನ್ಮ ನೀಡಿದ್ದಕ್ಕೆ ಉನ್ನತ ಕೆಲಸದಲ್ಲಿದ್ದು ಅವರನ್ನು ಸಂತೋಷಪಡಿಸಿ. ಯಾವಾಗಲೂ ಅವಕಾಶ ವಂಚಿತರಾಗದೆ ಸಮಯೋಚಿತವಾಗಿ ಂದೆ ಬಂದು ಸಾಧನೆಗಳನ್ನು ಮಾಡಿ ಎಂದರು.

ಶಾಸಕ ಸಿ.ಟಿ.ರವಿ ಮಾತನಾಡಿ, ವಿದ್ಯಾರ್ಥಿಗಳು ಏಕಾಗ್ರತೆ ಸಾಧಿಸಬೇಕು. ನೀವು ಪಡೆಯುವ ಜ್ಞಾನ ಅಕ್ಷಯಪಾತ್ರೆ ಇದ್ದಂತೆ. ಹಾಗಾಗಿ ಹೆಚ್ಚಿನ ಜ್ಞಾನ ಸಂಪಾದಿಸಿ ಅತ್ಯುತ್ತಮ ವ್ಯಕ್ತಿಯಾಗಿ ಜದಲ್ಲಿ ಹೆಸರು ಪಡೆಯಿರಿ ಎಂದು ಹೇಳಿದರು.

ರಾಜ್ಯಸಭಾ ಸದಸ್ಯ ಜಗ್ಗೇಶ್ ಮಾತನಾಡಿ, ನಾವು ಪಶು, ಪಕ್ಷಿಗಳಾಗುವ ಬದಲು ಮನುಷ್ಯರಾಗಿ ದ್ದು ನಮ್ಮ ಪುಣ್ಯ. ವಿದ್ಯಾರ್ಥಿಗಳಾದ ನಿಮ್ಮನ್ನು ಈ ಭೂಮಿಗೆ ಪರಿಚಯಿಸಿದ ಪಾಲಕರ ಕನಸು ಮಾಡಬೇಕು. ಬಾಹ್ಯದಲ್ಲಿರುವುದು ಮಾಯೆ. ಒಂದು ದಿನ ಇದ್ದಿದ್ದು ಇನ್ನೊಂದು ದಿನ ಇರುವುದಿಲ್ಲ. ಶ್ರೀ ಜೀವನದಲ್ಲಿ ತುಂಬ ಜವಾಬ್ದಾರಿ ಇರುತ್ತದೆ. ನಾನು ಹೀಗೆಯೇ ಆಗುತ್ತೇನೆ ಎನ್ನುವ ನಿರ್ಧಾರ ಳ್ಳಿ ಎಂದು ಸಲಹೆ ನೀಡಿದರು. ಶ್ರೀ ಆದಿಚುಂಚನಗಿರಿ ಶೃಂಗೇರಿ ಶಾಖಾಮಠದ ಶ್ರೀ ಗುಣನಾಥ ಜಿ, ಪ್ರಾಚಾರ್ಯ ಡಾ. ಸಿ.ಟಿ.ಜಯದೇವ, ಕುಲಸಚಿವ ಡಾ. ಸಿ.ಕೆ.ಸುಬ್ಬರಾಯ, ಆಡಳಿತ ಸದಸ್ಯರಾದ ಕೆ.ಮೋಹನ್, ಪ್ರಾಧ್ಯಾಪಕರಾದ ಬಿ.ವಿ.ಅಂಜಲಿ, ಡಾ. ಎನ್.ವಿ ದಿನೇಶ್ ಇದ್ದರು.




ವಿಜಯವಾಣಿ ಚಿತ್ರ

ಚಿಕ್ಕಮಗಳೂರಿನ ಎಐಟಿಯಲ್ಲಿ ಆಯೋಜಿಸಿದ್ದ 2021-22ನೇ ಸಾಲಿನ ಪ್ರಥಮ ವರ್ಷದ ಬಿಇ ತರಗತಿಗಳ ಪ್ರವೇಶ ಕಾರ್ಯಕ್ರಮವನ್ನು ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಶ್ರೀ ಗುಣನಾಥ ಸ್ವಾಮೀಜಿ, ಡಾ. ಪುತ್ತೂರಾಯ, ಜಗ್ಗೇಶ್, ಸಿ.ಟಿ.ರವಿ ಇತರರಿದ್ದರು.

> ಅಮೆರಿಕ ಜಗತ್ತಿಗೇ ಮಾದರಿ ರಾಷ್ಟ್ರವಾಗಿರುವುದು ಎರಡು ಮುಖ್ಯ ಕಾರಣದಿಂದ. ಅಂದರೆ ಆಧುನಿಕ ಸೇವಾ ಮನೋಭಾವ ಮತ್ತು ನೂತನ ತಂತ್ರಜ್ಞಾನದಲ್ಲಿ ಆಗುತ್ತಿರುವ ಆವಿಷ್ಕಾರಗಳ ಅಳವಡಿಕೆ. ನಮ್ಮ ದೇಶದ ಯುವಪೀಳಿಗೆ ಪ್ರಸ್ತುತ ವಿಶ್ವವನ್ನು ಆಳುವ ತಂತ್ರಜ್ಞಾನದ ಕಡೆ ವಾಲಬೇಕು. ವಿದ್ಯಾರ್ಥಿಗಳಿಗೆ ಶಿಕ್ಷಣ ಮಾತ್ರವಲ್ಲದೆ ಬಾಹ್ಯ ಪ್ರಪಂಚದ ಅನುಭವ ಮತ್ತು ಜ್ಞಾನ ಅತ್ಯವಶ್ಯ.
>
> | ಜಿ.ಪ್ರಭು ಜಿಪಂ ಸಿಇಒ

> ವಿದ್ಯಾರ್ಥಿಗಳು ಅವರವರ ಮನೆಯ ನಂದಾದೀಪಗಳು. ಹೆತ್ತವರ ಕನಸುಗಳು ಮತ್ತು ಈ ಸಂಸ್ಥೆಯ ಸೊಬಗು, ಸೌಂದರ್ಯ, ಸಮಾಜದ ಆಸ್ತಿ, ದೇಶದ ಭರವಸೆ ಮತ್ತು ಭವಿಷ್ಯ. ಮುಂದಿನ ನಾಲ್ಕರಿಂದ ಆರು ವರ್ಷಗಳ ಅಭ್ಯಾಸವನ್ನು ತಪಸ್ಸು ಮತ್ತು ತ್ಯಾಗದಂತೆ ಅಳವಡಿಸಿಕೊಂಡರೆ ಸಾಧನೆಯಾಗುತ್ತದೆ. ಎಲ್ಲರೂ ಅಸಾಮಾನ್ಯರಾಗಬೇಕಾದರೆ ಒಳ್ಳೆಯ ಆರೋಗ್ಯ, ಏಕಾಗ್ರತೆ, ತ್ಯಾಗ, ಕನಸುಗಳು ಮತ್ತು ಅದರ ಸಾಕಾರ, ಕಾರ್ಯತಂತ್ರ, ತಾಳ್ಮೆ, ಜಾಣ್ಮೆ, ಆತ್ಮವಿಶ್ವಾಸ ಬೇಕು.
>
> | ಡಾ. ಕೆ.ಪಿ.ಪುತ್ತೂರಾಯ
> ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಮಾಜಿ ನಿರ್ದೇಶಕ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI > SHIVAMOGGA
ಗುರುವಾರ 16 ಜೂನ್ 2022
16 JUNE 2022
5

Scanned with Oken Scanner

ಸವಾದಿ ಅವಹೇಳನ ? ಹಿಂಸಾತ್ಮಕ
ತನೆಯಲ್ಲಿ ಭಾಗಿಯಾಗಿದ್ದ
ಹೆಚ್ಚು ಮಂದಿ ಬಂಧನ
...: ಪ್ರವಾದಿ ಮೊಹಮ್ಮದ್
ವಿರುದ್ಧ ಬಿಜೆಪಿ ಮಾಜಿ ವಕ್ತಾರೆ
...ರ್ಮಾ ಮತ್ತು ನವೀನ್ ಕುಮಾರ್
ಜಿಂದಾಲ್ ಅವಹೇಳನಕಾರಿ ಹೇಳಿಕೆ ಖಂಡಿಸಿ,
ವಿವಿಧೆಡೆ ನಡೆದ ಹಿಂಸಾತ್ಮಕ ಪ್ರತಿಭಟನೆಯಲ್ಲಿ


# ಗಿರಿವಾಣಿ

...ದೇಶಿಕ ದಿನ ಪತ್ರಿಕೆ

14-06-2022 ಮಂಗಳವಾರ

R.S.1.50/- KA/SK/CKM-013/19-21


## ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಪದಕ ಪ್ರಧಾನ ಸಮಾರಂಭ



ಚಿಕ್ಕಮಗಳೂರು, ಜೂನ್ 13: ನಗರದ ಪ್ರತಿಷ್ಠಿತ ಆದಿಚುಂಚನ ಗಿರಿ ತಾಂತ್ರಿಕ ಮಹಾವಿದ್ಯಾಲಯವು ಜೂನ್ 14 ರಿಂದ 18 ರವರೆಗೆ ಮಹಾವಿದ್ಯಾಲಯದ ಆವರಣದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಟಿ.ಜಯದೇವ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಜೂನ್ 14 ರಂದು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಸಾಂಪ್ರದಾಯಿಕ ಉಡುಗೆ ದಿನವನ್ನು ಆಚರಿಸಲಾಗುತ್ತಿದೆ. ಜೂ.15 ರಂದು ಮೊದಲ ವರ್ಷದ ಎರಡನೇ ಸೆಮಿಸ್ಟರ್ ವಿದ್ಯಾರ್ಥಿ ಗಳಿಗೆ ಇಂಡಕ್ಷನ್ ಪ್ರೋಗ್ರಾಂ-2 ಏರ್ಪಡಿಸಲಾಗಿದೆ. ಜೂ.16 ರಂದು ಅಂತಿಮ ವರ್ಷದ ವಿದ್ಯಾರ್ಥಿಗಳ ಪದವಿ ಪ್ರಧಾನ ಸಮಾರಂಭವನ್ನು ಏರ್ಪಡಿಸಲಾಗಿದೆ. ಎರಡು ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ವಹಿಸಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಕಳೆದ ವರ್ಷ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದ ವತಿಯಿಂದ ಜರುಗಿದ ಅಂತಿಮ ವರ್ಷದ ಪರೀ ಕ್ಷೆಗಳಲ್ಲಿ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿ ಗಳಿಗೆ ಸಂಸ್ಥೆಯ ವತಿಯಿಂದ ಚಿನ್ನದ ಪದಕಗಳನ್ನು ಪ್ರಧಾನ ಮಾಡಲಾಗು ವುದು.

ಜೂ.17 ಹಾಗೂ 18 ರಂದು ಮಹಾವಿದ್ಯಾಲಯದ ಸಾಂಸ್ಕೃತಿಕ ಉತ್ಸವ ಚುಂಚನ ಏರ್ಪಡಿಸಲಾಗಿದೆ. 17 ರಂದು ಬೆಳಗ್ಗೆ 9.15ಕ್ಕೆ ಚುಂಚನ ಉದ್ಘಾಟನೆಯಾಗಲಿದೆ. ಸಂಜೆ 4.30 ಕ್ಕೆ ಬಹುಮಾನ ವಿತರಣಾ ಸಮಾ ರಂಭ ನಡೆಯಲಿದೆ. ಸಂಜೆ 6 ಗಂಟೆ ಗೆ ಮಹಾವಿದ್ಯಾಲಯದ ವಿದ್ಯಾರ್ಥಿ ಗಳಿಂದ ಫ್ಯಾಷನ್ ಶೋ ಏರ್ಪಡಿ ಸಲಾಗಿದೆ.

ಜೂ.18 ರಂದು ಸಂಜೆ 4.30ಕ್ಕೆ ಸಾಂಸ್ಕೃತಿಕ ಉತ್ಸವ ಚುಂಚನ ಸಮಾರೋಪ ಸಮಾರಂಭ ನಡೆಯಲಿದೆ. ಸಮಾರಂಭದಲ್ಲಿ ವಿವಿಧ ಸಾಂ ಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿ ಸಲಾಗುವುದು. ಸಂಜೆ 6 ಗಂಟೆಗೆ ಮಹಾವಿದ್ಯಾಲಯದ ವಿದ್ಯಾರ್ಥಿಗ ಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ. ಹಾಗೂ 'ನಾಲ್ಕನೇ ಯ ಆಯಾಮ' ಚಲನಚಿತ್ರ ತಂಡದ ನಿರ್ದೇಶಕರು, ನಟ, ನಟಿಯರು ಭಾಗವಹಿಸಲಿದ್ದಾರೆ ಎಂದು ಡಾ. ಜಯದೇವ್ ತಿಳಿಸಿದರು.

## ಬೀರೂರು : ಉತ್ತಮ ಮಳೆ , ಬಿತ್ತನೆ ಮಾಡಿದ ರೈತರಲ್ಲಿ ಮಂದಹಾಸ

ಬೀರೂರು: ಸೋಮವಾರ ಮಧ್ಯಾಹ್ನ ಸುರಿದ ಉತ್ತಮ ಮಳೆಯಿಂದಾಗಿ ಬೀರೂರು ಸುತ್ತಮುತ್ತಲ ರೈತಾಪಿ ವರ್ಗ ಸಂತಸ ಗೊಂಡು ಅವರ ಮೊಗದಲ್ಲಿ ಮಂದಹಾಸ ಮೂಡಿದೆ. ಕಳೆದ ವಾರದ ಹಿಂದಷ್ಟೆ ಮುಂ ಗಾರು ಪ್ರವೇಶ [illegible] ಮುಂಗಾರು ಹಂಗಾಮಿನ ಈ ಬೆಳೆಗಳಿಗಾಗಿ ರೈತರು ತಮ್ಮ ಜಮೀನುಗಳನ್ನು ಹದ ಮಾಡಿ ಕಳೆದ ವಾರ ಸುರಿದ ಮಳೆಗೆ ಬಿತ್ತನೆ ಮಾಡಿದ್ದರು. ನಂತರದ ದಿನಗಳಲ್ಲಿ ಮಳೆ ಕೈಕೊಟ್ಟಿದ್ದು ರೈತರನ್ನು ಕಂಗಾಲಾಗಿ ಮಾಡಿತ್ತು. ಆದರೆ ಸೋಮವಾರ ಮಧ್ಯಾಹ್ನ 2.30ರಿಂದ 6.30ರವರೆಗೆ ಸುರಿದ ಮಳೆ ರೈತರು ಬಿತ್ತನೆ ಮಾಡಿದ್ದ ಬೆಳೆಗಳಿಗೆ ವರದಾನವಾಗಿದೆ.

# ಎಐಟಿಯಲ್ಲಿ 14ರಿಂದ ವಿವಿಧ ಕಾರ್ಯಕ್ರಮ

## ಜೂ.17-18 ರಂದು ಸಾಂಸ್ಕೃತಿಕ ಉತ್ಸವ ಚುಂಚನ

ಮಗಳೂರು: ನಗರದ ಆದಿಚುಂಚನಗಿರಿ ತ್ರಿಕ ಮಹಾವಿದ್ಯಾಲಯದಲ್ಲಿ ಜೂ.14 ದ 18ರವರೆಗೆ ಚುಂಚನ ಸೇರಿದಂತೆ ಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮ್ಮಿಕೊಳ್ಳಲಾಗಿದೆ ಎಂದು ಎಐಟಿ ಪ್ರಿನ್ಸಿಪಾಲ್ .ಸಿ.ಟಿ.ಜಯದೇವ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಾತನಾಡಿ, ಜೂ.14ರಂದು ಅಂತಿಮ ರ್ಷದ ವಿದ್ಯಾರ್ಥಿಗಳಿಗೆ ಸಾಂಪ್ರದಾಯಿಕ ಡುಗೆ ದಿನವನ್ನು ಆಚರಿಸಲಾಗುತ್ತಿದೆ. 15 ರಂದು ಮೊದಲನೇ ವರ್ಷದ 2ನೇ ಸೆಮಿಷ್ಟರ್ ದ್ಯಾರ್ಥಿಗಳಿಗೆ ಕಾರ್ಯಕ್ರಮವೊಂದನ್ನು ಯೋಜಿಸಿದ್ದು, ಆದಿಚುಂಚನಗಿರಿ ಮಠದ ೀಠಾಧ್ಯಕ್ಷ ನಿರ್ಮಲಾನಂದನಾಥಸ್ವಾಮೀಜಿ ಾನ್ನಿಧ್ಯವಹಿಸುವರು. ಶೃಂಗೇರಿ ಶಾಖಾಮಠದ ಶ್ರೀ ಗುಣನಾಥಸ್ವಾಮೀಜಿ ಉಪಸ್ಥಿತರಿರುವರು. ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ನಿವೃತ್ತ ನಿರ್ದೇಶಕ ಪಿ.ಪುತ್ತುರಾಯ, ಜಿಲ್ಲಾಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಜಿ.ಪ್ರಭು, ಎಐಟಿ ಆಡಳಿತ ಮಂಡಳಿ ಸದಸ್ಯ ಡಾ.ಸಿ.ಕೆ. ಸುಬ್ಬರಾಯ ಭಾಗವಹಿಸುವರೆಂದರು.

ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಜೂ.16 ರಂದು ಪದವಿ ಪ್ರದಾನ ಸಮಾರಂಭ ರ್ಪಡಿಸಲಾಗಿದೆ. ಸಾನ್ನಿಧ್ಯವನ್ನು ಆದಿ ಚುಂಚನಗಿರಿ ಮಹಾಸಂಸ್ಥಾನದ ಪೀಠಾಧಿಪತಿ



ಶ್ರೀ ನಿರ್ಮಾಲಾನಂದನಾಥ ಸ್ವಾಮೀಜಿ ವಹಿಸುತ್ತಿದ್ದು, ಶ್ರೀ ಗುಣನಾಥಸ್ವಾಮೀಜಿ ಉಪಸ್ಥಿತ ರಿರುವರು. ಮೈಸೂರು ವಿಶ್ವ ವಿದ್ಯಾನಿಲಯದ ಉಪಕುಲಪತಿ ಡಾ.ಜಿ.ಹೇಮಂತ್‌ಕುಮಾರ್, ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಕಾರ್ಯನಿರ್ವಹಣಾಧಿಕಾರಿ ಡಾ.ಎನ್.ಎಸ್.ರಾಮೇಗೌಡ ಭಾಗವಹಿಸುತ್ತಿದ್ದು, ಅಂತಿಮ ವರ್ಷದ ಪರೀಕ್ಷೆಯಲ್ಲಿ ರ್‍ಯಾಂಕ್‌ಗಳಿಸಿದ 15 ಜನರಿಗೆ ಚಿನ್ನದ ಪದಕ ವಿತರಿಸಲಾಗುವುದು ಎಂದರು.

ಕಾಲೇಜಿನಲ್ಲಿ ಜೂ.17 ಮತ್ತು 18 ರಂದು ಸಾಂಸ್ಕೃತಿಕ ಉತ್ಸವ ಚುಂಚನ ಹಮ್ಮಿಕೊಳ್ಳಲಾಗಿದೆ. 17 ರಂದು ಬೆಳಿಗ್ಗೆ 9.15ಕ್ಕೆ ನಡೆಯುವ ಚುಂಚನದಲ್ಲಿ ಹಿರಿಯ ಉಪವಿಭಾಗಾಧಿಕಾರಿ ಡಾ.ಎಚ್.ಎಲ್.ನಾಗರಾಜ್ ಭಾಗವಹಿಸುವರು. ಎಐಟಿ ಆಡಳಿತ ಮಂಡಳಿ ಸದಸ್ಯ ಕೆ.ಮೋಹನ್, ನಿರ್ದೇಶಕ ಡಾ.ಸಿ.ಕೆ.ಸುಬ್ಬರಾಯ ಉಪಸ್ಥಿತರಿರುವರೆಂದರು.

ಅಂದು ಸಂಜೆ 4.30ಕ್ಕೆ ಬಹುಮಾನ ವಿತರಣಾ ಸಮಾರಂಭವಿದ್ದು, ಜಿಲ್ಲಾಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಪ್ರಭು, ಗಾಯಕ ವಾಸುಕಿವೈಭವ ಭಾಗವಹಿಸುವರು. ಡಾ.ಸಿ.ಕೆ. ಸುಬ್ಬರಾಯ ಉಪಸ್ಥಿತರಿರುತ್ತಿದ್ದು, ಸಂಜೆ 6 ಗಂಟೆಗೆ ಫ್ಯಾಶನ್ ಶೋ ಆಯೋಜಿಸಲಾಗಿದೆ ಎಂದು ಹೇಳಿದರು.

ಕಾಲೇಜಿನಲ್ಲಿ ಜೂ.18 ರಂದು ಸಂಜೆ 4.30ಕ್ಕೆ ಸಾಂಸ್ಕೃತಿಕ ಉತ್ಸವದ ಚುಂಚನ ಸಮಾರೋಪ ಸಮಾರಂಭ ನಡೆಯುವುದು. ಜಿಲ್ಲಾಧಿಕಾರಿ ಕೆ.ಎನ್.ರಮೇಶ್, ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ ಎಂ.ಎಚ್.ಅಕ್ಷಯ್, ಪಾಲ್ಗೊಳ್ಳುವರು. ಸಾಂಸ್ಕೃತಿಕ ಸ್ಪರ್ಧಾವಿಜೇತರಿಗೆ ಬಹುಮಾನ ವಿತರಿಸಲಾಗುವುದ. ಆಡಳಿತ ಮಂಡಳಿ ನಿರ್ದೇಶಕ ಡಾ.ಸಿ.ಕೆ.ಸುಬ್ಬರಾಯ ಉಪಸ್ಥಿತರಿರುವರು.

ಸಂಜೆ 6 ಗಂಟೆಗೆ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮನಡೆಯುತ್ತಿದ್ದು, ನಾಲ್ಕನೇಆಯಾಮ ಚಲನಚಿತ್ರ ತಂಡದ ನಿರ್ದೇಶಕ,ನಟ,ನಟಿಯರು ಭಾಗವಹಿಸುವರೆಂದು ತಿಳಿಸಿದರು.

ಕಳೆದೆರಡು ವರ್ಷಗಳಿಂದ ಕೊರೊನಾಸೋಂಕಿನ ಹಿನ್ನಲೆಯಲ್ಲಿ ವಿವಿಧ ಸಾಂಸ್ಕೃ ಕಾರ್ಯಕ್ರಮಗಳನ್ನು ಕೈಬಿಡಲಾಗಿತ್ತು. ಈ ವರ್ಷ ಮತ್ತೆ ಐದು ದಿನಗಳ ಕಾಲ ಸಾಂಸ್ಕೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

## ಕ್ರೀಡಾ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಚಿಕ್ಕಮಗಳೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಯಿಂದ ಕಳೆದ ಸಾಲಿನಲ್ಲಿ ಮಾಧ್ಯಮಿಕ, ಪ್ರೌಢಶಾಲಾ ವಿದ್ಯಾರ್ಥಿ ಕ್ರೀಡಾಪಟುಗಳಿಗೆ ವಾರ್ಷಿಕ ರೂ. 10 ಸಾವಿರದಂತೆ ಪ್ರೋತ್ಸಾಹಿತ ಕ್ರೀಡಾ ವಿದ್ಯಾರ್ಥಿವೇತನವನ್ನು ... ಕ್ರೀಡಾಪಟುಗಳಿಂದ ಅರ್ಜಿ

## ವಿಕಾಸ ತೀರ್ಥ ಬೈ

ಚಿಕ್ಕಮಗಳೂರು: ಭಾರತೀಯ ಜನತಾ ಪಾರ್ಟಿಯುವ ಮೋರ್ಚಾವತಿ ಯಿಂದ ಪ್ರಧಾನ ಮಂತ್ರಿ ನರೇಂದ್ರ

ಗೌಡ ವೃತ್ತದವರೆಗೂ ಸಾಗಲಿದ್ದು ಈ ಮಾರ್ಗದ ಜಾಥಾವನ್ನು ವಿಧಾನ ಪರಿಷತ್ ಸದಸ್ಯ ಎಂ.ಕೆ



Scanned with Oken Scanner

# ನಗರದಲ್ಲಿ ಇಂದು ಸತ್ಸಂಗ

**ಚಿಕ್ಕಮಗಳೂರು:** ನಗರದ ಜಿಲ್ಲಾ ಒಕ್ಕಲಿಗರ ಸಂಘದ ಸಮುದಾಯ ಭವನದಲ್ಲಿ ಜೂ.15 ಮತ್ತು 16ರಂದು ಸಂಜೆ 5.30ಕ್ಕೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥಸ್ವಾಮೀಜಿ ಸತ್ಸಂಗ ಕಾರ್ಯಕ್ರಮ ನೀಡಲು ಆಗಮಿಸಲಿದ್ದಾರೆಂದು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಟಿ.ರಾಜಶೇಖರ ತಿಳಿಸಿದ್ದಾರೆ.

ಗ್ರಾಮೀಣ ಪ್ರದೇಶಗಳಿಂದ ಭಕ್ತರು ಬಂದು ಹೋಗಲು ಅನುಕೂಲವಾಗುವಂತೆ ಬಸ್ಸಿನ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

Scanned with Oken Scanner